ಜನಶಕ್ತಿ


ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ



Blog: janashakthi.wordpress.com e-mail: js_weekly@yahoo.com

ಸಂಪುಟ 5 ಸಂಚಿಕೆ 22 ಮೇ 29, 2011 ರೂ. 5/- ಪುಟ 16



'ಒಂದು ದೀರ್ಘ ಮತ್ತು ಕಠಿಣ ಹೋರಾಟ ನಮ್ಮ ಮುಂದಿದೆ'

- ಪ್ರಕಾಶ್ ಕಾರಟ್

8



5

ಸಂವಿಧಾನಕ್ಕೆ ಅಪಚಾರ ತೊಲಗಲೇಬೇಕಿದೆ ಈ ಸರ್ಕಾರ



3

ಪೆಟ್ರೋಲ್ ಬೆಲೆ ಏರಿಕೆಗೆ ಖಂಡನೆ

ರಾಜ್ಯವ್ಯಾಪಿ

ಪ್ರತಿಭಟನೆ

ಉಪ ಚುನಾವಣೆ :

ಪ್ರತಿಫಲನಗೊಳ್ಳದ ಜನರ ಅತೃಪ್ತಿ ಕಾಂಗ್ರೆಸ್-ಜೆಡಿ(ಎಸ್) ಬರಿಗೈಯಲ್ಲಿ

3

ತಿಳಿಯಿರಿ ಯಾರು


ಮೇ ಡೇ ಹುತಾತ್ಮರು

ಈ ಬಾರಿಯ ಮೇ ದಿನಾಚರಣೆಯಂದು ಕಾರ್ಮಿಕರ ಕೈಯಲ್ಲಿ ಒಂದು ಸುಂದರವಾದ ಮತ್ತು ಅಷ್ಟೇ ಮಹತ್ವದ ಒಂದು ಪುಸ್ತಕ ಓಡಾಡುತ್ತಿತ್ತು. ಅದು 'ಮೇ ಡೇ ಹುತಾತ್ಮರ ಮಹಾನ್ ಗಾಥೆ' ಎಂಬ ಪುಸ್ತಕ. ಸಿಐಟಿಯು ನೇತಾರ ಡಾ. ಎಂ.ಕೆ.ಪಂಧೆಯವರು ಮೇ ದಿನದ ಹುತಾತ್ಮರ ಬಗೆಗೆ, ಆ ಮಹಾನ್ ಹೋರಾಟದ ಬಗೆಗೆ ಬರೆದ ಪುಸ್ತಕ. ಸಿಐಟಿಯು ಬೆಂಗಳೂರು ಜಿಲ್ಲಾ ಸಮಿತಿಯು ಹೊರ ತಂದಿರುವ ಈ ಪುಸ್ತ ಕ ಕಾರ್ಮಿಕರು, ಕಾರ್ಮಿಕ ಚಳುವಳಿಯ ಬಗೆಗೆ ಕಾಳಜಿ, ಪ್ರೀತಿಯುಳ್ಳ ಎಲ್ಲರೂ ಓದಬೇಕಾದ ಪುಸ್ತಕ. ಈ ಪುಸ್ತಕದ ಪರಿಚಯ ಪಂಧೆಯವರ ಮುನ್ನುಡಿಯ ಮಾತುಗಳಲ್ಲಿ....

ಎಂ.ಕೆ.ಪಂಧೆ

ಮೇ 1 ರಂದು ಇಡೀ ವಿಶ್ವದಾದ್ಯಂತ ಕಾರ್ಮಿಕರ ದಿನವನ್ನು ಆಚರಿಸಲಾಗುತ್ತದೆ. ಈ ಮೇ ದಿನಕ್ಕೆ ಮಹತ್ತರವಾದ ಚಾರಿತ್ರಿಕ ಮಹತ್ವವಿದೆ. ತತ್ಕಾರಣ ಅದೊಂದು ಅಂತರಾಷ್ಟ್ರೀಯ ಮಹತಿಯ ದಿನವಾಗಿದೆ. ಅಂದು ಪ್ರಪಂಚದಾದ್ಯಂತ ಕಾರ್ಮಿಕ ವರ್ಗದ ಐಕ್ಯತೆಯ ಉತ್ಸವವನ್ನು ಆಚರಿಸಲಾಗುತ್ತದೆ. ಆದರೆ ಇತ್ತೀಚೆಗೆ ಕಾರ್ಮಿಕ ವರ್ಗದ ಈ ಆಂದೋಲನ ತನ್ನ ಚಾರಿತ್ರಿಕ ಪ್ರಜ್ಞೆಯನ್ನು ಕಳೆದುಕೊಳ್ಳುತ್ತಿದೆ. ಪರಿಣಾಮವಾಗಿ, ಮೇ ದಿನದ ಕ್ರಾಂತಿಕಾರಿ ಸತ್ವ ಸಾರವನ್ನು ಮರೆತು ಕೇವಲ ಅದನ್ನೊಂದು ಕ್ರಿಯಾ ವಿಧಿಯೆಂಬಂತೆ ಔಪಚಾರಿಕವಾಗಿ ಮಾಡಿ ಮುಗಿಸುವ ಹೊಸ ಪ್ರವೃತ್ತಿಯೊಂದು ಕಾಣಿಸಿಕೊಳ್ಳುತ್ತಿದೆ. ಆಚರಣೆಯ ಸಂದರ್ಭದಲ್ಲಿ ವೇದಿಕೆಯ ಮೇಲೆ ಠೀವಿಯಿಂದ ನಿಂತು ಹೇಮಾರ್ಕೆಟ್ ಹುತಾತ್ಮರ ತ್ಯಾಗ, ಬಲಿದಾನಗಳನ್ನು ವೈಭವೀಕರಿಸಿ ಮಾತನಾಡಲಾಗುತ್ತಿದೆಯಾದರೂ ವಾಸ್ತವದಲ್ಲಿ ಅವರ ಕ್ರಾಂತಿಕಾರಿ ನೆಲೆ ನಿಲುವುಗಳನ್ನು ಅಲಕ್ಷಿಸಲಾಗುತ್ತಿದೆ. ದಿನಾಚರಣೆಯ ಸಂಭ್ರಮೋತ್ಸವಗಳಲ್ಲಿ ಭಾರೀ- ಭಾರೀ ಬಡಿವಾರಿಕೆಯ ಮಾತಾಡುವ ಕಾರ್ಮಿಕ ನಾಯಕರು ತಮ್ಮ ದೈನಂದಿನ ಬದುಕಿನಲ್ಲಿ ವರ್ಗ ಹೋರಾಟವನ್ನು ಬಲಿಷ್ಠಗೊಳಿಸಲು ಯಾವುದೇ ಮೂರ್ತ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ; ಬಂಡವಾಳಶಾಹಿಗಳ ದುರ್ದಾಳಿಗಳ ವಿರುದ್ಧ ಸಮಸ್ತ ಕಾರ್ಮಿಕ ವರ್ಗವನ್ನು ಅಣಿನೆರೆಸಲು ಯಾವುದೇ ಹೆಜ್ಜೆ ಇಡುತ್ತಿಲ್ಲ. ಹಾಗಾಗಿ, ಮೇ ದಿನಾಚರಣೆಯ ಉತ್ಸವಗಳು ತಮ್ಮ ಅರ್ಥವನ್ನೇ ಕಳೆದುಕೊಳ್ಳುತ್ತಿವೆ; ಉದ್ದೇಶವಿಹೀನ ಔಪಚಾರಿಕ ಆಚರಣೆಗಳಾಗಿ ಪರಿಣಮಿಸುತ್ತಿವೆ.

ಮೇ ದಿನವು ವಿಶ್ವದ ಎಲ್ಲ ಕಾರ್ಮಿಕ ವರ್ಗವನ್ನು ಏಕತ್ರಗೊಳಿಸಿ, ಬಂಡವಾಳಶಾಹಿಗಳ ಶೋಷಣೆಯ ವಿರುದ್ಧ ಹೋರಾಟಕ್ಕೆ ಇಳಿಸಿದ ಚರಿತ್ರಾರ್ಹ ದಿನ ಎಂಬುವುದರಲ್ಲಿ ಅನುಮಾನವಿಲ್ಲ. 'ವಿಶ್ವದ ಕಾರ್ಮಿಕರೆ, ಒಂದಾಗಿರಿ!' ಎಂಬ ರಣಕಹಳೆ ಊದಿ ಎಲ್ಲರನ್ನು ಒಗ್ಗೂಡಿಸುವಲ್ಲಿ ಮೇ ದಿನ ನಿರ್ವಹಿಸಿದ ಹಾಗೂ ನಿರ್ವಹಿಸುತ್ತಿರುವ ಪಾತ್ರದ ಪ್ರಚ್ಛನ್ನ ಶಕ್ತಿ ಅಪಾರವಾದದ್ದು. ಜಾಗತಿಕ ಕಾರ್ಮಿಕ ವರ್ಗವನ್ನು ಘನಿಷ್ಠವಾಗಿ ಬೆಸೆಯುವಲ್ಲಿ ಮೇ ದಿನವು ನೀಡಿದ ಕಾಣಿಕೆ ಅನುಪಮವಾದದ್ದು. ಅಂತೆಯೇ ಅದು



ಇಂದಿಗೂ ಪ್ರಪಂಚದ ಉದ್ದಗಲಕ್ಕೂ ಮಿಲಿಯಾಂತರ ಕಾರ್ಮಿಕರಿಗೆ ಸ್ಫೂರ್ತಿಯ ಸೆಲೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ಆ ದಿನದಂದು ವಿಶ್ವದ ಕಾರ್ಮಿಕರೆಲ್ಲಾ ಜಾಗತಿಕ ಬಂಡವಾಳಶಾಹಿಗಳ ಶೋಷಣೆಯ ಸಂಚಿನ ವಿರುದ್ಧ ತಮ್ಮ ಪ್ರತಿಭಟನಾತ್ಮಕ ಹೋರಾಟದ ಮೊನಚನ್ನು ತೀವ್ರಗೊಳಿಸಲು ಪ್ರತಿಜ್ಞೆಗೈಯ್ಯುತ್ತಿದ್ದಾರೆ. ಎಲ್ಲ ರಾಷ್ಟ್ರಗಳಲ್ಲಿಯೂ ಧನಿಕ ವರ್ಗವು ಕಾರ್ಮಿಕ ವರ್ಗದ ಮೇಲೆ ಹೇರಲು ಯತ್ನಿಸುತ್ತಿರುವ ಗುಲಾಮಗಿರಿಯ ಹೊಸ ರೂಪದ ವಿರುದ್ಧ ಟೊಂಕ ಕಟ್ಟಿನಿಲ್ಲಲು ಪ್ರೇರೇಪಿಸುತ್ತಿದೆ, ಮೇ ದಿನ.

ಆದರೆ ಜಗತ್ತಿನ ತುಂಬ ಕೆಲವು ಟ್ರೇಡ್ ಯೂನಿಯನ್‌ಗಳ ಧುರೀಣರು ಹೇಮಾರ್ಕೆಟ್ ಹುತಾತ್ಮರನ್ನು ಮೇ 1 ರಂದು ವೈಭವೀಕರಿಸಿ ಮಾತಾಡುತ್ತ, ಮೇ ದಿನದ ಜನಪ್ರೀಯತೆಯನ್ನು ತಮ್ಮ ಸ್ವಾರ್ಥಕ್ಕೆ ಬಳಸುತ್ತಿದ್ದಾರೆ. ಆ ಹುತಾತ್ಮರ ಧೀರ ಧೀಮಂತಿಕೆಯ ಮಾರ್ಗದಲ್ಲಿ ಧೈರ್ಯದ ಹೆಜ್ಜೆ ಹಾಕದೆ, ವರ್ಗ ಸಖ್ಯತೆಯ ಧೋರಣೆಗಳನ್ನು ಅನುಸರಿಸುತ್ತ, ಶೋಷಕರೊಂದಿಗೆ ಶಾಮೀಲಾಗುತ್ತಿದ್ದಾರೆ. ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ರಕ್ಷಿಸಲು ಮಹತ್ತರ ತ್ಯಾಗ ಮಾಡಿದ್ದ ಹೇ ಮಾರ್ಕೆಟ್ ಹುತಾತ್ಮರು, ತಮ್ಮ ತ್ಯಾಗ ಬಲಿದಾನಗಳನ್ನು ಮುಂದೊಂದು ದಿನ ಕಾರ್ಮಿಕ ವರ್ಗದ ನೇತಾರರೇ ಹೀಗೆ ದುರುಪಯೋಗಿಸಿಕೊಳ್ಳಬಹುದೆಂದು ಕನಸಿನಲ್ಲಿಯೂ ಕಂಡಿರಲಿಕ್ಕಿಲ್ಲ!

ಇಂಥ ಅನಪೇಕ್ಷಣೀಯ ಪ್ರವೃತ್ತಿಗಳ ಹೊರತಾಗಿಯೂ ಮೇ ದಿನವು ಅಂತರಾಷ್ಟ್ರೀಯ ಕಾರ್ಮಿಕ ವರ್ಗದ ಆಂದೋಲನದ ಅತ್ಯುತ್ತಮ ಪರಂಪರೆಗಳನ್ನು ನಿರಂತರವಾಗಿ ಮುನ್ನಡೆಸಿಕೊಂಡು ಬರುತ್ತಿದೆ. ಆದ್ದರಿಂದಲೇ ಹೇ ಮಾರ್ಕೆಟ್ ಹುತಾತ್ಮರ ತ್ಯಾಗ ಬಲಿದಾನಗಳ ಚಾರಿತ್ರಿಕ ಮಹತಿ ಮಹತ್ವಗಳನ್ನು ನಮ್ಮ ಕಾಲದ ಕಾರ್ಮಿಕರ ಮನೆ-ಮನಗಳಿಗೆ ತಲುಪಿಸುವುದು ಅತ್ಯಂತ ಮಹತ್ವದ ಕಾರ್ಯಭಾರವಾಗಿದೆ. ಅವರ ಹೋರಾಟದ ಹಿಂದಿನ ತಾತ್ವಿಕ ಪ್ರೇರಣೆಗಳನ್ನು ಜನಪ್ರಿಯಗೊಳಿಸುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಇತ್ತೀಚೆಗೆ ಕಾಣಿಸಿಕೊಳ್ಳುತ್ತಿರುವ ಲೇಬರ್ 'ಅರಿಸ್ಟಾಕ್ರಸಿಯ' ಧುರೀಣರ ವಿರುದ್ಧ ಸೆಟೆದೇಳಲು ಆ ಹತಾತ್ಮರ ಚೇತನಗಳು ಶಕ್ತಿಯ ಸೆಲೆಯಾಗಿಯೂ ಕೆಲಸ ಮಾಡಬಲ್ಲವು. ಹಾಗಾಗಿ ನಾವು ಆ ಅಮರಚೇತನಗಳ ಅಭೀಪ್ಸೆ ಈಡೇರಿಸಲು, ಮಾಲಿಕರೊಂದಿಗೆ ರಾಜೀ ಸಂಧಾನದ ಮಾರ್ಗ ಅನುಸರಿಸುವವರ ವಿರುದ್ಧ ಸೆಣಸಲು ಸಿದ್ಧರಾಗಬೇಕಿದೆ. ಹೀಗೆ ಮಾಲಿಕರೊಂದಿಗೆ ಕೈಗೂಡಿಸುವವರು, ಹೇ ಮಾರ್ಕೆಟ್ ಪ್ರಕರಣದ ಮೊಕದ್ದಮೆಯ ಸಂದರ್ಭದಲ್ಲಿ ಶಿಕ್ಷೆ ತಪ್ಪಿಸಿಕೊಳ್ಳಲು ಮಾಫಿ ಸಾಕ್ಷಿಗಳಾಗಿ ನ್ಯಾಯಾಲಯದಲ್ಲಿ ಕಾರ್ಮಿಕರ ವಿರುದ್ಧ ನಿಂತು, ಸರ್ಕಾರದ ಪರವಾಗಿ ಹೇಳಿಕೆ ನೀಡಿದ್ದ ಸ್ವಜನ ದ್ರೋಹಿಗಳ ಸಂತಾನವಾಗಿದ್ದಾರೆ ಎಂದು ಹೇಳಿದರೆ ತಪ್ಪಾಗದು. ಇವರು ಅಂಥ ಆತ್ಮವಂಚನೆಯ ಪರಂಪರೆಗಳನ್ನು ಮುಂದುವರೆಸಿಕೊಂಡು ಬರುತ್ತಿದ್ದಾರೆ. ಇಂದು ಭಾರತವನ್ನೊಳಗೊಂಡು ಅನೇಕ ರಾಷ್ಟ್ರಗಳಲ್ಲಿ ಫೈವ್ ಸ್ಟಾರ್ ಟ್ರೇಡ್ ಯೂನಿಯನ್ ಸಂಸ್ಕೃತಿ ಆವಿಷ್ಕರಿಸುತ್ತಿದೆ. ಇಂಥ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವ ಮಹನೀಯರು ಹೇ ಮಾರ್ಕೆಟ್ ಹುತಾತ್ಮರ ಮಹಾನ್ ಪರಂಪರೆಯನ್ನು ಮುಂದೊಯ್ಯಲಾರರು. ಮೇಲಾಗಿ, ಅವರಿಗೆ ಆ ಹಕ್ಕೂ ಇರುವುದಿಲ್ಲ. ಮೇ ದಿನದಂದು ನಡೆಯುವ ಬೃಹತ್ ರ್‍ಯಾಲಿಗಳಲ್ಲಿ ಇಂಥ ನಾಯಕರು ಎಷ್ಟೇ 'ಬೆಂಕಿ' ಉಗುಳುವಂಥ ಭಾಷಣಗಳನ್ನು ಮಾಡಿದರೂ ಅವು ಅವರ ವಾಸ್ತವ ನಡವಳಿಕೆಗಳನ್ನು ಮುಚ್ಚಿಕೊಳ್ಳಲು ಹೂಡುವ ಹುನ್ನಾರಗಳಾಗಿರುತ್ತದೆಯೇ ಹೊರತು ಹುತಾತ್ಮರ ಬಗೆಗಿನ ನೈಜ ಕಾಳಜಿಗೆ ಸಂಕೇತಗಳಾಗಿರುವುದಿಲ್ಲ.

ಅಮೇರಿಕೆಯ ಟ್ರೇಡ್ ಯೂನಿಯನ್ ಆಂದೋಲನದ ಚರಿತ್ರೆಯಲ್ಲಿ ಹೇ ಮಾರ್ಕೆಟ್ ಪ್ರಕರಣ ಒಂದು ಆಕಸ್ಮಿಕ ಯಃಕಶ್ಚಿತ ಘಟನೆಯೇನಾಗಿರಲಿಲ್ಲ. ಅದಕ್ಕಿಂತಲೂ ಹಿಂದೆ ಅಮೇರಿಕೆಯಲ್ಲಿ ಭಾರೀ ಸಮರಶೀಲ ಟ್ರೇಡ್ ಯೂನಿಯನ್ ಆಂದೋಲನಗಳು ಕಾಣಿಸಿಕೊಂಡಿದ್ದವು. ಕಾರ್ಮಿಕರು, ಅದರಲ್ಲಿಯೂ ವಿಶೇಷವಾಗಿ, ಚಿಕಾಗೋ ನಗರದ ಕಾರ್ಮಿಕರು, ಅನೇಕ ಧೀರ ಹೋರಾಟಗಳನ್ನು ಮಾಡಿದ್ದರು. ಹತ್ತಾರು ಸಂಘರ್ಷಗಳನ್ನು ಸಂಘಟಿಸಿ ಕಾರ್ಮಿಕ ವರ್ಗದ ಅನನ್ಯ ಐಕ್ಯತೆಗೆ ನಾಂದಿ ಹಾಡಿದ್ದರು.

ಪುಟ 6 ಕ್ಕೆ

ಅನುವಾದಕರ ಮಾತು....

'ಬರೀ ಔಪಚಾರಿಕ ಆಗಬಾರದು'

'...Working class consciousness cannot be genuinely political consciousness unless t?e workers are trained to respond to all cases, wit?out exception, of tyranny, oppression, violence and abuse, no matter w?at class is affected.'

\- Lenin

ಇಂದು ಪ್ರಪಂಚದಾದ್ಯಂತ ಪ್ರಾಯಶಃ ಎಲ್ಲ ದೇಶಗಳಲ್ಲಿಯೂ ತಪ್ಪದೆ ಆಚರಿಸಲ್ಪಡುವ ದಿನವೆಂದರೆ, ಮೇ 1. ಇದು ಕಾರ್ಮಿಕರ ದಿನ. ಇದಕ್ಕೆ ತನ್ನದೇ ಆದ ಒಂದು ದೀರ್ಘ ಚರಿತ್ರೆ ಇದೆ. ಆದರೆ, ಈ ಚರಿತ್ರೆಯ ಮಹತ್ವ ಅರಿಯದ ಅನೇಕರು ಆ ದಿನವನ್ನು ಕೇವಲ ಔಪಚಾರಿಕವಾಗಿ ಆಚರಿಸಿ ಕೈಬಿಡುವ ಪ್ರವೃತ್ತಿ ಇತ್ತೀಚೆಗೆ ಬಹು ವ್ಯಾಪಕವಾಗುತ್ತಿರುವುದನ್ನು ಕಾಣುತ್ತಿದ್ದೇವೆ. ಮೇ ದಿನದ ಮಹತ್ವವನ್ನು ವಿಸ್ತೃತವಾಗಿ ವಿವರಿಸುವ ಅನೇಕ ಗ್ರಂಥಗಳು ಇಂಗ್ಲೀಷ್ ಮತ್ತು ಇತರ ಯುರೋಪಿಯನ್ ಭಾಷೆಗಳಲ್ಲಿ ಇವೆ. ಆದರೆ, ಕನ್ನಡದಲ್ಲಿ ಮಾತ್ರ ತೀರ ವಿರಳವೆಂದೇ ಹೇಳಬೇಕು. ಒಂದು ದಶಕದ ಹಿಂದೆ ಮೇ ಒಂದರಂದು ಕಾರ್ಮಿಕ ದಿನಾಚರಣೆಯಲ್ಲಿ ಪಾಲ್ಗೊಂಡು ಮಾತಾಡಲು ಕಾರ್ಮಿಕರ ಸಂಘಟನೆಯೊಂದಕ್ಕೆ ಹೋಗಿದ್ದೆ. ಅಲ್ಲಿ ಸಮಾವೇಶಗೊಂಡಿದ್ದ ಮೂರು ನಾಲ್ಕು ಜನ ಕಾರ್ಮಿಕ ನಾಯಕರು ಆ ಸಂದರ್ಭದಲ್ಲಿ ಮಾತಾಡಿದರು. ಆದರೆ ಯಾರೊಬ್ಬರ ಮಾತಿನಲ್ಲಿಯೂ ಮೇ ದಿನದ ನೈಜ ಮಹತಿ ವ್ಯಕ್ತವಾಗಲಿಲ್ಲ. ಜೊತೆಗೆ ಪ್ರಸ್ತುತ ಕಾಲಘಟ್ಟದಲ್ಲಿ ಅದು ಹೇಗೆ ಕಾರ್ಮಿಕರ ರಾಜಕೀಯ ಪ್ರಜ್ಞೆಯ ಪಾತಳಿ ಎತ್ತರಿಸಬಲ್ಲುದು, ಅದರ ಆಳ ಹರವುಗಳನ್ನು... ವಿಸ್ತರಿಸಬಲ್ಲದು ಎಂಬುದರ ಮೇಲೆ ಯಾರೊಬ್ಬರೂ ಬೆಳಕು ಚೆಲ್ಲಲಿಲ್ಲ. ಸಮಯದ ಅಭಾವದಿಂದಾಗಿ, ಆ ಕುರಿತು ಒಂದಿಷ್ಟು ಅರ್ಥಪೂರ್ಣವಾದ ಮಾತು ಮಂಡಿಸಬಹುದಾಗಿದ್ದವರಿಗೂ ಅವಕಾಶ ದೊರೆಯಲಿಲ್ಲ. ಇದನ್ನು ಗಮನಿಸಿದ ನಾನು ಮೇ ಡೇಗೆ ಸಂಬಂಧಿಸಿದ ವಿಪುಲ ಮಾಹಿತಿಯನ್ನು ಕನ್ನಡಕ್ಕೆ ತರಲು ತೀರ್ಮಾನಿಸಿ ಮೇ ಡೇ ಕುರಿತು ಇಂಗ್ಲೀಷ್‌ನಲ್ಲಿರುವ ಐದಾರು ಪುಸ್ತಕಗಳನ್ನು ಸಂಗ್ರಹಿಸಿದೆ.

\- ರಾಹು

ಸಂಪಾದಕೀಯ

ಸಂವಿಧಾನಕ್ಕೆ ಅಪಚಾರ ತೊಲಗಲೇಬೇಕಿದೆ ಈ ಸರ್ಕಾರ

ಸಭಾಧ್ಯಕ್ಷರಿಂದ ಅನರ್ಹಗೊಳಿಸಲ್ಪಟ್ಟಿದ್ದ 16 ಶಾಸಕತ್ವವನ್ನು ಮಾನ್ಯ ಮಾಡಿದ ಸುಪ್ರೀಂಕೋರ್ಟ್‌ನ ತೀರ್ಪು ರಾಜ್ಯದಲ್ಲಿ ರಾಜಕೀಯ ಸಂಚಲನವನ್ನು ಹೆಚ್ಚಿಸಿದೆ. ಬಿಕ್ಕಟ್ಟು ಸೃಷ್ಟಿಸಿದೆ. ಯಡಿಯೂರಪ್ಪನವರ ಸರ್ಕಾರದ ಉಳಿವಿಗಾಗಿಯೇ ಸಭಾಧ್ಯಕ್ಷ ಬೋಪಯ್ಯನವರು ಹಾಗೂ ಮುಖ್ಯಮಂತ್ರಿಗಳು ಸ್ವಾಭಾವಿಕ ನ್ಯಾಯದ ತತ್ವಗಳು ಹಾಗೂ ಸಂವಿಧಾನದ ನಿಯಮಗಳನ್ನು ಗಾಳಿಗೆ ತೂರಿದ್ದಾರೆಂದೂ 'ಸ್ಪೀಕರ್ ಅಸಂಬದ್ಧ ಹಾಗೂ ಪಕ್ಷಪಾತದಿಂದ ವರ್ತಿಸಿದ್ದಾರೆಂದು' ಅಭಿಪ್ರಾಯ ಪಟ್ಟಿರುವುದು ಗಂಭೀರ ವಿಷಯವಾಗಿದೆ. ಇಲ್ಲಿ ಮುಖ್ಯಮಂತ್ರಿ ಹಾಗೂ ಸಭಾಧ್ಯಕ್ಷರನ್ನು ಅಪರಾಧಿ ಸ್ಥಾನದಲ್ಲಿ ಸರ್ವೋಚ್ಚ ನ್ಯಾಯಾಲಯ ನಿಲ್ಲಿಸಿದೆ. ಹೈಕೋರ್ಟ್ ತೀರ್ಪನ್ನು ತಿರಸ್ಕರಿಸಿದೆ.

ಇಂತಹ ತೀವ್ರ ಟೀಕೆಯ ಹಿನ್ನೆಲೆಯಲ್ಲಿ ತೀರ್ಪು ಹೊರಬಂದ ಕೂಡಲೇ ಸಭಾಧ್ಯಕ್ಷರು ಹಾಗೂ ಮುಖ್ಯಮಂತ್ರಿಗಳು ರಾಜೀನಾಮೆ ಸಲ್ಲಿಸಿ ಹೊರ ನಡೆಯಬೇಕಿತ್ತು. ಆದರೆ ಹೀಗೆ ಮಾಡದ ಅವರ ನಡೆ ಕೇವಲ ಭಂಡತನದ್ದು ಮಾತ್ರವಲ್ಲ ಭಾರತದ ಸಂವಿಧಾನ, ಕಾನೂನುಬದ್ಧ ಆಡಳಿತವನ್ನು ಧಿಕ್ಕರಿಸಿದ್ದಾರೆ. ಸಂವಿಧಾನವನ್ನು ಕಾಯುವುದಾಗಿ ಪ್ರಮಾಣ ಮಾಡಿದ್ದ ಅವರ ವರ್ತನೆ ತೀವ್ರ ಖಂಡನೀಯ.

ಬಿಜೆಪಿ ಸರ್ಕಾರಕ್ಕೆ ಯಡಿಯೂರಪ್ಪ ನವರಿಗೆ ಬೆಂಬಲ ನೀಡಿದ್ದ 11 ಬಿಜೆಪಿ ಹಾಗೂ 5 ಪಕ್ಷೇತರ ಶಾಸಕರು ತಮ್ಮ ಬೆಂಬಲವನ್ನು ಹಿಂತೆಗೆದುಕೊಂಡಿರುವುದಾಗಿ ರಾಜ್ಯಪಾಲರಿಗೆ ಪತ್ರವನ್ನು ಕೊಟ್ಟಿದ್ದರಿಂದ ಅದು ಬಹುಮತವಿಲ್ಲದ ಅಲ್ಪಸಂಖ್ಯಾತ ಸರ್ಕಾರವಾಗಿತ್ತು. ವಿಧಾನಸಭೆಯಲ್ಲೇ ಬಹುಮತ ಸಾಬೀತಿಗೆ ರಾಜ್ಯಪಾಲರು ಸೂಚಿಸಿದಾಗ ಮತದಾನವಾದಲ್ಲಿ ಯಡಿಯೂರಪ್ಪನವರ ಸರ್ಕಾರ ಬಹುಮತ ಸಾಬೀತುಪಡಿಸಲಾಗದೇ ಮತದಾನದಲ್ಲಿ ಸೋತು ಹೋಗಿ ಪತನವಾಗುತ್ತಿತ್ತು; ಇದನ್ನರಿತೇ ಸಭಾಧ್ಯಕ್ಷರ ಸ್ಥಾನವನ್ನು ಬಳಸಿ ತರಾತುರಿಯಲ್ಲಿ ಬೆಳಗಿನ ಜಾವಕ್ಕೆ ಮೊದಲೇ 16 ಶಾಸಕರನ್ನು ಅನರ್ಹಗೊಳಿಸಲಾಯಿತು. ಮತ್ತು ಕೃತಕ ಬಹುಮತವನ್ನು ಪ್ರಕಟಿಸ ಲಾಯಿತು.

ಸುಪ್ರೀಂಕೋರ್ಟ್‌ನ ತೀರ್ಪಿನಂತೆ ಒಂದು ವೇಳೆ 16 ಶಾಸಕರನ್ನು ಅನರ್ಹಗೊಳಿಸದಿದ್ದಲ್ಲಿ ಸರ್ಕಾರ ಉರುಳಿ ಹೋಗುತ್ತಿತ್ತು. ಶಾಸಕರ ಅಭಿಪ್ರಾಯವನ್ನು ಕೇಳಲೂ ಅವಕಾಶ ಕಲ್ಪಿಸದೇ ಅನರ್ಹಗೊಳಿಸಲಾಗಿದೆಯೆಂದೂ, ಅವರು ಬಿಜೆಪಿಯಲ್ಲೇ ಇರುವುದಾಗಿಯೂ ಹೇಳಿದ ಅಂಶವನ್ನು ನ್ಯಾಯಾಲಯ ಪರಿಗಣಿಸಿದೆ.

ನ್ಯಾಯಾಲಯದ ಆದೇಶ ಬಹುಮತ ಸಾಬೀತಿಗೆ ಮತದಾನವಾಧ ಸಂದರ್ಭ ದಿಂದಲೇ ಅನ್ವಯವಾಗುವುದರಿಂದ ಈ ಸರ್ಕಾರ ಅಧಿಕಾರದಲ್ಲಿರುವುದೇ ಅನೈತಿಕ, ಅಸಿಂಧುವಾಗಿದೆ. ಈ ಅಂಶವನ್ನೇ ಆಧರಿಸಿ ರಾಜ್ಯಪಾಲರು ಕಾನೂನಾತ್ಮಕವಾದ ಕ್ರಮವನ್ನು ಅನುಸರಿಸಿ ಕೇಂದ್ರಕ್ಕೆ ವರದಿ ಸಲ್ಲಿಸಿದ್ದಾರೆ. ಇದು ತೀವ್ರ ರಾಜಕೀಯ ಸಂಘರ್ಷಕ್ಕೆ ಎಡೆ ಮಾಡಿದೆ.

ಈ ಸನ್ನಿವೇಶದಲ್ಲಿ ಬಿಜೆಪಿ ಸರ್ಕಾರ, ಯಡಿಯೂರಪ್ಪ ಹಾಗೂ ಸಭಾಧ್ಯಕ್ಷರು ಕೂಡಲೇ ರಾಜೀನಾಮೆ ಸಲ್ಲಿಸಬೇಕು, ಹೊಸ ಜನಾದೇಶವನ್ನು ಪಡೆಯಬೇಕು. ಇದು ಇಂದು ಕೇವಲ ಬಹುಮತದ ಪ್ರಶ್ನೆ ಮಾತ್ರವಲ್ಲ, ಶಾಸಕತ್ವ ಉಳಿಸಿಕೊಂಡ ಹತ್ತು ಶಾಸಕರನ್ನು ಒಳಗೊಂಡ ನಂತರ ಬಿಜೆಪಿಗೆ ಬಹುಮತವಿರಬಹುದು. ಆದರೆ ಸಂವಿಧಾನಾತ್ಮಕ ಅಂಶಗಳ ಉಲ್ಲಂಘನೆಯೇ ಇಲ್ಲಿ ಪ್ರಧಾನವಾಗಿದೆ. ಈ ಪ್ರಶ್ನೆಗಳು ಜನರ ಗಮನಕ್ಕೆ ಹೋಗದಂತೆ ಮಾಧ್ಯಮಗಳನ್ನು ಬಿಜೆಪಿ ಉಪಯೋಗಿಸುತ್ತಿದೆ. ಬೀದಿರಂಪಾಟ ಮಾಡುತ್ತಿದೆ. ರಾಜ್ಯಪಾಲರ ವಿರುದ್ಧ ಜನರ ನಡುವೆ ಹೋಗುವುದಾಗಿ ಹೊರಟಿರುವುದು ರಾಜಕೀಯ ದುರ್ಲಾಭ ಪಡೆಯುವ ದುಷ್ಟ ಉದ್ದೇಶದಿಂದಲೇ. ಇದಕ್ಕೆ ಮಾಧ್ಯಮಗಳೂ ಸಹ ಪೂರ್ಣ ಬೆಂಬಲವಾಗಿ ನಿಂತು ಸಂವಿಧಾನ ಉಲ್ಲಂಘನೆಯ ಮುಖ್ಯ ಅಂಶವನ್ನು ಮರೆಮಾಚುತ್ತಿವೆ.

ಹೀಗಿರುವಾಗಲೇ ಈ ಸರ್ಕಾರದ ವಿರುದ್ಧ ಸಂವಿಧಾನದ 356(1)ನೇ ವಿಧಿಯನ್ನು ಬಳಸಿ ವಜಾಗೊಳಿಸುವುದು ಸೂಕ್ತವಲ್ಲ. ಅದೇನೇ ಇದ್ದರೂ ರಾಜಕೀಯವಾಗಿಯೇ ಇದನ್ನು ಎದುರಿಸಬೇಕು. ರಸ್ತೆ ತಡೆ, ದೆಹಲಿಯಾತ್ರೆ ನಡೆಸುತ್ತಿರುವ ಕಾಂಗ್ರೆಸ್‌ನವರ ರಂಪಾಟವೂ ಅರ್ಥ ಹೀನ, ಕೇವಲ ಪ್ರದರ್ಶಕ.


ಈ ಸಂದರ್ಭದಲ್ಲಿ ಅನೈತಿಕ, ಸಂವಿಧಾನಬಾಹಿರವಾಗಿ ಅಧಿಕಾರದಲ್ಲೇ ಮುಂದುವರೆದಿರುವ ಯಡಿಯೂರಪ್ಪನವರ ಸರ್ಕಾರ ರಾಜೀನಾಮೆ ಕೊಡುವಂತೆ ಜನತೆಯಲ್ಲಿ ರಾಜಕೀಯ ಜಾಗೃತಿ, ಸಾರ್ವಜನಿಕ ಒತ್ತಡ ಹಾಕಲು ಎಲ್ಲಾ ಎಡ ಪ್ರಜಾಸತ್ತಾತ್ಮಕ, ಜಾತ್ಯಾತೀತ ಶಕ್ತಿಗಳು ಒಂದಾಗಿ ಆಂದೋಲನ ನಡೆಸುವುದು ಇಂದಿನ ತುರ್ತು ಅಗತ್ಯ.

ಉಪ ಚುನಾವಣೆ : ಪ್ರತಿಫಲನಗೊಳ್ಳದ ಜನರ ಅತೃಪ್ತಿ ಕಾಂಗ್ರೆಸ್-ಜೆಡಿಎಸ್ ಬರಿಗೈಯಲ್ಲಿ

ಆಪರೇಷನ್ ಕಮಲವೆಂಬ ಅನೈತಿಕ ಪಕ್ಷಾಂತರದಲ್ಲಿ ರಾಜೀನಾಮೆ ನೀಡಿದ್ದ ಮೂರು ಶಾಸಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಆ ಎಲ್ಲಾ ಕ್ಷೇತ್ರಗಳನ್ನು ಬಿಜೆಪಿಯೇ ಗೆದ್ದುಕೊಂಡಿದೆ. ಚನ್ನಪಟ್ಟಣ ಜೆಡಿ(ಎಸ್) ಗೆದ್ದಿದ್ದ ಕ್ಷೇತ್ರವಾಗಿತ್ತು. ಜಗಳೂರು, ಬಂಗಾರಪೇಟೆಗಳು ಕಾಂಗ್ರೆಸ್ ಸೇರಿದ್ದವು. ಆದರೀಗ ಈ ಮಧ್ಯಂತರ ಚುನಾವಣೆಯಲ್ಲಿ ಕಾಂಗ್ರೆಸ್-ಜೆಡಿ(ಎಸ್) ಪಕ್ಷಗಳು ಬರಿಗೈಯಾಗಿವೆ. ವಿಶೇಷವೆಂದರೆ ಬಂಗಾರಪೇಟೆಯಲ್ಲಿ ಕಾಂಗ್ರೆಸ್ ಎರಡನೇ ಸ್ಥಾನದಲ್ಲಿದ್ದರೆ, ಚನ್ನಪಟ್ಟಣ, ಜಗಳೂರುಗಳಲ್ಲಿ ಮೂರನೇ ಸ್ಥಾನಕ್ಕೆ, ಚನ್ನಪಟ್ಟಣದಲ್ಲಂತೂ ಅದರ ಡಿಪಾಸಿಟ್ ಜಪ್ತಾದ ದಯನೀಯ ಸ್ಥಿತಿಯಲ್ಲಿ ...

ಅತೃಪ್ತಿ ಇದ್ದರೂ...

ಈ ಫಲಿತಾಂಶ ಯಡಿಯೂರಪ್ಪನವರ ಜನಪ್ರಿಯತೆಗೆ, ಬಿಜೆಪಿ ಸರ್ಕಾರದ ಅಭಿವೃದ್ಧಿ ರಾಜಕಾರಣಕ್ಕೆ ಜನ ನೀಡಿದ ತೀರ್ಪೆ? ಅಕ್ರಮ, ಅನೈತಿಕ, ಭ್ರಷ್ಟ-ಹಗರಣಗಳ ಈ ಸರ್ಕಾರಕ್ಕೆ ಜನ ನೀಡಿದ ಮನ್ನಣೆಯೇ? ಇದರಿಂದ ಎಲ್ಲಾ ಆರೋಪಗಳನ್ನು ಜನ ತಿರಸ್ಕರಿಸಿ, ವಿರೋಧಪಕ್ಷಗಳಿಗೆ ಕಪಾಳಮೋಕ್ಷ ಮಾಡಿದ್ದಾರೆಯೇ? ಆಪರೇಷನ್ ಕಮಲಕ್ಕೆ ಬೆಂಬಲವೇ? ಮತದಾರರ ಬೆಂಬಲವೇನಿದ್ದರೂ ಬಿಜೆಪಿಗೆಯೇ? ಎಲ್ಲದಕ್ಕೂ ಹೌದು ಎನ್ನುತ್ತಿದೆ ಯಡಿಯೂರಪ್ಪನವರ ದಂಡು, ಬಿಜೆಪಿ ನಾಯಕ ಗಣ!



ಒಂದೆಡೆ ಈ ಬಿಜೆಪಿ ಸರ್ಕಾರ ಅಕ್ರಮ-ಭ್ರಷ್ಟಚಾರಗಳಿಂದ ಜನರ ತೀವ್ರ ಅತೃಪ್ತಿಗೆ ಈಡಾಗಿದೆ ಭಿನ್ನಮತದಿಂದ ಬಿರಿದಿದೆ.

ಅದಾಗ್ಯೂ ಅದರ ಗೆಲುವು ಹೇಗೆ ಸಾಧ್ಯವಾಯಿತು. ಇದು ಯಡಿಯೂರಪ್ಪನವರ ಪ್ರತಿಷ್ಠೆಯ ಕಣವಾಗಿತ್ತು. ಈ ಚುನಾವಣೆಯು ನಡೆದ ರೀತಿ, ಆಡಳಿತ ಪಕ್ಷ ನಡೆದು ಕೊಂಡ ನೀತಿ ನಿಜಕ್ಕೂ ಪ್ರಜಾಪ್ರಭುತ್ವಕ್ಕೆ ಶೋಭೆ ತರುವಂಥದ್ದಲ್ಲ. ಯಥೇಚ್ಛವಾಗಿ ಹಣ-ಆಮಿಷದ ಹೊಳೆಯೇ ಅಲ್ಲಿ ಹರಿದಿದೆ. ಜಾತಿಯ ದುರ್ಬಳಕೆಯಾಗಿದೆ. ಆಡಳಿತ ಯಂತ್ರದ ದುರುಪಯೋಗ ನಗ್ನವಾಗಿಯೇ ನಡೆದಿದೆ. ಇವೆಲ್ಲಕ್ಕೂ ರಾಜ್ಯ ಚುನಾವಣಾ ಆಯೋಗದ ಮೌನ ಸಮ್ಮತಿ ಇತ್ತು. ಹೀಗಾಗಿಯೇ ಆಡಳಿತ ಪಕ್ಷದ ವಿಷಯದಲ್ಲಿ ನಿಷ್ಕ್ರಿಯತೆ ತೋರಿತು.

ಅಭ್ಯರ್ಥಿಗಳೂ ಬಿಜೆಪಿ ಪಕ್ಷದವರು ಎನ್ನುವುದಕ್ಕಿಂತ ಹಲವಾರು ವರುಷಗಳಲ್ಲಿ ಇಲ್ಲಿ ನೆಲೆ ನಿಂತವರು. ನೆಲೆ ಇದ್ದವರು, ಇವೆಲ್ಲವುಗಳ ನಡುವೆಯೇ ಕೆಲವೆಡೆ 'ಮ್ಯಾಚ್ ಫಿಕ್ಸಿಂಗ್' (ಒಳ ಒಪ್ಪಂದಗಳು) ನಡೆದಿವೆ ಎಂಬ ಆರೋಪಗಳೂ ಇವೆ. ಹೀಗಾಗಿ ಗೆಲುವು ಸಾಧಿಸಲು ಸಾಧ್ಯವಾಗಿದೆ.


ಇಲ್ಲಿ ಬಿಜೆಪಿ ಪಕ್ಷದ ಪ್ರಭಾವ ಕೆಲಸ ಮಾಡಿಯೇ ಇಲ್ಲವೆಂದಲ್ಲ. ಆದರೆ ಅದೇ ನಿರ್ಣಾಯಕವಲ್ಲ. ಒಂದು ಮಾತಂತೂ ನಿಜ! ಇಷ್ಟೆಲ್ಲಾ ಅತೃಪ್ತಿಯು ಜನರಲ್ಲಿ ಇದ್ದರೂ ಅದು ಬಿಜೆಪಿಯ ವಿರುದ್ಧ ಸ್ಫೋಟಗೊಳ್ಳಲಿಲ್ಲ. ಇದೇ ಕಾರ್ಪೋರೇಟ್ ರಾಜಕೀಯ.

ಯಾಕೀ ಸ್ಥಿತಿ?

ರಾಜ್ಯದಲ್ಲಿ ಇತ್ತೀಚಿಗಿನ ಬಹುತೇಕ ಚುನಾವಣೆಗಳಲ್ಲಿ ಕಾಂಗ್ರೆಸ್ ಸೋಲುತ್ತಲೇ ಇದೆ. ಫಲಿತಾಂಶ ಪ್ರಕಟವಾದ ಕೂಡಲೇ 'ಆತ್ಮವಿಮರ್ಶೆ ಮಾಡಿಕೊಂಡು ತಿದ್ದಿಕೊಳ್ಳುವುದಾಗಿ' ಹೇಳಿಕೊಳ್ಳುವುದು ಒಂದು ಯಥಾ ರೀತಿ ರೂಢಿ ಮಾತಾಗಿದೆ. ಆದರೆ ಹೀಗೇಕೆ ಎಂದು ಪ್ರಾಮಾಣಿಕವಾಗಿ ಪರಿಶೀಲಿಸುವ ಗೋಜಿಗೆ ಕಾಂಗ್ರೆಸ್ ಹೋಗುತ್ತಿಲ್ಲ. ಹೋಗಲೂ ಮನಸ್ಸಿಲ್ಲ. ಹಾಗೊಂದು ವೇಳೆ ಮುಂದಾದರೆ ಅದು ನಿಜವನ್ನು ಒಪ್ಪಿಕೊಳ್ಳಲೇ ಬೇಕಾಗುತ್ತದೆ. ಕೇಂದ್ರದ ಜನ ವಿರೋಧಿ ನೀತಿಗಳು, ವ್ಯಾಪಕ ಭ್ರಷ್ಟಾಚಾರ ಹೊಸ ಹೊಸ ಧಾಳಿಗಳು, ಬೆಲೆ ಏರಿಕೆಯಿಂದ ಜನರನ್ನು ರಕ್ಷಿಸಲಾಗದ ಕ್ರಮಗಳು, ಇತ್ಯಾದಿ... ರಾಜ್ಯದಲ್ಲಿಯೂ ಅಧಿಕೃತ ವಿರೋಧಪಕ್ಷವಾಗಿದ್ದರೂ ಅದರ ಪಾತ್ರ ನಿರ್ವಹಿಸುವಲ್ಲಿ ಪೂರ್ಣ ವೈಫಲ್ಯಗಳು! ಹೋಗಲಿ ಅದು ಆಡುತ್ತಿರುವ ಮಾತುಗಳನ್ನು ಜನರ

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್



ಕವನ

ಅನ್ನದ ಕೂಗು

ಹಸಿದ ಹೊಟ್ಟೆಯ ತಮಟೆಯ ಸದ್ದು
ಜಗದ ಕಿವಿಗಳಲಿ ಮೊರೆಯುತಿದೆ
ಸುಲಿಗೆ ಕೈಗಳ ಕೃತಕ ಸೃಷ್ಟಿಗೆ
ಹಸಿದು ಜಗದೊಡಲು ಅಳುತಲಿದೆ.

ಅನ್ನದ ಅಗುಳಿಗೆ ಕನ್ನವ ಹಾಕುವ
ಕೈಗಳು ಬೆಳೆದಿವೆ ಜಗದಗಲ
ಜಾಗತೀಕರಣದ ವ್ಯಾಪಾರದಲಿ
ತುತ್ತಿನ ಚೀಲವು ಬರಿದಾಯ್ತು

ಬಡವರ ಒಡಲಿನ ಅನ್ನದ ಕೂಗು
ಕೇಳಲಿಲ್ಲವೋ ದೇವರ ಕಿವಿಗೆ
ಜನಗಳ ನೋವು, ತಳಮಳ ಸಂಕಟ
ತಟ್ಟಲೆ ಇಲ್ಲ ಹೃದಯಕ್ಕೆ

ಹಸಿದು ಸತ್ತವರ ಗೋರಿಗಳಲ್ಲಿ
ಕಾದು ಕುಳಿತಿದೆ ಕಾಲದ ಕೂಗು
ಬಡವರ ಸಿಟ್ಟಿನ ಕಟ್ಟೆಗಳೊಡೆದು
ಹರಿದಿದೆ ರೋಷದ ಹೊಳೆಯಾಗಿ

ಬದುಕುವ ಹಕ್ಕಿನ ಹೋರಾಟದಲಿ
ಹೆಜ್ಜೆ ಮೂಡುತಿವೆ ಮೂಡಣಕೆ
ಹಾದಿ ಬೀದಿಯಲಿ ಮೊಳಗಿದೆ ಘೋಷಣೆ
ಸುಲಿಗೆ ರಾಜ್ಯವು ನಡುಗುತಿದೆ.

- ಹುಲಿಕಟ್ಟಿ ಚನ್ನಬಸಪ್ಪ

ಇದು ನಿಮಗೆ ಗೊತ್ತೆ?

ಸಬ್ಸಿಡಿ.... ಎಂಥಾ ಬಡವರಿಗೆ

ಇಲ್ಲೊಂದು ವಿಶೇಷ ಸುದ್ದಿ
ಒಂದು ರೂಪಾಯಿಗೆ-ಒಂದು ಟೀ
ಐದೂವರೆ ರೂಪಾಯಿಗೆ -ಸೂಪ್
ಒಂದೂವರೆ ರೂಪಾಯಿಗೆ-ದಾಲ್
ಎರಡು ರೂಪಾಯಿಗೆ-ಊಟ
ಒಂದು ರೂಪಾಯಿಗೆ-ಚಪಾತಿ
ಇಪ್ಪತ್ತನಾಲ್ಕುವರೆ ರೂಪಾಯಿಗೆ-ಚಿಕ್ಕನ್
ನಾಲ್ಕು ರೂಪಾಯಿಗೆ-ದೋಸೆ
ಎಂಟು ರೂಪಾಯಿಗೆ-ವೆಜಿಟೇಬಲ್ ಬಿರಿಯಾನಿ

ಇಷ್ಟೊಂದು ಚೀಪು ರೇಟ್ ಆಫರ್ ದೊರೆಯುವುದು. ಲೋಕಸಭೆ ಕ್ಯಾಂಟಿನಲ್ಲಿ, ಮಾಸಿಕ 80 ಸಾವಿರ ತೆಗೆದುಕೊಳ್ಳುವ ಸಂಸತ್ ಸದಸ್ಯರುಗಳಿಗೆ ಮಾತ್ರ. 80 ಸಾವಿರ ಕೇವಲ ಮೂಲ ವೇತನ ಇತರೆ ಸೌಲಭ್ಯಗಳನ್ನು ಹೊರತುಪಡಿಸಿ.

ಉಪ ಚುನಾವಣೆ ....

ಪುಟ 3 ರಿಂದ

ನಡುವೆಯಾದರೂ ಕೊಂಡೊಯ್ಯಿತೆ? ಇಲ್ಲ, ಬಿಜೆಪಿಯನ್ನು ರಾಜಕೀಯವಾಗಿ ಎದುರಿಸಲು ಸಿದ್ಧವೇ ಇಲ್ಲ, ಹೀಗಾಗಿ ರಾಜಭವನದ ಮುಂದೆ ನೆರೆದು ಅರಮನೆ ಪಿತೂರಿಗಳದ್ದೇ ಆಗ್ರಹ. ಮೇಲಾಗಿ ಒಳ ಜಗಳಗಳು.

ಚನ್ನಪಟ್ಟಣದಲ್ಲಿ ಮಾಜಿ ಸಚಿವ ಡಿ.ಕೆ.ಶಿವಕುಮಾರ್‌ಗೆ ಪ್ರತಿಷ್ಠೆಯ ಕಣವಾಗಿತ್ತಂತೆ! ಆದ್ದರಿಂದಲೇ ಇದನ್ನು ಮಣ್ಣು ಮುಕ್ಕಿಸಲು ವಿರೋಧಿ ಬಣ ಪಣ ತೊಟ್ಟಿತಂತೆ! ಹೀಗಿರುವಾಗ ಬಿಜೆಪಿ ಅದನ್ನು ಬಳಸದೇ ಬಿಟ್ಟೀತೇ?

ಜೆಡಿ(ಎಸ್) ಸಹ ಚನ್ನಪಟ್ಟಣ ಹಾಗೂ ಬಂಗಾರಪೇಟೆಯಲ್ಲಿ ಒಂದು ಶಕ್ತಿಯುತವಾದ, ಗೆಲ್ಲಲೂ ಬಹುವಾಗಿದ್ದ ಅವಕಾಶಗಳನ್ನು ಬಿಟ್ಟುಕೊಟ್ಟಿದೆ. ಇದು ನಾಯಕರ ನಡುವಿನ ತಪ್ಪು ಲೆಕ್ಕಾಚಾರವೆಂದರೂ ಅದು ರಾಜಕೀಯವಾಗಿ ಮಾಡಬೇಕಿರುವ ಕೆಲಸವನ್ನು ಎತ್ತಿ ತೋರಿಸುತ್ತದೆ. ಕಳೆದ ಕೆಲವು ತಿಂಗಳ ಹಿಂದೆ ಬಿಜೆಪಿಗೆ ಕಡು ವಿರೋಧ ಒಡ್ಡಿ ಜನಪ್ರಿಯವಾಗಿದ್ದ ಜೆಡಿ(ಎಸ್) ಪ್ರಭಾವ ಮಂಕು ಕವಿದಿದೆ ಹಿಂದೆ ತಳ್ಳಲ್ಪಟ್ಟಿದೆ.

ಕಂಟಕ

ಇಂತಹ ಸನ್ನಿವೇಶದಲ್ಲಿ ಬಿಜೆಪಿ ಬೀಗುತ್ತಿರುವುದು ಮುಂದಿನ ರಾಜಕಾರಣದಲ್ಲಿ ಎಚ್ಚರಿಕೆಯ ಗಂಟೆಯಾಗಿದೆ. ಅದರಲ್ಲೂ ಬಿಜೆಪಿ ದಕ್ಷಿಣ ಕರ್ನಾಟಕದಲ್ಲಿ ಅದೂ ಜೆಡಿ(ಎಸ್)ನ ಪ್ರಬಲ ನೆಲೆಗೆ ಲಗ್ಗೆ ಹಾಕಿರುವುದು ಕೆಲವು ತೀವ್ರ ಬೆಳವಣಿಗೆಗೆ ಕಾರಣವಾಗಬಲ್ಲುದು. ಇನ್ನಷ್ಟು ಆಪರೇಷನ್ ಕಮಲಕ್ಕೆ, ವಿರೋಧಪಕ್ಷಗಳನ್ನು ನಾಶಗೊಳಿಸಲಿಕ್ಕೆ ಪ್ರೇರಕವಾಗಬಹುದು. ಇದು ಪ್ರಜಾತಂತ್ರಕ್ಕೆ ಕಟಂಕ. ಈ ಫಲಿತಾಂಶದಿಂದ ಸ್ವಲ್ಪವಾದರೂ ಕಲಿಯಬೇಕಿದೆ.

ಬೇಡವೇ ನ್ಯಾಯ?

ಎಷ್ಟೊಂದು ವರುಷಗಳು ಘೋರ ಅನ್ಯಾಯ
ಸಹಿಸುವಿರಿ ಕಾರ್ಮಿಕರೆ ಬೇಡವೇ ನ್ಯಾಯ?
ಇಂದಿಲ್ಲ ಮಕ್ಕಳಿಗೆ ಶಿಕ್ಷಣವು ಬಟ್ಟೆ
ಕಾಣಿಸದೆ ಬೆನ್ನನ್ನು ಕೂಡಿರುವ ಹೊಟ್ಟೆ?

★

ಕಾರ್ಮಿಕರ ಅವಸ್ಥೆ

ಆಳುವವ ಮಾಲಕನು ಆಗುತ್ತ ಒಂದು
ಬೀಗುವರು ಬಡ ಜನರ ದುಡಿತವನು ತಿಂದು
ಬೆನ್ನುಗೂಡಿದ ಹೊಟ್ಟೆ ಸೆಣೆತಿರುವರಟ್ಟೆ
ಇದು ನಮ್ಮ ಕಾರ್ಮಿಕರ ಅವಸ್ಥೆ ಗೊತ್ತೆ?

- ವಿಡಂಬಾರಿ

ಅರುಳೋ ಮರುಳೋ....

ಯಣ್ಣ ನಮ್ ರಾಜ್ಯಪಾಲ್ರು ಬುದ್ವಂತ್ರು ಅಂದ್ಕಂಡಿದ್ದೆ, ಆದ್ರೆ ಈಗ್ ನೋಡಿದ್ರೆ ಯಾಕೋ ಅರಳೋ ಮರುಳೋ ಅನುಸ್ತಾ ಆದಲ?

ಯಾಕೆ, ವಳ್ಳೆ ಕಡಕ್ ಆಗಿ ಮಾತಾಡ್ತಾ ಇದ್ರಲ?

ಸುಪ್ರೀಂ ಕೋರ್ಟು ಯಡೂರಪ್ಪ ಯಮ್ಮೆಲ್ಲೆಗಳ್ನ ವಜಾ ಮಾಡಿದ್ನಲ, ಅದು ತಪ್ಪು ಅವ್ರೆಲ್ಲ ಯಮ್ಮೆಲ್ಲೆ ಆಗಿ ಮುಂದುವರೀಬೇಕು ಅಂತ ಏಳ್ತು. ಆಗ ರಾಜ್‌ಪಾಲ್ರು ಯಡೂರಪ್ಪುನ್ ಗೌರ್ಮೆಂಟ ವಜಾ ಮಾಡಿ ಅಂತ ರಾಷ್ಟ್ರಪತಿಗಳಿಗೆ ಕಾಗ್ದ ಬರುದ್ರು. ಆ ಕಾಗ್ದ ಓಗಿ ಕಲ್ಪಟ್ರೆ ಸೇರ್ಕಂಡದೆ. ಮುಂದೇನ್ ಮಾಡ್ಬೇಕು ಅಂತ ಯಾರ್ಗೂ ಗೊತ್ತಾಯ್ತಾ ಇಲ್ಲ.

ಅದ್ಕೆ ರಾಜ್‌ಪಾಲ್ರು ಏನ್ ಮಾಡ್ತರಣ್ಣ. ಅವ್ರು ಮಾಡ ಕ್ಯಲ್ಸವ ಅವ್ರು ಮಾಡಿ ಸುಮ್ಕಾಗ್ಯವ್ರೆ. ಈಗ ಸೆಂಟ್ರು ಗೌರ್ಮೆಂಟು, ರಾಷ್ಟ್ರಪತಿಗಳು ಏನಾರ ಮಾಡ್ಬೇಕು ಅಷ್ಟೆಯ. ಅದಕ್ಯಾಕೆ ಅವ್ರಿಗೆ ಅರಳು ಮರುಳು ಅಂತಿಯ?

ಯಲ್ಲ ಸರಿ, ಸುಮ್ಕಿರದ್ ಬುಟ್ಟು ಈಗ, ಯಡೂರಪ್ಪ ನಂಗೆ ವಳ್ಳೆ ಗ್ಯಳ್ಯ, ಅವ್ನು ವಳ್ಳೆ ಕ್ಯಲ್ಸ ಮಾಡ್ತಾ ಅವ್ನೆ ನನ್ನ ಸಾಕಾರ ಯಾವಾಗ್ಲು ಇದ್ದೇ ಇದೆ ಅಂತ ಏಳ್ಯವ್ರೆ.

ನೋಡು, ಒಂದೊಂದ್ ಸತಿ ದ್ವಡ್ ಮನುಸ್ರು ಯಂಗ್ ಮಾತಾಡ್ತರೆ ಅಂತ ಅರ್ತ ಮಾಡಿಕಳ್ಳದು ಕಷ್ಟ. ಅವ್ರು ಟೀಕೆ ಮಾಡಕೆ ಅಂಗೆ ಯಾಕ್ ಏಳಿರ್ ಬಾರ್ದು? ಸಾಕಾರ ಅಂದ್ರೆ ನಿನ್ ವಿರುದ್ದ ಡಿಲ್ಲಿಗೆ ಅರ್ಜಿ ಬರಿತಲೇ ಇರ್ತಿನಿ ಅಂತ ಇರ್ ಬೌದು.

ಅರ್ಥ ಮಾಡಿಕಳ್ಳರು ಏನಾರ ತಿಳ್ಕಬೌದು. ಅದು ಬ್ಯಾರೆ, ಆದ್ರೆ ಇಷ್ಟ್ ದಿನ ಕೂಗ್ಯಾಡಿ ಇದ್ಕಿದ್ದಂಗೆ ಒಗಳಕೆ ಸುರು ಮಾಡಿದ್ರೆ ಏನನ್ ಬೇಕು ಏಳು? ಅದ್ಕೆ ಅರಳೊ ಮರುಳೊ ಇರ್ಬೇಕು ಅನ್ನದು.

ಕ್ಯಾತೆ
ಈ. ಬಸವರಾಜು
ಮಲ್ಲೇನಹಳ್ಳಿ

ನೋಡನ ಇರು, ಒಂದೊಂದ್ ದಿನ ಒಂದೊಂದ್ ತರ ಏಳ್ತಾ ಇರ್ತರೆ!

ನಮ್ ಯಡೂರಪ್ಪ ಏನ್ ಮಾಡ್ತಾ ಇದ್ದನು?

ಅವುಂದು ಮಾಮೂಲು ವರ್ಸೆ. ನಂಗೆ ತ್ವಂದ್ರೆ ಕೊಟ್ರೆ ಬೀದಿಗಿಳ್ದು ಓರಾಟ ಮಾಡ್ತಿನಿ, ಅನ್ನದು. ದೇವುಸ್ತಾನುಕೋಗಿ ಬರದು ಮಾಡ್ತಾ ಅವ್ನೆ.

ಅವ್ನೆ ಗೌರ್ಮೆಂಟ ನಡ್ಸದು, ಅವ್ನೆ ಬೀದಿಗಿಳ್ದು ಓರಾಟ ಮಾಡದು ಅಂದ್ರೆ ಯಂಗೆ ಅಂತಿನಿ?

ಅದ್ಕೆ ಯಡೂರಪ್ಪುನ್ ವರ್ಸೆ ಅನ್ನದು. ಯಮ್ಮೆಲ್ಲೇಗಳ್ನ ಕೂಡಾಕ್ಕಂಡು ಯಾರ್ ಕೇಳ್ತರೆ ಅಲ್ಲಿಗೋಗದು, ಸಾಲುಗ್ ನಿಲ್ಸಿ ತಲೆ ಎಣ್ಸೆ ಅನ್ನದು. ಒಟ್ನಲ್ಲಿ ಯಮ್ಮೆಲ್ಲೆಗಳ್ನ ಕುರಿಗಳ್ ತರ ಮಾಡಿ ಮಡಿಕ್ಯಂಡವ್ನೆ.

ಕಾಂಗ್ರೆಸ್ ನವ್ರು ಏನ್ ಮಾಡ್ತಾ ಇದ್ದರು?

ಅವ್ರು ರಾಜ್ ಬವ್ನ ಚಲೋ ಮಾಡದು, ಸೋನಿಗಾಂದಿಗೆ ಪೋನ್ ಮಾಡಿ ಗೌರ್ಮೇಂಟ್ ವಜಾ ಮಾಡಿ ಅನ್ನದು, ರಸ್ತೆ ತಡೆ ಮಾಡದು ಇಷ್ಟ್ ಮಾಡ್ತಾ ಅವ್ರೆ.

ಜನಗಳಿಗೂ ಏನಾರ ಮಾಡ್ರಪ್ಪ ಅಂತ ಏಳದಲ್ವೆ?

ಈಗ ಮಾಡ್ತಾ ಇರದು ಜನಗಳಿಗೇ ಅಂತ ಅವ್ರಲ್ಲ?

ಇದು ಅವ್ರಿಗೆ ಮಾಡಿಕಳ್ತಾ ಇರದು. ಜನಗಳಿಗೆ ಅಂದ್ರೆ ಈಗ, ಕೇಂದ್ರ ಸರ್ಕಾರದವ್ರು ಪೆಟ್ರೋಲ್ ಬ್ಯಲೆ ಜಾಸ್ತಿ ಮಾಡ್ಯವ್ರೆ, ಮುಂದೂ ಮಾಡ್ತರೆ, ಅದ್ರ ವಿರುದ್ದ ಓರಾಟ ಮಾಡ್ಬೇಕು, ಇತ್ರೆ ವಸ್ತುಗಳ ಬ್ಯಲೆ ಜಾಸ್ತಿ ಆಗ್ಯದೆ ಅದ್ರೆ ವಿರುದ್ದ ಓರಾಟ ಮಾಡದು ಈ ತರ ಮಾಡ್ಬೇಕು.

ಇದ ಅವ್ರು ಮಾಡದು ಕಡ್ಮೆ ಬುಡು. ಅವ್ರು ಗರಿ ಗರಿ ಬಟ್ಟೆ ಆಕ್ಯಂಡು ಮ್ಯರ್ವಣಿಗೆ ಓಗಿ ಪೋಟ ತಗಿಸ್ಕಂಡು ಮನಿಗೋಗಿ ಮನಿಕ್ಯಳದು ಅವ್ರ ಕ್ಯಲ್ಸ.

ದ್ಯಾವೇಗೌಡ್ರು ಏನ್ ಮಾಡ್ತಾ ಇದ್ದನು?

ಅವ್ರು ಬ್ರಷ್ಟಾಚಾರದ್ ವಿರುದ್ದ ಓರಾಟ ಮಾಡಿ ಸುಸ್ತಾಗಿ ಈಗ ಡೆಲ್ಲಿಗೋಗಿ ಮೀಟಿಂಗ್ ಮಾಡ್ತಾ ಅವ್ರೆ. ಅದೂ ಯಡೂರಪ್ಪುಂಗೆ ತಲೆ ನೋವಾಗ್ಯದೆ.

ತಲೆ ನೋವಾದ್ರೆ ಏನ್ ಮಾಡ್ತನಂತೆ?

ಅದೆ ರ್ಯಾಲಿ, ಮ್ಯರ್ವಣಿಗೆ, ದೇವುಸ್ಥಾನ ಸುತ್ತದು.... ಜ್ವತಿಗೆ ಯಾರ್ಯಾರು ವಿರೋದುಸ್ತರೋ ಅವ್ರಿಗ್ಯಲ್ಲ ದುಡ್ ಅಂಚದು!



ಪೆಟ್ರೋಲ್ ಬೆಲೆ ಏರಿಕೆಗೆ ಖಂಡನೆ
ತೀವ್ರ ಪ್ರತಿಭಟನೆ

ತೀವ್ರ ರೀತಿಯ ಪೆಟ್ರೋಲ್ ಬೆಲೆಯೇರಿಕೆಯನ್ನು ಹಾಗೂ ಅದಕ್ಕೆ ಕಾರಣವಾಗಿರುವ ಕೇಂದ್ರ ಯುಪಿಎ ಹಾಗೂ ರಾಜ್ಯ ಬಿಜೆಪಿ ಸರ್ಕಾರಗಳ ಜನವಿರೋಧಿ ನೀತಿಗಳ ಬದಲಾವಣೆಗಾಗಿ ಆಗ್ರಹಿಸಿ ಎಡಪಕ್ಷಗಳಾದ ಸಿಪಿಐ(ಎಂ), ಸಿಪಿಐ ಮತ್ತು ಟಿಪ್ಪುಸುಲ್ತಾನ್ ಯುನೈಟೆಡ್ ಫ್ರಂಟ್ ಜಂಟಿಯಾಗಿ ಮೇ 17, 2011 ರಂದು ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದವು.



ಬೆಂಗಳೂರು ನಗರ ಕೇಂದ್ರ ಭಾಗವಾದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಸೇರಿದ್ದ ನೂರಾರು ಕಾರ್ಯಕರ್ತರು ಕೇಂದ್ರ-ರಾಜ್ಯ ಸರ್ಕಾರಗಳ ನೀತಿಗಳ ವಿರುದ್ಧ ಧಿಕ್ಕಾರ ಕೂಗಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ.ನಾಯರ್‌ರವರು ಪೆಟ್ರೋಲ್ ಬೆಲೆಏರಿಕೆಯ ಅಗತ್ಯವೇ ಇಲ್ಲ. ಪೆಟ್ರೋಲ್ ಮೇಲೆ ಹಾಕಲಾಗಿರುವ ಶೇ.51 ರಷ್ಟು ತೆರಿಗೆಗಳಲ್ಲಿ ಕಡಿತ ಮಾಡಿದರೆ ಸಾಕು. ಎಡಪಕ್ಷಗಳ ನೇತೃತ್ವದ ಸರ್ಕಾರಗಳಿಗೆ ಮಾತ್ರ ಇಂತಹ ಮನಸ್ಸಿದೆ ಬೇರೆ ಸರ್ಕಾರಗಳಿಗೆ ಹಾಗೂ ರಾಜ್ಯ ಬಿಜೆಪಿ ಸರ್ಕಾರಕ್ಕೆ ಈ ದೃಷ್ಟಿಕೋನ, ಮನಸ್ಸು ಇಲ್ಲ ಎಂದರು. ಸಿಪಿಐ ಪಕ್ಷದ ರಾಜ್ಯ ಮಂಡಳಿ ಕಾರ್ಯದರ್ಶಿ ಮಾತನಾಡಿ ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ನಿಯಂತ್ರಣ ವ್ಯವಸ್ಥೆಯನ್ನೇ ಕಳಚಿ ಹಾಕಿರುವ ಕ್ರಮ ಜನವಿರೋಧಿಯಾದದ್ದು ಅದನ್ನು ಪುನರ್ ಸ್ಥಾಪಿಸಬೇಕೆಂದು ಆಗ್ರಹಿಸಿದರು. ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕೆ.ಪ್ರಕಾಶ್ ಮಾತನಾಡಿ ಸರ್ಕಾರಿ ಸ್ವಾಮ್ಯಗಳ ಸಾರ್ವಜನಿಕ ತೈಲ ಕಂಪನಿಗಳಾದ ಹೆಚ್.ಪಿ.ಸಿ.ಎಲ್. ಬಿ.ಪಿ.ಸಿ.ಎಲ್.ಗಳು ಅತ್ಯಂತ ಲಾಭದಾಯಕವಾಗಿ ನಡೆಯುತ್ತಿವೆ. ಆದರೆ ಸರ್ಕಾರ ಕಂಪನಿಗಳಿಗೆ ಬಾರಿ ನಷ್ಟವಾಗುತ್ತಿದೆ ಎಂಬ ಸುಳ್ಳು ಪ್ರಚಾರ ನಡೆಸಿ ಬೆಲೆ ಏರಿಸಿದೆ.

ತೈಲ ಸಂಸ್ಕರಣೆಯಲ್ಲಿ ಖಾಸಗಿ ಕಂಪನಿಯಾದ ರಿಲೆಯನ್ಸ್‌ಗೆ ಅನುಕೂಲ ಮಾಡಿಕೊಡುತ್ತಾ ಈ ಲಾಭಕೋರ ಕಂಪನಿ ಸಾರ್ವಜನಿಕ ಸಂಪತ್ತನ್ನು ಹಾಗೂ ಲಾಭವನ್ನು ಅಗಾಧವಾಗಿ ಲೂಟಿ ಮಾಡಲು ಅವಕಾಶ ಮಾಡಿಕೊಡಲಾಗಿದೆ ಎಂದು ಕಟುವಾಗಿ ಟೀಕಿಸಿದರು.

ಸಿಪಿಐ(ಎಂ) ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಗೌರಮ್ಮ ಪ್ರಸ್ತಾವನೆ, ನಿರೂಪಣೆ ನಿರ್ವಹಿಸಿದರು.

ಈ ಸಂದರ್ಭದಲ್ಲಿ ಸಿಪಿಐನ ರಾಜ್ಯ ಮುಖಂಡರಾದ ಎಚ್.ವಿ.ಅನಂತ ಸುಬ್ಬರಾವ್, ಜಿಲ್ಲಾ ಮುಖಂಡರಾದ ಹರಿಗೋವಿಂದ್, ಟಿಪ್ಪು ಸುಲ್ತಾನ್ ಸಂಯುಕ್ತರಂಗದ ಸರ್ದಾರ್ ಅಬ್ದುಲ್ ಖುರೇಷಿಯವರು ಮಾತನಾಡಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಪ್ರತಿಭಟನೆಯಲ್ಲಿ ವಿ.ಜೆ.ಕೆ.ನಾಯರ್, ಸಿದ್ದನಗೌಡ ಪಾಟೀಲರು ಮತ್ತು ಅನಂತಸುಬ್ಬರಾವ್

ಬೀದರ್ ಜಿಲ್ಲೆ ಹುಮ್ನಾಬಾದ್‌ನಲ್ಲಿ ಪ್ರತಿಭಟನೆ



ಬ್ಯಾಂಕ್ ನೌಕರರ ಧಿಕ್ಕಾರ

ನೌಕರರ ವಿರೋಧಿ, ಜನವಿರೋಧಿ ಆರ್ಥಿಕ ನೀತಿಗಳ ವಿರುದ್ಧ ಬ್ಯಾಂಕ್ ನೌಕರರ ಸಂಘ ಬಿಇಎಫ್ಐ ನೇತೃತ್ವದಲ್ಲಿ ಮೇ 18 ರಂದು ಬೆಂಗಳೂರಿನ ಯುಕೋ ಬ್ಯಾಂಕ್ ಕಛೇರಿ ಎದುರು ನಡೆದ ಪ್ರತಿಭಟನೆಯ ಚಿತ್ರ.



ಮೇ ಡೇ ಹುತಾತ್ಮರು.....

ಪುಟ 2 ರಿಂದ

ಎಂಟು ಗಂಟೆಗಳ ಕೆಲಸದ ದಿನಕ್ಕಾಗಿ ಅಲ್ಲಲ್ಲಿ ಆಂದೋಲನಗಳು ನಡೆದಿದ್ದರೂ ಈ ಬೇಡಿಕೆಯೊಂದಿಗೆ ನಡೆಸಿದ ಕಾರ್ಮಿಕ ವರ್ಗದ ಹೋರಾಟಗಳ ಮುಂಚೂಣಿಯಲ್ಲಿದ್ದವರು ಚಿಕಾಗೋ ನಗರದ ಕಾರ್ಮಿಕರೇ. ಹೇ ಮಾರ್ಕೆಟ್ ಆಂದೋಲನದ ಮುಖಂಡರೆಲ್ಲಾ ಚಿಕಾಗೋ ನಗರದ ಕಾರ್ಮಿಕ ಮುಖಂಡರೇ ಆಗಿದ್ದರು. ಹೇ ಮಾರ್ಕೆಟ್ ದುರಂತ ಘಟನೆ ನಡೆಯುವ ಮುಂಚೆ ಅವರು ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ಬಹು ತುರುಸಿನ ಹೋರಾಟ ನಡೆಸಿಕೊಂಡು ಬಂದಿದ್ದರು.

2008 ರ ಜುಲೈನಲ್ಲಿ ನಾನು ನನ್ನ ಪತ್ನಿ ಪ್ರಮೀಳಾಳೊಂದಿಗೆ ಚಿಕಾಗೋ ನಗರಕ್ಕೆ ಭೇಟಿ ಕೊಡುವ ಸದವಕಾಶ ಪಡೆದಿದ್ದೆ. ಭಾವನಾತ್ಮಕವಾಗಿ ಅದೊಂದು ಹೆಮ್ಮೆಯ ಸಂಗತಿ. ಚಿಕಾಗೋ ನಗರದ ಕಮ್ಯುನಿಸ್ಟ್ ಪಕ್ಷದ ಸಹಾಯ ಸಹಕಾರದಿಂದಾಗಿ ನಮಗೆ ಹುತಾತ್ಮರ ಸ್ಮಾರಕಗಳು ಹಾಗೂ ಹೇ ಮಾರ್ಕೆಟಿಗೆ ಭೇಟಿ ಕೊಡುವ ಅವಕಾಶವೂ ದೊರೆತಿತ್ತು. ಅಮೇರಿಕೆಯ ಕಮ್ಯುನಿಸ್ಟ್ ಪಕ್ಷದ ಸಾಪ್ತಾಹಿಕ 'ವರ್ಕರ್ಸ್ ವರ್ಲ್ಡ್' ಪತ್ರಿಕೆಯ ಸಂಪಾದಕರಾದ ಟೆರ್ರಿ ಅಲ್ಬನೊ ನಮ್ಮನ್ನು ಹಾರ್ದಿಕವಾಗಿ ಸ್ವಾಗತಿಸಿದರೆ, ಚಿಕಾಗೋ ನಗರದಲ್ಲಿಯ ಟ್ರೇಡ್ ಯೂನಿಯನ್ ನಾಯಕರಾಗಿರುವ ಸ್ಕಾಟ್ ಮಾರ್ಶಲ್ ನಾವು ಆ ಚಾರಿತ್ರಿಕ ನಗರದಲ್ಲಿ ಉಳಿದುಕೊಂಡಿದ್ದ ಅವಧಿಯ ಉದ್ದಕ್ಕೂ ಎಲ್ಲ ರೀತಿಯ ಸಹಾಯ ಸಹಕಾರದ ಹಸ್ತ ಚಾಚಿದ್ದರು.

ಇಲಿನಾಯ್ ಲೇಬರ್ ಹಿಸ್ಟರಿ ಸೊಸಾಯಿಟಿಯ ವೈಸ್ ಚೇರ್‌ಮನ್ ಹಾಗೂ ಇಲಿನಾಯ್ ವಿಶ್ವವಿದ್ಯಾನಿಲಯದ ಲೇಬರ್ ಆ್ಯಂಡ್ ಇಂಡಸ್ಟ್ರಿಯಲ್ ರಿಲೇಶನ್ಸ್ ವಿಭಾಗದಲ್ಲಿ ಅಸೋಸಿಯೇಟ್ ಪ್ರೊಫೆಸರ್ ಆಗಿರುವ ಕಾರ್ಮಿಕ ಸಖಿ ಡಾ.ವಿಲಿಯಮ್ ಜೆ. ಆ್ಯಡೆಲ್‌ಮನ್ ಒದಗಿಸಿದ ಗಮನಾರ್ಹ ಮಾರ್ಗದರ್ಶನವನ್ನು ನಾನಿಲ್ಲಿ ನೆನೆಯಲೇಬೇಕು. ಅವರು ಎರಡು ಗಂಟೆಗಳಿಗೂ ಹೆಚ್ಚು ಕಾಲ ಮಾತಾಡುತ್ತ ಇಡೀ ಹೇ ಮಾರ್ಕೆಟ್ ಪ್ರಕರಣದ ಚರಿತ್ರೆಯನ್ನು ವಿವರ-ವಿವರವಾಗಿ ಬಿಡಿಸಿಟ್ಟಿದ್ದರು. ಹೇಮಾರ್ಕೆಟ್ ಘಟನೆಯ ಪೂರ್ವಾಪರಗಳನ್ನು ವಿವರಿಸಿದ ಅವರ ರೀತಿ, ಕಾರ್ಮಿಕ ವರ್ಗದ ಬಗ್ಗೆ ಅವರಿಗಿದ್ದ ಬದ್ಧತೆಯನ್ನು ಬಿಂಬಿಸುತ್ತಿತ್ತು. ದುಡಿಯುವವರ ಹೋರಾಟಗಳ ನ್ಯಾಯಬದ್ಧತೆಯ ಬಗ್ಗೆ ಅವರಿಗಿದ್ದ ಕಾಳಜಿ ಅವರ ಪ್ರತಿಯೊಂದು ಮಾತಿನಲ್ಲಿಯೂ ಸ್ಫಟಿಕ ಸ್ಪಷ್ಟವಾಗಿ ವ್ಯಕ್ತವಾಗುತ್ತಿತ್ತು. ಅವರೊಬ್ಬ ಅಚಲ ನಿರ್ಧಾರದ ಸೈದ್ಧಾಂತಿಕ ಹೋರಾಟಗಾರರೆಂಬುದು ನಿರ್ವಿವಾದ.

ಹೇ ಮಾರ್ಕೆಟ್ ಪ್ರಕರಣದ ಚರಿತ್ರೆಯನ್ನು ವಿಸ್ತೃತವಾಗಿ ಬಿಚ್ಚಿಟ್ಟಿದ್ದಲ್ಲದೆ, 'ಹೇ ಮಾರ್ಕೆಟ್ ರೀ-ವಿಜಿಟೆಡ್' ಎಂಬ ಕೃತಿಯ ಒಂದು ಪ್ರತಿಯನ್ನು ನನಗೆ ಕೊಡುವ ಕೃಪೆ ಮಾಡಿದ್ದರು. ಈ ಕೃತಿಯು ಮೇ ದಿನದ ಹುತಾತ್ಮರ ಧೀರೋದಾತ್ತ ಹೋರಾಟದ ಮಹಾಕಥೆಯನ್ನು ಬಲು ಚಿತ್ರವತ್ತಾಗಿ ಸಾದರಪಡಿಸುತ್ತದೆ. ಈ ಪುಸ್ತಕ ನನ್ನ ಮೇಲೆ ಗಾಢವಾದ ಪ್ರಭಾವ ಬೀರಿದ್ದಲ್ಲದೆ, ಇದನ್ನು ಭಾರತೀಯ ವಾಚಕರಿಗೆ ಪರಿಚಯಿಸಬೇಕೆಂಬ ಹಂಬಲವನ್ನೂ ಹುಟ್ಟಿಸಿತು. ಹೌದು, ಭಾರತದ ಪ್ರತಿಯೊಬ್ಬ ಕಾರ್ಮಿಕನು ಚಿಕಾಗೋ ಶ್ರಮಿಕರ ಮಹಾನ್ ಹೋರಾಟದ ಬಗ್ಗೆ ತಿಳಿದುಕೊಳ್ಳುವುದು ಅತ್ಯಂತ ಅವಶ್ಯಕವಾಗಿದೆ. ಆ ವೀರ ಹೋರಾಟದ ಗಾಥೆ ನಮ್ಮಲ್ಲಿಯೂ ಅಜೇಯ ಹೋರಾಟದ ಛಲ ಹುಟ್ಟಿಸಬಲ್ಲದು. ಅಪಾರ ಆತ್ಮವಿಶ್ವಾಸದ ಬಲ ತುಂಬಬಲ್ಲದು.

ಈ ಕೃತಿಯ ಭಾಷೆ ಎಷ್ಟು ಸಮೃದ್ಧವಾಗಿದೆಯೆಂದರೆ, ಶೈಲಿ ಎಷ್ಟು ಸುಲಲಿತವಾಗಿದೆ ಯೆಂದರೆ, ಕೃತಿಯ ಒಳಗೆ ಕಣ್ಣಾಡಿಸುತ್ತ ಹೋದಂತೆ, ಹೇ ಮಾರ್ಕೆಟ್ ಪ್ರಕರಣ ಸಚಿತ್ರವಾಗಿ ಮೈವೆತ್ತಿ ನಿಲ್ಲುತ್ತದೆ; ಸ್ವತ: ನಾವೇ ಆ ದುರಂತಕ್ಕೆ ಸಾಕ್ಷಿಗಳಾಗಿದ್ದಂಥ ಅನುಭವ ನೀಡುತ್ತದೆ; ಅಲ್ಲಿಯ ಒಂದೊಂದು ಘಟನೆಯೂ ತನ್ನೆಲ್ಲ ವೈವಿಧ್ಯಮಯ ವಿವರಗಳೊಂದಿಗೆ ಕಣ್ಣಿಗೆ ಕಟ್ಟುತ್ತದೆ. ಲೇಖಕರು ಪ್ರತಿಯೊಂದು ಘಟನೆಗೂ ದೀರ್ಘವಾದ ಚಾರಿತ್ರಿಕ ಹಿನ್ನೆಲೆಯನ್ನು ಒದಗಿಸಿ ಎಲ್ಲ ಪ್ರಸಂಗಗಳಿಗೂ ಜೀವ ತುಂಬಿ ಸ್ಪಷ್ಟತೆಯನ್ನು ಮೆರೆದಿದ್ದಾರೆ.

ಇಂಥ ದಾರುಣಮಯ ಧೀರ ಹೋರಾಟದ ವಿವರಗಳನ್ನು ತಿಳಿದುಕೊಂಡರೆ, ಭಾರತದಲ್ಲಿ ನಾವು ಆಚರಿಸುವ ಮೇ ದಿನಾಚರಣೆಗೆ ಹೊಸ ಅರ್ಥ ಮೈಗೂಡುತ್ತದೆ. ಮೇ ದಿನದ ಹುತಾತ್ಮರ ತ್ಯಾಗ ಹಾಗೂ ಸಮರ್ಪಣಾ ಭಾವಗಳು ನಮ್ಮೊಳಗೂ ಹೋರಾಟದ ಕಿಚ್ಚನ್ನು ಭುಗಿಲೇಳಿಸುತ್ತವೆ; ನಮ್ಮ ಚಿತ್-ಜ್ಯೋತಿಗಳನ್ನು ಹೊತ್ತಿಸಿ ಹೋರಾಟದ ಮಾರ್ಗವನ್ನು ಬೆಳಗಿಸುತ್ತವೆ; ಆ ಮೂಲಕ ನಾವು ಮೇ ದಿನದ ಧೀರ ಹೋರಾಟಗಾರರ ಸಂದೇಶವನ್ನು ಭಾರತೀಯ ಕಾರ್ಮಿಕರ ಮನಕ್ಕೆ ತಲುಪಿಸಲು ಸ್ಪಷ್ಟವಾದ ವಿಧಿ ವಿಧಾನಗಳನ್ನು ಒದಗಿಸುತ್ತವೆ; ನಾವೂ ಹೋರಾಟದ ಮಾರ್ಗದಲ್ಲಿ ಚರಿತ್ರಾರ್ಹ ಹೆಜ್ಜೆ ಹಾಕಲು ಸ್ಫೂರ್ತಿ ನೀಡುತ್ತವೆ.

ಅಮೇರಿಕೆಯ ಕಾರ್ಮಿಕ ವರ್ಗದ ಸಂಘಟಿತ ಹೋರಾಟಗಳ ಚಾರಿತ್ರಿಕ ಹಿನ್ನೆಲೆಯನ್ನು ಅರಿಯುವುದೆಂದರೆ, ನಮ್ಮ ಕಾರ್ಮಿಕ ವರ್ಗಕ್ಕೆ ಒಂದು ಮಹಾನ್ ಪರಂಪರೆಯ ಅಪೂರ್ವ ಶಿಕ್ಷಣ ನೀಡಿದಂತೆಯೇ ಸರಿ. ಈ ಗ್ರಂಥ ಭಾರತದಲ್ಲಿ ನಡೆಸಲಾದ ರಾಷ್ಟ್ರೀಯ ಮಹತ್ವದ ಅನೇಕ ವರ್ಗ ಹೋರಾಟಗಳ ಕುರಿತು ಮಾಹಿತಿ ಸಂಗ್ರಹಿಸಲಿಚ್ಛಿಸುವ ಸಂಶೋಧಕರಿಗೆ ಮಹತ್ವದ ವಸ್ತು ವಿಶೇಷಗಳನ್ನು ಒದಗಿಸುತ್ತದೆ. ಜೊತೆಗೆ ಅಮೇರಿಕೆಯ ಕಾರ್ಮಿಕರ ಸಮರಶೀಲ ಹೋರಾಟಗಳ ಸಾಧನೆ ಸೋಲುಗಳು, ಅವರ ಸಂಘರ್ಷದ ಹಿರಿಮೆ ಗರಿಮೆಗಳು -ಇತ್ಯಾದಿಗಳ ಕುರಿತು ಭಾರತೀಯ ಕಾರ್ಮಿಕ ವರ್ಗಕ್ಕೆ ಸಾಕಷ್ಟು ಮಾಹಿತಿ ಒದಗಿಸಲೂ ಸಹಾಯ ಮಾಡುತ್ತದೆ.

ಭಾರತೀಯ ವಾಚಕರಿಗೆ ಕಾರ್ಮಿಕ ವರ್ಗದ ಆಂದೋಲನದಲ್ಲಿ ಕಾಣಿಸಿಕೊಂಡಿರುವ ಅರಾಜಕತಾವಾದಿ (Anarchism) ಪ್ರವೃತ್ತಿಯ ಪರಿಚಯ ಮಾಡಿಸಿಕೊಡುವುದು ಅವಶ್ಯಕವಾಗಿದೆ. ಸಾಮಾನ್ಯವಾಗಿ ಜನರು ಅರಾಜಕತಾವಾದಿ ಎಂಬ ಪರಿಕಲ್ಪನೆಯನ್ನು ಗೊಂದಲ ಸೃಷ್ಟಿಸುವುದು ಹಾಗೂ ಕಾರ್ಯದ್ದರಹಿತವಾದ ಪರಿಸ್ಥಿತಿಯನ್ನು ನಿರ್ಮಿಸುವುದೆಂದೇ ಅರ್ಥೈಸುತ್ತಾರೆ.

ಅರಾಜಕತಾವಾದಿ ತತ್ವಶಾಸ್ತ್ರವು ಪ್ರಭುತ್ವವನ್ನು ದಬ್ಬಾಳಿಕೆಯ ಸಾಧನವೆಂದು ಪರಿಭಾವಿಸುತ್ತದೆ. ಆದ್ದರಿಂದ ಅರಾಜಕತಾವಾದಿಗಳು ಪ್ರಭುತ್ವವೇ ಇಲ್ಲದ ಹೊಸ ಸಮಾಜವನ್ನು ನಿರ್ಮಿಸುವ ಧ್ಯೇಯ ಹೊಂದಿರುತ್ತಾರೆ. ಹಾಗಾಗಿ ಪ್ರಭುತ್ವರಹಿತವಾದ ಒಂದು ನವೀನ ಸಮಾಜದ ರಚನೆಯ ಹಂಬಲದಿಂದ ತುಡಿಯುತ್ತ, ತಮ್ಮ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸಲು ಯತ್ನಿಸುತ್ತಾರೆ. ಅರಾಜಕತಾವಾದಿ ಚಿಂತಕರಲ್ಲಿಯೂ ಅನೇಕ ಪ್ರಭೇದಗಳಿವೆ. ಸಾಮಾನ್ಯವಾಗಿ ಇಂಥ ಅರಾಜಕತಾವಾದಿ ಸಿದ್ಧಾಂತವನ್ನು ರ್ಯಾಡಿಕಲ್ ಎಡಪಂಥೀಯ ವಿಚಾರಧಾರೆಯೆಂದು ಬಗೆಯಲಾಗುತ್ತದೆ.

ಪ್ರಥಮ ಅಂತರಾಷ್ಟ್ರೀಯವನ್ನು ಸಂಸ್ಥಾಪಿಸಿದ ಕಾರ್ಲ್‌ಮಾರ್ಕ್ಸ್ ಹಾಗೂ ಅರಾಜಕತಾವಾದಿಗಳ ನಡುವೆ ಸಾಕಷ್ಟು ಅಭಿಪ್ರಾಯ ಭಿನ್ನತೆಗಳಿದ್ದವು. ಸೈದ್ಧಾಂತಿಕ ವ್ಯತ್ಯಾಸಗಳಿದ್ದವು. ಅರಾಕತಾವಾದಿಗಳು ಪ್ರಭುತ್ವವನ್ನು ದಬ್ಬಾಳಿಕೆಯ ಸಾಧನವೆಂದು ಬಗೆದು ಅದರ ಅಸ್ತಿತ್ವವೇ ಇಲ್ಲದಂಥ ಸಾಮಾಜಿಕ ವ್ಯವಸ್ಥೆಯನ್ನು ರಚಿಸಲು ಹೆಣಗಿದರೆ, ಕಾರ್ಲ್ ಮಾರ್ಕ್ಸ್, ಧನಿಕ ವರ್ಗದ ಪ್ರಭುತ್ವವು ದಮನದ ಸಾಧನವಾಗಿದ್ದರೂ ಅದನ್ನು ಒಮ್ಮೆಲೇ ನಿರ್ನಾಮಿಸಲು ಸಾಧ್ಯವಿಲ್ಲ. ಸಮಾಜವಾದಿ ವ್ಯವಸ್ಥೆ ಸ್ಥಾಯಿಗೊಂಡು ಕ್ರಮೇಣ ಕಮ್ಯುನಿಸ್ಟ್ ಸಮಾಜದೆಡೆಗೆ ಸಾಗುವಾಗ ಪ್ರಭುತ್ವ ಅವನತಿಯ ದಾರಿ ಹಿಡಿಯುತ್ತದೆ. ಒಂದು ಪ್ರಬುದ್ಧವಾದ, ಪರಿಪೂರ್ಣವಾದ ಕಮ್ಯುನಿಸ್ಟ್ ಸಮಾಜದ ಸಂಸ್ಥಾಪನೆಯೊಂದಿಗೆ ಅದು ಒಂದು ದಬ್ಬಾಳಿಕೆಯ ಸಾಧನವಾಗಿ ಉಳಿಯದೆ, ಸಹಕಾರದ ಸಂಚಾಲಕನಾಗಿ ಕಾರ್ಯ ನಿರ್ವಹಿಸುತ್ತದೆ ಎಂದು ಪ್ರತಿಪಾದಿಸಿದ್ದನು. ಆದರೆ ಈ ನಿಲುವು ಅರಾಜಕತಾವಾದಿಗಳಿಗೆ ಸ್ವೀಕಾರಾರ್ಹ ವಾಗಿರಲಿಲ್ಲ.

ವಿಚಾರಣೆಯ ಸಂದರ್ಭದಲ್ಲಿ ನ್ಯಾಯಾಲಯದ ಮುಂದೆ ತನ್ನ ಸಿದ್ಧಾಂತವನ್ನು ವಿವರಿಸುತ್ತ, ಆಲ್‌ಬರ್ಟ್ ಪಾರ್‌ಸನ್ಸ್ ಹೀಗೆ ಹೇಳಿಕೆ ನೀಡಿದ್ದನು :'ನಾನೊಬ್ಬ ಅರಾಜಕತಾವಾದಿ... ಸಮಾಜವಾದ ಅಥವಾ ಅರಾಜಕತಾವಾದ ಎಂದರೆ ಏನು? ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ಅದೊಂದು ವಿಶಿಷ್ಟವಾದ ವ್ಯವಸ್ಥೆ. ಅದರಲ್ಲಿ ದುಡಿಯುವವರಿಗೆ ತಮ್ಮ ದುಡಿಮೆಯ ಸಾಧನ-ಸಲಕರಣೆಗಳ ಮೇಲೆ ಮುಕ್ತವಾದ ಮತ್ತು ಸಮಾನವಾದ ಹಕ್ಕುಗಳಿರುತ್ತವೆ; ಉತ್ಪಾದಿಸಿದವರೇ ಉತ್ಪಾದನೆಗಳ ಮಾಲೀಕರಾಗಿರುತ್ತಾರೆ. ಅಲ್ಲಿ ಯಾರೂ ಯಾರನ್ನೂ ಕೊಳ್ಳೆ ಹೊಡೆಯುವ, ಸುಲಿಗೆ ಮಾಡುವ ಅವಕಾಶಗಳಿರುವುದಿಲ್ಲ. ಅದುವೇ ಸಮಾಜವಾದ.'

ಪ್ರೊಫೆಸರ್ ವಿಲಿಯಮ್ ಆ್ಯಡೆಲ್‌ಮನ್ ಗುರುತಿಸಿರುವಂತೆ, ಚಿಕಾಗೋ ಅರಾಜಕತಾವಾದಿಗಳು ಮಹತ್ವದ ಉದ್ಯಮಗಳ ಮೇಲೆ ಕಾರ್ಮಿಕರ ನಿಯಂತ್ರಣವಿರಬೇಕೆಂದು ನಂಬಿದ್ದರು.

ಚಿಕಾಗೋ ಹುತಾತ್ಮರೆಲ್ಲರಿಗೂ ಸಮಾಜವಾದಿ ವ್ಯವಸ್ಥೆಯ ನಿರ್ಮಾಣದ ಬಗ್ಗೆ ಅಸ್ಪಷ್ಟವಾದ ವಿಚಾರಗಳಿದ್ದವು. ಪ್ರಭುತ್ವದ ಅಧಿಕಾರ ಉಳಿಸಿಕೊಳ್ಳುವುದರ ಪರವಾಗಿಲ್ಲದಿದ್ದ ಅವರು ಸಹಜವಾಗಿಯೇ ಅದನ್ನು ನಿರ್ನಾಮಿಸುವ ಹಂಬಲ ಹೊಂದಿದ್ದರು. ಅದು ದಬ್ಬಾಳಿಕೆಯ ಸಾಧನವಾಗಿರುವುದರಿಂದ ಏಕ್‌ದಮ್ ನಾಶವಾಗಬೇಕೆಂದು ಬಯಸುತ್ತಿದ್ದರು. ಅದು ಕ್ರಮೇಣ ಅವಸಾನಿಸಬೇಕೆಂಬುವುದರ ಬಗ್ಗೆ ಅವರಿಗೆ ಸಮ್ಮತಿಯಿರಲಿಲ್ಲ.

1886 ರಲ್ಲಿ ಸಂಭವಿಸಿದ ಹೇ ಮಾರ್ಕೆಟ್ ಘಟನೆಯ ಪೂರ್ವೋತ್ತರದ ಬೆಳವಣಿಗೆಗಳನ್ನು ಅರಿತು ಅರ್ಥೈಸಿಕೊಳ್ಳಲು ಯತ್ನಿಸುವ ಮುಂಚೆ ನಾವು ಅರಾಜಕತಾವಾದಿಗಳ ಈ ವೈಚಾರಿಕ ಪರಿಕಲ್ಪನೆಯನ್ನು ನೆನಪಿಟ್ಟುಕೊಳ್ಳುವುದು ಅವಶ್ಯಕ.

ಈ ಕೃತಿಯನ್ನು ಮುದ್ರಣಕ್ಕೆ ಸಿದ್ಧಗೊಳಿಸಲು ಸಿಐಟಿಯುನ ನನ್ನ ಅನೇಕ ಸಹೋದ್ಯೋಗಿಗಳು ಸಾಕಷ್ಟು ಶ್ರಮಿಸಿದ್ದಾರೆ. ಅವರು ತೋರಿದ ತೀವ್ರವಾದ ಆಸಕ್ತಿ ಹಾಗೂ ನೀಡಿದ ಸಹಾಯದ ಕಾರಣಗಳಿಂದಾಗಿಯೇ ಈ ಕೃತಿ ಬೆಳಕು ಕಾಣುತ್ತಿದೆ. ಇದರ ಪ್ರಕಟಣೆಯ ಸಾಹಸದ ಕೀರ್ತಿ ಮೂಲತಃ ಅವರಿಗೇ ಸಲ್ಲಬೇಕು.

ಇಂಗ್ಲೀಷ್ ಆವೃತ್ತಿ ಮುದ್ರಿಸಿದ ಪ್ರೊಗ್ರೆಸ್ಸಿವ್ ಪ್ರಿಂಟರ್ಸ್‌ನ ಅಜೇಯಕುಮಾರರ ಶ್ರಮಪೂರ್ಣ ಪ್ರಯತ್ನಗಳಿಗಾಗಿ ನಾನು ಆಭಾರಿಯಾಗಿದ್ದಾನೆ. ಅವರ ಕೌಶಲ್ಯದಿಂದಾಗಿಯೇ ಈ ಕೃತಿ ಇಷ್ಟು ಸುಂದರವಾಗಿ ಮೂಡಿದೆ.

ಈ ಅಮೂಲ್ಯವಾದ ಗ್ರಂಥದೊಳಗಿನ ಮಾಹಿತಿಯನ್ನು ಭಾರತೀಯ ವಾಚಕರಿಗೆ ತಲುಪಿಸಲು ಉದಾರವಾಗಿ ಪರವಾನಿಗೆ ನೀಡಿರುವ ಇಲಿನಾಯ್ ಲೇಬರ್ ಹಿಸ್ಟರಿ ಸೊಸಾಯಿಟಿಗೆ ನಾನು ಋಣಿಯಾಗಿದ್ದೇನೆ. ಅವರ ಅನುಮತಿಯಿಂದಾಗಿಯೇ ಈ ಗ್ರಂಥದ ಭಾರತೀಯ ಆವೃತ್ತಿ ಪ್ರಕಟಣೆಗೊಳ್ಳುತ್ತಿದೆ. ನಾವು ಈ ಆವೃತ್ತಿಯ ಶೀರ್ಷಿಕೆಯನ್ನು ಬದಲಾಯಿಸಿದ್ದೇವೆ. ಆದರೂ ಭಾಷಾ ದೃಷ್ಟಿಯಿಂದ ಅಮೇರಿಕೆಯ ಸ್ಪೆಲಿಂಗುಗಳನ್ನೇ ಉಳಿಸಿಕೊಂಡಿದ್ದೇವೆ. ಜಾಗತಿಕ ಮಹತ್ವವಿರುವ ಇಂಥ ವಿಷಯದ ಕುರಿತು ವಿವರವಾದ ಕೃತಿ ರಚಿಸಿರುವ ಪ್ರೊಫೆಸರ್ ವಿಲಿಯಮ್.ಜೆ. ಆ್ಯಡೆಲ್‌ಮನ್ ಅವರಿಗೆ ನಾವು ಕೃತಜ್ಞರಾಗಿದ್ದೇವೆ. ಎಲ್ಲ ರೀತಿಯಿಂದಲೂ ಇದೊಂದು ಗಮನಾರ್ಹ ಗ್ರಂಥವೆಂಬುದರಲ್ಲಿ ಎರಡು ಮಾತಿಲ್ಲ.

ಭಾರತೀಯ ವಾಚಕರು ಈ ಕೃತಿಯನ್ನು ಅತ್ಯುತ್ಸಾಹದಿಂದ ಸ್ವಾಗತಿಸುತ್ತಾರೆಂಬ ವಿಶ್ವಾಸ ನಮಗಿದೆ. ಈ ಕೃತಿಯ ಮೂಲಕ ಹೇ ಮಾರ್ಕೆಟ್ ಹುತಾತ್ಮರ ಅಮರ ಕಥೆ ಭಾರತೀಯರ ಮನ ಸೂರೆಗೊಂಡು ಆ ಧೀರ ಹೋರಾಟಗಾರರ ತ್ಯಾಗದ ವಿವರಗಳು ನಮ್ಮ ಮನಸ್ಸಿನ ಮೇಲೆ ಅಚ್ಚೊತ್ತಿ ನಿಂತರೆ, ಅವರ ಬಲಿದಾನದ ಸ್ಮೃತಿಗಳನ್ನು ಮುಂದಿನ ಯುಗಯುಗಾಂತರಗಳಿಗೆ ತಲುಪಿಸಲು ಸಾಧ್ಯವಾದರೆ, ಈ ಪ್ರಕಟಣೆಯ ಉದ್ದೇಶ ಸಾರ್ಥಕವಾಯಿತೆಂದೇ ಭಾವಿಸುತ್ತೇವೆ.

ಅನುಭವದ ಮಾತು

ಕಾರ್ಮಿಕರು ರೈತ ಜನ ಹಿತ ಕಾಯುವಂಥ
ಒಂದೇ ಒಂದು ಸಂಘಟನೆಯು ಎಡಪಂಥ
ಕಳೆದಾರು ದಶಕಗಳು ಅನುಭವದಿ ತೂಗಿ
ಈ ಸತ್ಯ ಸಾರುತಿಹೆ ಬೀದಿಯೊಳು ಕೂಗಿ

- ವಿಡಂಬಾರಿ

ಉ.ಕ. ಜಿಲ್ಲೆಯಲ್ಲಿ ಉದ್ಯೋಗ ಖಾ ಯೋಜನೆ ಸಮರ್ಪಕ ಜಾರಿಗೆ ಆಗ್ರಹ

ಸಚಿವ ಕಾಗೇರಿ ಕಾರ್ಯಾಲಯ ಮುತ್ತಿಗೆ

ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಉದ್ಯೋಗ ಖಾತರಿ ಯೋಜನೆ ಮೂಲ ಉದ್ದೇಶ ನಾಶ ಮಾಡಲಾಗಿದೆ. ಯೋಜನೆಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆಯುತ್ತಿದೆ. ವರ್ಷ ಕಳೆದರೂ ಕೂಲಿಕಾರರ ವೇತನ ಬಾಕಿ ಪಾವತಿ ಆಗುತ್ತಿಲ್ಲ.

ಕೆಲಸ ಮಾಡುವವರಿಗೆ ಉದ್ಯೋಗ ಖಾತರಿ ಚೀಟಿಗಳನ್ನು ನೀಡಲಾಗುತ್ತಿಲ್ಲ. ಕೆಲಸ ಮಾಡದವರೊಗೆ ಉದ್ಯೋಗ ಖಾತರಿ ಚೀಟಿ ನೀಡಿ ಆ ಚೀಟಿ ಮೂಲಕ ರಾಜ್ಯದಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ಜನಪ್ರತಿನಿಧಿಗಳ ನೇತೃತ್ವದಲ್ಲಿ ಲೂಟಿ ಮಾಡಲಾಗುತ್ತಿದೆ. ಹೀಗಾಗಿ ಉದ್ಯೋಗ ಖಾತರಿ ಹಣ ಲೂಟಿಗಾಗಿ ಇರುವ ಯೋಜನೆ ಎಂಬಂತಾಗಿದೆ. ಈ ಹಿನ್ನೆಲೆಯಲ್ಲಿ ಭ್ರಷ್ಟಾಚಾರ ರಹಿತ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆ



ಜಾರಿಗೆ ಒತ್ತಾಯಿಸಿ ಮೇ 16 ಪಂಗು ಕೆಪಿಆರ್‌ಎಸ್, ಸಿಐಟಿಯು, ಪ್ರಾಂತ ಕೃಷಿ ಕೂಲಿಕಾರರ ಸಂಘ, ಡಿವೈಎಫ್ಐ ಮುಂತಾದ ವಿವಿಧ ಸಂಘಟನೆಗಳು, ಶಿರಸಿ ನಗರದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿ ಜಿಲ್ಲಾ ಉಸ್ತುವಾರಿ ಸಚಿವರ ಕಛೇರಿ ಎದುರು ಸಭೆ ಸೇರಿ ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಪ್ರತಿಭಟಿಸಲಾಯಿತು.


ಹಳೇ ಬಸ್ ನಿಲ್ದಾಣದಿಂದ ಪ್ರತಿಭಟನಾ ನಿರತರು ಮೆರವಣಿಗೆಯಲ್ಲಿ ಬಂದು ನಿರತರು ಮೆರವಣಿಗೆಯಲ್ಲಿ ಬಂದು ಸಚಿವರ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ರಾಜ್ಯ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಶಾಸಕರು ಮಾರ್ಕೆಟ್ ವಸ್ತುಗಳಾಗಿದ್ದು, ಶಾಸಕರ ಖರೀದಿ ನಡೆಯುತ್ತಿದೆ ಎಂದು ಪ್ರಾಂತ ರೈತ ಸಂಘದ ಮುಖಂಡರಾದ ಶಾಂತರಾಮನಾಯಕ್ ಖಂಡಿಸಿದರು.

ಬಿಜೆಪಿಯಿಂದ ಜನ ಸಾಕಷ್ಟು ನಿರೀಕ್ಷಿಸಿದ್ದರು. ಆದರೆ ಬಿಜೆಪಿ ಭ್ರಷ್ಟಾಚಾರದ ಕೊಡುಗೆ ನೀಡಿದೆ. ರಾಜ್ಯದ ಮುಖ್ಯಮಂತ್ರಿ ಫೆವಿಕಾಲ್‌ನಂತೆ ಕುರ್ಚಿಗೆ ಅಂಟಿ ಕುಳಿತಿದ್ದಾರೆ. ಎಮ್ಮೆ ಖರೀದಿಯಂತೆ ಎಂಎಲ್‌ಎಗಳ ಖರೀದಿ ನಡೆಯುತ್ತಿದೆ ಎಂದು ಹರೀಶ್ ನಾಯ್ಕ ಟೀಕಿಸಿದರು.

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್, ಕರ್ನಾಟಕ ಪ್ರಾಂತ ರೈತ ಸಂಘ, ಕೃಷಿ ಕೂಲಿಕಾರರ ಸಂಘಟನೆಯ ಪ್ರಮುಖರಾದ ಯಮುನಾ ಗಾಂವಕರ್, ನಾಗಪ್ಪ ನಾಯ್ಕ, ಭೀಮಣ್ಣ ಭೋವಿ, ಡಿ.ಸ್ಯಾಮಸನ್ ಮತ್ತಿತರರು ಇದ್ದರು. ○





ಕಾರವಾರದಲ್ಲಿ ಸಂಭ್ರಮದ ಮೇ ದಿನ ದಿನಾಚರಣೆ ಮತ್ತು ವಿಚಾರಸಂಕಿರಣ

ಶಾಂತರಾಮನಾಯಕ್ ಮಾತನಾಡುತ್ತಿದ್ದಾರೆ. ಸಿಐಟಿಯು ರಾಜ್ಯ ಪ್ರ.ಕಾರ್ಯದರ್ಶಿ ಪ್ರಸನ್ನಕುಮಾರ್,ಅಖಿಲ ಭಾರತ ಅಧ್ಯಕ್ಷರಾದ ಎಂ.ಕೆ.ಪದ್ಮನಾಭನ್ ಪಾಲ್ಗೊಂಡಿದ್ದರು. ಉತ್ಸಾಹಿ ಕಾರ್ಮಿಕರು (ಕೆಳಗಿನ ಚಿತ್ರ)





ಬಾಗೇಪಲ್ಲಿಯಲ್ಲಿ ಮೇ ದಿನದ ಸಂಭ್ರಮ

ಮೇ ದಿನದ ಮೆರವಣಿಗೆಯಲ್ಲಿ ಬಾಗೇಪಲ್ಲಿ ಮಾಜಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ, ಸಿಐಟಿಯು ರಾಜ್ಯ ಕಾರ್ಯದರ್ಶಿ ಎಸ್.ವರಲಕ್ಷ್ಮಿ ಮುಂತಾದವರು. ಬೃಹತ್ ಸಂಖ್ಯೆಯಲ್ಲಿ ನೆರೆದಿರುವ ಕಾರ್ಮಿಕರು (ಕೆಳಗಿನ ಚಿತ್ರ)



ಒಂದು ದೀರ್ಘ ಮತ್ತು ಕಠಿಣ ಹೋರಾಟ ನಮ್ಮ ಮುಂದಿದೆ

ಅನನ್ಯ ದಾಖಲೆ ನಿರ್ಮಿಸಿದ ಎಡ-ನೇತೃತ್ವದ ಸರಕಾರವನ್ನು ಕಳಕೊಂಡಿರುವುದು ಒಂದು ಗಂಭೀರ ಹಿನ್ನಡೆಯಾದರೂ, ಅದೊಂದು ಶಾಶ್ವತ ಮತ್ತು ಮೂಲಭೂತ ನಷ್ಟ ಎಂದು ನೋಡಲಾಗದು. ಪಶ್ಚಿಮ ಬಂಗಾಲದಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಬೆಳೆದಿರುವುದು, ಅಭಿವೃದ್ಧಿ ಹೊಂದಿರುವುದು ನಾಲ್ಕು ದಶಕಗಳ ಅಸಂಖ್ಯ ಹೋರಾಟಗಳು ಮತ್ತು ಜನತಾ ಆಂದೋಲನಗಳ ಮೂಲಕ. ಎಡರಂಗದ ಚುನಾವಣಾ ಯಶಸ್ಸು ಇಂತಹ ಆಂದೋಲನಗಳು, ಹೋರಾಟಗಳು ನಿರ್ಮಿಸಿದ ಸಾಮೂಹಿಕ ನೆಲೆಯ ಫಲಿತಾಂಶ. ಎಡರಂಗ ಕೇವಲ ಒಂದು ಚುನಾವಣಾ ಮೈತ್ರಿಕೂಟವಲ್ಲ. ಅಥವ ಸಿಪಿಐ(ಎಂ) ಒಂದು ಬಲಿಷ್ಟ ಸಾಮೂಹಿಕ ಪಕ್ಷವಾಗಿ ಬೆಳೆದಿರುವುದು ಕೇವಲ ಅದರ ಚುನಾವಣಾ ಚಟುವಟಿಕೆಗಳಿಂದೇನೂ ಅಲ್ಲ.

ನಿಜ, ಈ ಅನನ್ಯ ದಾಖಲೆಯನ್ನು, ದುಡಿಯುವ ಜನತೆಯ ಗಳಿಕೆಗಳನ್ನು ಕಾಪಾಡಿಕೊಳ್ಳಲು ಒಂದು ದೀರ್ಘ ಮತ್ತು ಕಠಿಣ ಹೋರಾಟ ಪಶ್ಚಿಮ ಬಂಗಾಲದ ಪಕ್ಷ ಮತ್ತು ಎಡರಂಗದ ಮುಂದೆ ಮಾತ್ರವೇ ಅಲ್ಲ, ಸಮಸ್ತ ಪಕ್ಷದ, ದೇಶದ ಸಮಸ್ತ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಮುಂದಿದೆ ಎನ್ನುತ್ತಾರೆ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು, ಚುನಾವಣಾ ಫಲಿತಾಂಶಗಳ ವಿಶ್ಲೇಷಣೆ ಮಾಡಿರುವ ಈ ಲೇಖನದಲ್ಲಿ.

ಪ್ರಕಾಶ್ ಕಾರಟ್

ಪಶ್ಚಿಮ ಬಂಗಾಲ ವಿಧಾನ ಸಭಾ ಚುನಾವಣೆಗಳಲ್ಲಿ ಎಡರಂಗಕ್ಕೆ ಒಂದು ದೊಡ್ಡ ಸೋಲುಂಟಾಗಿದೆ. ಇದು ಪಶ್ಚಿಮ ಬಂಗಾಲ ಎಡಶಕ್ತಿಗಳ ಭದ್ರಕೋಟೆ ಎಂದು ಪರಿಗಣಿಸಿರುವ ದೇಶದ ಎಡ, ಪ್ರಜಾಪ್ರಭುತ್ವವಾದಿ ಮತ್ತು ಪ್ರಗತಿಪರ ಶಕ್ತಿಗಳಿಗೆ ಒಂದು ಪ್ರಮುಖ ನಿರಾಸೆಯಾಗಿ ಎರಗಿದೆ. 34 ವರ್ಷಗಳ ಎಡರಂಗ ಸರಕಾರ ಮತ್ತು 1977ರ ನಂತರ ಸತತ ಏಳು ಬಾರಿ ಗೆದ್ದಿರುವ ಗಮನಾರ್ಹ ದಾಖಲೆಯ ನಂತರ ನಡೆದ ಮತದಾನದಲ್ಲಿ ಸಿಪಿಐ(ಎಂ) ನೇತೃತ್ವದ ಎಡರಂಗ ಸರಕಾರ ಅಧಿಕಾರವನ್ನು ಬಿಡಬೇಕಾಗಿ ಬಂದಿದೆ. ತೀರ್ಪಿನ ಕೆಲವು ಸಾರ್ವತ್ರಿಕ ಲಕ್ಷಣಗಳು ಎದ್ದು ಕಾಣುತ್ತಿವೆ. ಜನತೆ ಪರಿವರ್ತನೆ ಬೇಕೆಂದು ನಿರ್ಣಾಯಕವಾಗಿ ಆರಿಸಿಕೊಂಡಿದ್ದಾರೆ ಹಾಗು ಟಿಎಂಸಿ ಕೂಟಕ್ಕೆ ಒಂದು ಭಾರಿ ವಿಜಯ ಕೊಟ್ಟಿದ್ದಾರೆ. ಬಲಪಂಥೀಯರಿಂದ ಹಿಡಿದು ಅತ್ಯಂತ ಎಡಪಂಥೀಯ ಮಾವೋವಾದಿಗಳವರೆಗೆ ಎಲ್ಲ ಎಡ-ವಿರೋಧಿ ಶಕ್ತಿಗಳ ಪೂರ್ಣ ಕ್ರೋಢೀಕರಣ ನಡೆದಿದೆ. ಕಳೆದೆರಡು ವರ್ಷಗಳಲ್ಲಿ ಕಳಕೊಂಡ ನೆಲೆಯನ್ನು ಮತ್ತೆ ಗಳಿಸಿಕೊಳ್ಳಲು ಎಡರಂಗಕ್ಕೆ ನಾವು ನಿರೀಕ್ಷಿಸಿದಷ್ಟು ಸಾಧ್ಯವಾಗಿಲ್ಲ.

ಎಡರಂಗದ ಬೆಂಬಲ ಕಡಿತಗೊಳ್ಳಲಿಕ್ಕೆ ಮತ್ತು ರಾಜಕೀಯ ಪಲ್ಲಟಕ್ಕೆ ಕಾರಣಗಳನ್ನು ಗುರುತಿಸಲು ಫಲಿತಾಂಶಗಳ ಒಂದು ಸಮಗ್ರ ಪರಾಮರ್ಶೆಯನ್ನು ಪಕ್ಷ ನಡೆಸುತ್ತದೆ. ಎಡರಂಗ 2009ರ ಲೋಕಸಭಾ ಚುನಾವಣೆಗಳಲ್ಲಿ ಪಡೆದದ್ದಕ್ಕಿಂತ 11 ಲಕ್ಷ ಹೆಚ್ಚು ಮತಗಳನ್ನು ಪಡೆದರೂ ಲೋಕಸಭಾ ಚುನಾವಣೆಗಳಿಗೆ ಹೋಲಿಸಿದರೆ ಮತಗಳಿಕೆಯಲ್ಲಿ 2.2% ಇಳಿಕೆಯಾಗಿದೆ. ಮೂರು ದಶಕಗಳ ಎಡ ಆಳ್ವಿಕೆಯಲ್ಲಿ ಘನವಾದ ಸಾಧನೆಗಳಿದ್ದರೂ, ದೀರ್ಘಕಾಲ ಸರಕಾರದಲ್ಲಿ ಇದ್ದುದರಿಂದ ಕೆಲವು ನಕಾರಾತ್ಮಕ ಅಂಶಗಳು ಶೇಖರಣೆಗೊಂಡವು. ಚುನಾವಣಾ ಪ್ರವೃತ್ತಿಗಳನ್ನು ಪಕ್ಷದ ರಾಜಕೀಯ ಮತ್ತು ಸಂಘಟನಾ ಕೆಲಸದ ಸಂದರ್ಭದಲ್ಲಿಟ್ಟು ವಿಮರ್ಶಾತ್ಮಕವಾಗಿ ಪರೀಕ್ಷಿಸಿದರೆ ಅದು ನಮ್ಮ ನಿಲುವಿನಲ್ಲಿನ ದೋಷಗಳನ್ನು ಸರಿಪಡಿಸಲು ಹಾಗೂ ಸಂಘಟನಾ ಕೊರತೆಗಳನ್ನು ತುಂಬಲು ನೆರವಾಗಬಲ್ಲುದು.

ಕೇರಳದಲ್ಲಿ, ಎಲ್‌ಡಿಎಫ್ ಸ್ವಲ್ಪದರಲ್ಲೇ ಕಳಕೊಂಡಿತು, ಬಹುಮತಕ್ಕೆ ಮೂರು ಸ್ಥಾನಗಳು ಕಡಿಮೆಯಾದವು. ಯುಡಿಎಫ್‌ಗೆ ಕೇವಲ ಎರಡು ಸ್ಥಾನಗಳ ಬಹುಮತದಿಂದ ಅಧಿಕಾರಕ್ಕೆ ಬರಲು ಸಾಧ್ಯವಾಗಿದೆ. ಯುಡಿಎಫ್ ಮತ್ತು ಎಲ್‌ಡಿಎಫ್‌ನ ಮತಗಳಿಕೆಯಲ್ಲಿನ ವ್ಯತ್ಯಾಸ ಕೇವಲ 0.89%. ಇದು, ಜನತೆ ಒಟ್ಟಾರೆಯಾಗಿ ಎಲ್‌ಡಿಎಫ್ ಆಳ್ವಿಕೆಯಿಂದ ತೃಪ್ತರಾಗಿದ್ದಾರೆ, ಅಧಿಕಾರಸ್ಥ-ವಿರೋಧಿ ಅಂಶ ಕೆಲಸ ಮಾಡಿಲ್ಲೆಂಬುದನ್ನು ತೋರಿಸುತ್ತದೆ. ಮುಖ್ಯಮಂತ್ರಿ ವಿ.ಎಸ್.ಅಚ್ಯುತಾನಂದನ್‌ರವರ ಭ್ರಷ್ಟಾಚಾರ-ವಿರೋಧಿ ಸಮರಕ್ಕೂ ಜನತೆಯ ಅನುಮೋದನೆ ದೊರೆತಿದೆ. ಕೆಲವು ಜನವಿಭಾಗಗಳು ಜಾತಿ ಮತ್ತು ಮತೀಯ ಸಂಸ್ಥೆಗಳ ಪ್ರಭಾವಕ್ಕೆ ಒಳಗಾಗಿರುವುದು ಎಲ್‌ಡಿಎಫ್ ಗೆಲುವಿಗೆ ಅಡಚಣೆ ತಂದಿದೆ ಎಂಬುದು ಪ್ರಾಥಮಿಕ ವರದಿಗಳಿಂದ ಕಂಡು ಬರುತ್ತಿದೆ. ಒಂದು ದೊಡ್ಡ ಜನವಿಭಾಗ ಕೇಂದ್ರದ ಯುಪಿಎ ಸರಕಾರದ ಭ್ರಷ್ಟಾಚಾರ ಮತ್ತು ಬೆಲೆಯೇರಿಕೆಯ ಧೋರಣೆಗಳಿಂದಾಗಿ ಕಾಂಗ್ರೆಸ್ ಮೈತ್ರಿಕೂಟದತ್ತ ಆಕರ್ಷಿತರಾಗಿಲ್ಲ.

ಹುಸಿ ವಿಶ್ಲೇಷಣೆಗಳು

ಪಶ್ಚಿಮ ಬಂಗಾಲದಲ್ಲಿ ಸೋಲನ್ನು ಅನುಸರಿಸಿ ಕಾರ್ಪೊರೇಟ್ ಮಾಧ್ಯಮಗಳಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ವಿರುದ್ಧ ಅಪಪ್ರಚಾರದ ಮಹಾಪೂರವೇ ಹರಿದು ಬರುತ್ತಿದೆ. ಈ ಫಲಿತಾಂಶಗಳು ಸಿಪಿಐ(ಎಂ)ಗೆ ಭಾರೀ ಅನಾಹುತವನ್ನೆ ತಂದಿವೆ, ಇದರಿಂದ ಚೇತರಿಸಿಕೊಳ್ಳುವುದು ಅದಕ್ಕೆ ಸಾಧ್ಯವೇ ಇಲ್ಲ ಎಂದು ಚಿತ್ರಿಸಲಾಗುತ್ತಿದೆ. ಕೆಲವು ಟಿಪ್ಪಣಿಗಾರರು ಕಮ್ಯುನಿಸ್ಟ್ ತತ್ವಸಿದ್ಧಾಂತ ಈಗಿನ ಕಾಲಕ್ಕೆ ಹೊಂದಿಕೊಳ್ಳಲಾರದ ಒಂದು ವಿಸಂಗತಿ, ಅದೀಗ ಅಪ್ರಸ್ತುತವಾಗಿದೆ, ಸಮಾಜವಾದ ಮತ್ತು ಮಾರ್ಕ್ಸ್‌ವಾದದ ಪ್ರಸ್ತುತತೆ ವಿಶ್ವಾದ್ಯಂತ ಕೊನೆಗೊಂಡಿದ್ದು, ಈ ಚುನಾವಣಾ ತೀರ್ಪು ಅದರ ಚರಮಬಿಂದು ಎನ್ನುತ್ತಿದ್ದಾರೆ. ಮತ್ತೊಂದು ಸ್ವರೂಪದ ದಾಳಿಯೆಂದರೆ, ಎಡರಂಗದ ಸಮಸ್ತ ದಾಖಲೆಯನ್ನು ದೂಷಿಸುವುದು ಮತ್ತು ಸಿಪಿಐ(ಎಂ) ಜನತೆಯನ್ನು ದಮನ ಮಾಡಿದ ಒಂದು ಸರ್ವಾಧಿಕಾರಶಾಹಿ ಪಕ್ಷ ಎಂದು ಚಿತ್ರಿಸುವುದು. ಇದರೊಂದಿಗೆ ಹಾಕಿರುವ ಒಂದು ಆಪಾದನೆಯೆಂದರೆ, ಪಶ್ಚಿಮ ಬಂಗಾಲದ ಎಡರಂಗ ಸರಕಾರ ಸ್ವಭಾವತಃ ಪ್ರಜಾಪ್ರಭುತ್ವ-ವಿರೋಧಿ ಮತ್ತು ಒಂದು ಸರ್ವಾಧಿಕಾರಶಾಹಿ ವ್ಯವಸ್ಥೆ, ಎಲ್ಲ ಭಿನ್ನಾಭಿಪ್ರಾಯವನ್ನು ಚಚ್ಚಿ ಹಾಕಿ ಪಶ್ಚಿಮ ಬಂಗಾಲದ ಸಮಾಜದ ಮೇಲೆ ನಿರ್ಬಂಧಗಳನ್ನು ಹೇರಿರುವ ವ್ಯವಸ್ಥೆ ಎಂಬುದು. ಇವೆಲ್ಲ ಪ್ರಬಲ ವರ್ಗಗಳ ಮತ್ತು ಪಟ್ಟಭದ್ರರ ಏಜೆಂಟರ ಹುಸಿ ವಿಶ್ಲೇಷಣೆಗಳು ಎಂದು ಸಾಬೀತಾಗುತ್ತದೆ.

ಅಪಪ್ರಚಾರದ ಮಹಾಪೂರ

ಪಶ್ಚಿಮ ಬಂಗಾಲದಲ್ಲಿ ಸೋಲನ್ನು ಅನುಸರಿಸಿ ಕಾರ್ಪೊರೇಟ್ ಮಾಧ್ಯಮಗಳಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ವಿರುದ್ಧ ಅಪಪ್ರಚಾರದ ಮಹಾಪೂರವೇ ಹರಿದು ಬರುತ್ತಿದೆ. ಈ ಫಲಿತಾಂಶಗಳು ಸಿಪಿಐ(ಎಂ)ಗೆ ಭಾರೀ ಅನಾಹುತವನ್ನೆ ತಂದಿವೆ, ಇದರಿಂದ ಚೇತರಿಸಿಕೊಳ್ಳುವುದು ಅದಕ್ಕೆ ಸಾಧ್ಯವೇ ಇಲ್ಲ ಎಂದು ಚಿತ್ರಿಸಲಾಗುತ್ತಿದೆ. ಕೆಲವು ಟಿಪ್ಪಣಿಗಾರರು ದಾಳಿಗೆ ಇನ್ನೊಂದು ದಾರಿ ಹಿಡಿದಿದ್ದಾರೆ. ಅದೆಂದರೆ ಕಮ್ಯುನಿಸ್ಟ್ ತತ್ವ ಸಿದ್ಧಾಂತ ಈಗಿನ ಕಾಲಕ್ಕೆ ಹೊಂದಿಕೊಳ್ಳಲಾರದ ಒಂದು ವಿಸಂಗತಿ, ಅದೀಗ ಅಪ್ರಸ್ತುತವಾಗಿದೆ, ಸಮಾಜವಾದ ಮತ್ತು ಮಾರ್ಕ್ಸ್‌ವಾದದ ಪ್ರಸ್ತುತತೆ ವಿಶ್ವಾದ್ಯಂತ ಕೊನೆಗೊಂಡಿದ್ದು, ಈ ಚುನಾವಣಾ ತೀರ್ಪು ಅದರ

ದೊಡ್ಡ ಸಾಮೂಹಿಕ ನೆಲೆ

ಪಶ್ಚಿಮ ಬಂಗಾಲದಲ್ಲಿ ಸಿಪಿಐ(ಎಂ) ಮತ್ತು ಎಡರಂಗದ ಚರಮಗೀತೆಯನ್ನು ಹಾಡುತ್ತಿರುವವರು, ಈ ಸೋಲಿನಲ್ಲೂ ಎಡರಂಗ 41ಶೇ. ಮತ ಗಳಿಸಿದೆ ಎಂಬುದನ್ನು ಮರೆಯುತ್ತಾರೆ. ಒಂದು ಕೋಟಿ ತೊಂಭತ್ತೈದು ಲಕ್ಷ ಜನತೆ ಎಡರಂಗಕ್ಕೆ ಮತನೀಡಿದ್ದಾರೆ, ಅದನ್ನು ಬೆಂಬಲಿಸಿದ್ದಾರೆ. ಇದೊಂದು ಸಾಕಷ್ಟು ದೊಡ್ಡದಾದ ಸಾಮೂಹಿಕ ನೆಲೆ; ಇದು ಕಳೆದೆರಡು ವರ್ಷಗಳಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಮೇಲಿನ ದಾಳಿಗಳನ್ನು ಎದುರಿಸಿ ನಿಂತಿರುವ, ದುಡಿಯುವ ಜನತೆಯ ವರ್ಗನೆಲೆಯಾಗಿದೆ.

ಏಕೈಕ ಪರ್ಯಾಯ ರಾಜಕೀಯ ವೇದಿಕೆ

ನವ-ಉದಾರವಾದಿ ಆರ್ಥಿಕ ಧೋರಣೆಗಳ ವಿರುದ್ಧ ಹೋರಾಟ, ಜನತೆಯ ಜೀವನಾಧಾರದ ರಕ್ಷಣೆ, ರಾಷ್ಟ್ರೀಯ ಸಾರ್ವಭೌಮತೆಯ ಮತ್ತು ಜಾತ್ಯಾತೀತೆಯ ರಕ್ಷಣೆಯನ್ನು ಒಳಗೊಂಡಿರುವ ಎಡಶಕ್ತಿಗಳ ರಾಜಕೀಯ ವೇದಿಕೆ ಈಗಲೂ ಕೂಡ ಕಾಂಗ್ರೆಸ್ ಮತ್ತು ಬಿಜೆಪಿಯಂತಹ ಆಳುವ ವರ್ಗಗಳ ಪಕ್ಷಗಳ ವಿರುದ್ಧ ಇರುವ ಏಕೈಕ ಪರ್ಯಾಯ ರಾಜಕೀಯ ವೇದಿಕೆ.

ಚರಮಬಿಂದು ಎಂಬ ತರ್ಕ.

ಸೋವಿಯೆತ್ ಒಕ್ಕೂಟ ಪತನವಾದಾಗ ಸಿಪಿಐ(ಎಂ) ಮೇಲೆ ಅದರ ಭೌತಿಕ ಪ್ರಭಾವ ಏನೂ ಆಗಲಿಲ್ಲ ಎಂಬುದೇ ಇವೆಲ್ಲ ಶುದ್ಧ ಸುಳ್ಳು ಪ್ರತಿಪಾದನೆಗಳು ಎಂಬುದನ್ನು ಅರ್ಥ ಮಾಡಿಕೊಳ್ಳಲು ಸಾಕು. ನಿಜಸಂಗತಿಯೆಂದರೆ, ಈ 1990ರ ದಶಕದಲ್ಲೆ ಸಿಪಿಐ(ಎಂ) ಪಶ್ಚಿಮ ಬಂಗಾಲದಲ್ಲೂ, ಕೇರಳದಲ್ಲೂ ಬೆಳೆಯಿತು, ಇನ್ನಷ್ಟು ಬಲಿಷ್ಟಗೊಂಡಿತು. ಇನ್ನು ತತ್ವಸಿದ್ಧಾಂತದ ಬಗ್ಗೆ ಹೇಳುವುದಾದರೆ, ಮಾರ್ಕ್ಸ್‌ವಾದದ ಸಿದ್ಧಾಂತ ಮತ್ತು ಆಚರಣೆಯಿಂದ ಪ್ರೇರಿತವಾಗಿಯೇ ಸಿಪಿಐ(ಎಂ) ಅದನ್ನು ಭಾರತದ ಸನ್ನಿವೇಶದಲ್ಲಿ ಸೃಜನಾತ್ಮಕವಾಗಿ ಅನ್ವಯಿಸುತ್ತಿದೆ. ಇದೇನು ಒಂದು ನಿಶ್ಚಲ ನಿಲುವಲ್ಲ, ಸತತವಾಗಿ ವಿಕಾಸಗೊಳ್ಳುವ ನಿಲುವು.

ಪಶ್ಚಿಮ ಬಂಗಾಲದಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳು ಬೆಳೆದಿರುವುದು, ಅಭಿವೃದ್ಧಿ ಹೊಂದಿರುವುದು ನಾಲ್ಕು ದಶಕಗಳ ಅಸಂಖ್ಯ ಹೋರಾಟಗಳು ಮತ್ತು ಜನತಾ ಆಂದೋಲನಗಳ ಮೂಲಕ. ಎಡರಂಗದ ಚುನಾವಣಾ ಯಶಸ್ಸು ಇಂತಹ ಆಂದೋಲನಗಳು, ಹೋರಾಟಗಳು ನಿರ್ಮಿಸಿದ ಸಾಮೂಹಿಕ ನೆಲೆಯ ಫಲಿತಾಂಶ. ಎಡರಂಗ ಕೇವಲ ಒಂದು ಚುನಾವಣಾ ಮೈತ್ರಿಕೂಟವಲ್ಲ. ಅಥವ ಸಿಪಿಐ(ಎಂ) ಒಂದು ಬಲಿಷ್ಟ ಸಾಮೂಹಿಕ ಪಕ್ಷವಾಗಿ ಬೆಳೆದಿರುವುದು ಕೇವಲ ಅದರ ಚುನಾವಣಾ ಚಟುವಟಿಕೆಗಳಿಂದೇನೂ ಅಲ್ಲ.

ಪಶ್ಚಿಮ ಬಂಗಾಲದಲ್ಲಿ ಸಿಪಿಐ(ಎಂ) ಮತ್ತು ಎಡರಂಗದ ಚರಮಗೀತೆಯನ್ನು ಹಾಡುತ್ತಿರುವವರು, ಈ ಸೋಲಿನಲ್ಲೂ ಎಡರಂಗ 41% ಮತ ಗಳಿಸಿದೆ ಎಂಬುದನ್ನು ಮರೆಯುತ್ತಾರೆ. ಒಂದು ಕೋಟಿ ತೊಂಭತ್ತೈದು ಲಕ್ಷ ಜನತೆ ಎಡರಂಗಕ್ಕೆ ಮತನೀಡಿದ್ದಾರೆ, ಅದನ್ನು ಬೆಂಬಲಿಸಿದ್ದಾರೆ. ಇದೊಂದು ಸಾಕಷ್ಟು ದೊಡ್ಡದಾದ ಸಾಮೂಹಿಕ ನೆಲೆ; ಇದು ಕಳೆದೆರಡು ವರ್ಷಗಳಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಮೇಲಿನ ದಾಳಿಗಳನ್ನು ಎದುರಿಸಿ ನಿಂತಿರುವ, ದುಡಿಯುವ ಜನತೆಯ ವರ್ಗನೆಲೆಯಾಗಿದೆ. ಈ ವಿಷಯವುಗುಳುವ ಕಮ್ಯುನಿಸ್ಟ್- ವಿರೋಧಿ ಮತ್ತು ನವ-ಉದಾರವಾದಿ ಟಿಪ್ಪಣಿಗಾರರ ವ್ಯಾಖ್ಯಾನಗಳು ಹುಸಿತನ ಸಾಬೀತಾಗುತ್ತದೆ. ನಮ್ಮಿಂದ ದೂರಸರಿದಿರುವ ಜನವಿಭಾಗಗಳ ಪ್ರಶ್ನೆಗಳನ್ನು ಎತ್ತಿಕೊಂಡು, ಅವುಗಳಿಗಾಗಿ ಹೋರಾಟ ನಡೆಸಿ ಅವರನ್ನು ಮತ್ತೆ ಗೆದ್ದುಕೊಳ್ಳಲು ಸಿಪಿಐ(ಎಂ) ಮತ್ತು ಎಡಶಕ್ತಿಗಳು ಸಹನೆಯಿಂದ ಹೋರಾಟ ನಡೆಸುತ್ತವೆ.

ಪಟ್ಟಭದ್ರರ ಏಜೆಂಟರ ದೂಷಣೆಗಳು, ವಿಕೃತ ಟಿಪ್ಪಣಿಗಳು

ಮತ್ತೊಂದು ಸ್ವರೂಪದ ದಾಳಿಯೆಂದರೆ, ಎಡರಂಗದ ಸಮಸ್ತ ದಾಖಲೆಯನ್ನು ದೂಷಿಸುವುದು ಮತ್ತು ಸಿಪಿಐ(ಎಂ) ಜನತೆಯನ್ನು ದಮನ ಮಾಡಿದ ಒಂದು ಸರ್ವಾಧಿಕಾರಶಾಹಿ ಪಕ್ಷ ಎಂದು ಚಿತ್ರಿಸುವುದು. ಕೆಲವರು ಎಷ್ಟರ ಮಟ್ಟಿಗೆ ಹೋಗಿದ್ದಾರೆಂದರೆ, ಎಡರಂಗದ ಈ ಹಿಂದಿನ ವಿಜಯಗಳು ಸಾಧ್ಯವಾದದ್ದು ಸಿಪಿಐ(ಎಂ)ನ್ನು ಯಾರಾದರೂ ವಿರೋಧಿಸಿದರೆ, ಅವರನ್ನು ದಮನ ಮಾಡುವ ಮೂಲಕ ಎಂದು ಹೇಳುತ್ತಾರೆ. ಆದರೆ ಇವರು 1977ರ ನಂತರದ ಪ್ರತಿಯೊಂದು ಚುನಾವಣೆಯಲ್ಲಿ ಎಡ-ವಿರೋಧಿ ಪ್ರತಿಪಕ್ಷಗಳು ಪ್ರತಿಬಾರಿಯೂ ಕನಿಷ್ಟ ನಲ್ವತ್ತು ಶೇಕಡಾ ಮತ ಗಳಿಸಿವೆ ಎಂಬುದನ್ನು ಸುಲಭವಾಗಿ ಮರೆತು ಬಿಡುತ್ತಾರೆ. ಸಿಪಿಐ(ಎಂ) ಮತ್ತು ಎಡರಂಗ ಹಿಂದಿನ ಎಲ್ಲ ಚುನಾವಣೆಗಳಲ್ಲಿ ನಲ್ವತ್ತೈದರಿಂದ ಐವತ್ತು ಶೇಕಡಾ ಮತ ಪಡೆದಿದ್ದು, ಅದಕ್ಕೆ ಕಾರಣ ಅವು ಜನತೆಯ ನಡುವೆ ಆಳವಾದ ಬೇರು ಬಿಟ್ಟಿರುವುದು ಮತ್ತು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಅವು ಗಳಿಸಿರುವ ಜನತೆಯ ಬೆಂಬಲ. ಸಿಪಿಐ(ಎಂ) ಕಾರ್ಯಕರ್ತರು ನಿರಂಕುಶ ರಾಕ್ಷಸರು, ಭ್ರಷ್ಟರು ಎಂದು ಚಿತ್ರಿಸುವುದು ಪಕ್ಷವನ್ನು ನಿರಸ್ತ್ರಗೊಳಿಸುವ ಒಂದು ದುರುದ್ದೇಶಪೂರಿತ ಪ್ರಯತ್ನ. ಏಕೆಂದರೆ, ಸಂಘಟನೆಯ ಬೆನ್ನೆಲುಬಾಗಿರುವವರು ಪಕ್ಷದ ಸಮರ್ಪಿತ ಮತ್ತು ಸ್ವಾರ್ಥಹೀನ ಕಾರ್ಯಕರ್ತರು.



ಇದರೊಂದಿಗೆ ಹಾಕಿರುವ ಒಂದು ಆಪಾದನೆಯೆಂದರೆ, ಪಶ್ಚಿಮ ಬಂಗಾಲದ ಎಡರಂಗ ಸರಕಾರ ಸ್ವಭಾವತಃ ಪ್ರಜಾಪ್ರಭುತ್ವ-ವಿರೋಧಿ ಮತ್ತು ಒಂದು ಸರ್ವಾಧಿಕಾರಶಾಹಿ ವ್ಯವಸ್ಥೆ, ಎಲ್ಲ ಭಿನ್ನಾಭಿಪ್ರಾಯವನ್ನು ಚಚ್ಚಿ ಹಾಕಿ ಪಶ್ಚಿಮ ಬಂಗಾಲದ ಸಮಾಜದ ಮೇಲೆ ನಿರ್ಬಂಧಗಳನ್ನು ಹೇರಿರುವ ವ್ಯವಸ್ಥೆ ಎಂಬುದು. ಎಡರಂಗ ತನ್ನನ್ನು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯ ಅಡಿಯಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆಗೆ ಸತತವಾಗಿ ಒಳಪಡಿಸಿಕೊಂಡು ಜನಾದೇಶದಿಂದ ಆಡಳಿತ ನಡೆಸಿದೆ. ಸಿಪಿಐ(ಎಂ) ಮತ್ತು ಎಡಪಕ್ಷಗಳು ತಾವು ಪ್ರಜಾಪ್ರಭುತ್ವಕ್ಕೆ ಸತತವಾಗಿ ಅತ್ಯಂತ ಬದ್ಧತೆಯನ್ನು ತೋರಿಸಿರುವ ಶಕ್ತಿ ಎಂಬುದನ್ನು ತೋರಿಸಿಕೊಟ್ಟಿವೆ. 1957ರಲ್ಲಿ ಕೇರಳದಲ್ಲಿ ಕಮ್ಯುನಿಸ್ಟ್ ಪಕ್ಷ ಚುನಾವಣೆಗಳಲ್ಲಿ ಗೆದ್ದು ದೇಶದಲ್ಲೇ ಮೊದಲ ಕಮ್ಯುನಿಸ್ಟ್ ಮಂತ್ರಿಮಂಡಲವನ್ನು ರಚಿಸಿದಂದಿನಿಂದ ವಿಶಾಲ ಜನಸಮೂಹಗಳನ್ನು ಪ್ರಜಾಪ್ರಭುತ್ವ ಪ್ರಕ್ರಿಯೆಯೊಳಕ್ಕೆ ತಂದು ಪ್ರಜಾಪ್ರಭುತ್ವವನ್ನು ಚೈತನ್ಯಶೀಲಗೊಳಿಸಿದೆ. ಪಶ್ಚಿಮ ಬಂಗಾಲ, ಕೇರಳ ಮತ್ತು ತ್ರಿಪುರ ದೇಶದಲ್ಲೇ ಅತ್ಯಂತ ಹೆಚ್ಚು ಮತದಾನದ ಪ್ರಮಾಣವನ್ನು ದಾಖಲಿಸಿರುವ ರಾಜ್ಯಗಳಾಗಿರುವುದು ಕೇವಲ ಆಕಸ್ಮಿಕವಲ್ಲ. ಭೂಸುಧಾರಣೆಗಳು ಹಳೆಯ ಭೂಮಾಲಕತ್ವದ ರಚನೆಯನ್ನು ಮುರಿದು ಪ್ರಜಾಪ್ರಭುತ್ವವನ್ನು ವಿಸ್ತರಿಸಿರುವುದು ಈ ಮೂರು ರಾಜ್ಯಗಳಲ್ಲೇ. ಪಂಚಾಯತೀ ರಾಜ್ಯ ಸಂಸ್ಥೆಗಳನ್ನು ಚೈತನ್ಯಶೀಲಗೊಳಿಸಲಾಯಿತು. ಎಡರಂಗದ ಈ ಪ್ರಜಾಪ್ರಭುತ್ವವಾದಿ ದಾಖಲೆಗೆ ಮಸಿ ಬಳಿದು ಅದನ್ನು ವಿಕೃತಗೊಳಿಸಲು ಪ್ರಯತ್ನಿಸುತ್ತಿರುವವರು ಈ ಪ್ರಬಲ ವರ್ಗಗಳ ಮತ್ತು ಪಟ್ಟಭದ್ರರ ಏಜೆಂಟರೇ.

ಸಿಪಿಐ(ಎಂ), ಎಲ್ಲೆಲ್ಲಿ ತನಗೆ ಜನತೆಯ ಬೆಂಬಲ ಪಡೆಯಲು ಸಮರ್ಥವಾಗಿದೆಯೋ, ಅಲ್ಲೆಲ್ಲ ರಾಜ್ಯ ಸರಕಾರಗಳನ್ನು ನಡೆಸುವಲ್ಲಿ ತನ್ನದೇ ಸ್ವಂತ ನಿಲುವನ್ನು ವಿಕಾಸಗೊಳಿಸಿದೆ. ಎಡ ನೇತೃತ್ವದ ಸರಕಾರಗಳನ್ನು ಎಡ ಮತ್ತು ಪ್ರಜಾಪ್ರಭುತ್ವ ಆಂದೋಲನವನ್ನು ಹಾಗೂ ದುಡಿಯುವ ಜನತೆಯ ಆಂದೋಲನವನ್ನು ಬಲಗೊಳಿಸುಂತೆ ನಡೆಸಬೇಕಾಗುತ್ತದೆ. ಇಂತಹ ಸರಕಾರಗಳು ಜನತೆಗೆ ಪರಿಹಾರ ಒದಗಿಸುವ ಒಂದು ಕಾರ್ಯಕ್ರಮವನ್ನು

ಪುಟ 15 ಕ್ಕೆ



ಶನಿಗ್ರಹಕ್ಕೆ ಕಾಟ ಕೊಡುತ್ತಿರುವ ಭೀಕರ ಸುಂಟರಗಾಳಿ !

ರಾಜಾ ವಿಕ್ರಮ ಮತ್ತು ಶನಿ ದೃಷ್ಟಿ:

ಇಡೀ ದೇವರುಗಳಲ್ಲೆಲ್ಲ ಶನಿ ದೇವರನ್ನು ಕಂಡರೆ ಹಲವರಿಗೆ ಭಯ, ಅದರಿಂದಾಗಿ ಜಾಸ್ತಿ ಭಕಿಯ್ತೂ ಎನ್ನಬಹುದು. ಶನಿ ದೃಷ್ಟಿ ಬಿದ್ದವರ ಮೇಲಂತೂ ಶನಿಯು ಉಗ್ರ ಪ್ರತಾಪಿಯಂತೆ



ಉಪಟಳ ಕೊಟ್ಟು ಭೀಕರ ಶಿಕ್ಷೆ ನೀಡುತ್ತಾನೆಂದು ಹಲವು ಭಕ್ತರು ಭಾರಿ ಎಚ್ಚರಿಕೆ ಮತ್ತು ಭಯ-ಭಕ್ತಿಯಿಂದ ಅವನಿಗೆ ಪೂಜೆ ಸಲ್ಲಿಸುತ್ತಾರೆ. ಇದಕ್ಕೆ ಉದಾಹರಣೆಯಾಗಿ ಪುರಾಣ ಕಾಲದಲ್ಲಿ ರಾಜಾ ವಿಕ್ರಮ ಎಂಬುವನು ಅತ್ಯುತ್ತಮವಾಗಿ ಆಳುತ್ತಿದ್ದರೂ, ಶನಿ ದೇವರಿಗೆ ಪೂಜೆ ಸಲ್ಲಿಸದೇ ನಿರ್ಲಕ್ಷ್ಯ ವಹಿಸಿದ್ದರ ಫಲವಾಗಿ ಶನಿ ಅವನ ಮೇಲೆ ಉಗ್ರ ದೃಷ್ಟಿ ಬೀರಿ ರಾಜಾ ವಿಕ್ರಮ ತನ್ನ ರಾಜ್ಯವನ್ನೇ ಕಳೆದುಕೊಂಡು ದಯನೀಯವಾಗಿ ಬದುಕುವಂತೆ ಮಾಡುವ ಕಥೆ ಎಲ್ಲರಿಗೂ ಚಿರಪರಿಚಿತ.

ಆದರೆ ವಾಸ್ತವವೆಂದರೆ ನಮ್ಮ ಖಗೋಳ ಭೌತಶಾಸ್ತ್ರ ಮತ್ತು ಅದಕ್ಕೆ ಪೂರಕವಾಗಿ ನಮ್ಮ ಭೂಮಿಯಿಂದ ದೂರದಲ್ಲಿರುವ ಇತರೆ



ಗ್ರಹಗಳ ನಮ್ಮ ಜ್ಞಾನ, ಆ ಗ್ರಹಗಳ ಬಳಿಗೆ ಕಣ್ಣು ಹಾಯಿಸುವ ಪರಿಣಾಮಕಾರಿ ದೂರದರ್ಶಕಗಳು, ಆಕಾಶಯಾನಗಳು ಹೆಚ್ಚಿದಂತೆಲ್ಲ ಸೂರ್ಯನ ಸುತ್ತಲಿರುವ ಗ್ರಹ ಪರಿವಾರಗಳ ಕುರಿತು ನಮಗೆ ಹೆಚ್ಚಿನ ತಿಳುವಳಿಕೆ

ಪುಟ 10 ಕ್ಕೆ


ಶನಿಗ್ರಹಕ್ಕೆ ಕಾಟ .....

ಪುಟ 9 ರಿಂದ

ಲಭಿಸಿದೆ. ಇದರಿಂದ ಜ್ಯೋತಿಷಿಗಳು ಮತ್ತು ಕಂದಾಚಾರಿಗಳ ಪುರಾಣ, ಭವಿಷ್ಯತ್-ನುಡಿಗಳೆಲ್ಲವೂ ಕಾಗೆ-ಗೂಬಕ್ಕನ ಕಥೆಗಳೆಂಬುದನ್ನು ಜನಸಾಮಾನ್ಯರು ತಿಳಿದುಕೊಳ್ಳುವ ಸ್ಥಿತಿಯಿದೆ.

ಶನಿ ಗ್ರಹದ ಮೇಲೆರಗಿರುವ ಸುಂಟರಗಾಳಿ:

ಶನಿ ಗ್ರಹದ ಉತ್ತರ ಧ್ರುವದಲ್ಲಿ ಭೀಕರ ಸ್ವರೂಪಿ ಸುಂಟರಗಾಳಿ ಎದ್ದಿದ್ದು, ಅದು ಇಡೀ ಶನಿ ಗ್ರಹದ ತುಂಬೆಲ್ಲ ಹರಡಿಕೊಂಡಿದೆ ಎಂದು ಅಮೇರಿಕಾದ ಕ್ಯಾಸಿನಿ ಗಗನನೌಕೆ ಮತ್ತು ಯೂರೋಪ್ ಗಗನ ವೀಕ್ಷಣಕೇಂದ್ರವು ಭೂಮಿಯಲ್ಲಿ ಅಳವಡಿಸಿರುವ ದೂರದರ್ಶಕಗಳೆರಡೂ ವರದಿ ಮಾಡಿವೆ. ಅಮೇರಿಕಾದ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಾದ ನಾಸಾವು ಈ ಕ್ಯಾಸಿನಿ ಗಗನನೌಕೆಯನ್ನು ಅಂತರಿಕ್ಷಕ್ಕೆ ಕಳುಹಿಸಿಕೊಟ್ಟಿತ್ತು. ಈ ಸುಂಟರಗಾಳಿ ಅದೆಷ್ಟು ಬಲಯುತವಾಗಿದೆಯೆಂದರೆ ಅದು ಇಡೀ ಶನಿ ಗ್ರಹದ ವಾತಾವರಣದ ತುಂಬೆಲ್ಲ ಅನಿಲಭರಿತ ಧೂಳನ್ನು ಹರಡುತ್ತಿದೆ. ಕ್ಯಾಸಿನಿ ಗಗನನೌಕೆಯಲ್ಲಿದ್ದ ರೇಡಿಯೋ ಮತ್ತು ಪ್ಲಾಸ್ಮಾ ತರಂಗಾಂತರ ಉಪಕರಣಗಳು ಮೊದಲಿಗೆ ಸುಂಟರಗಾಳಿಯನ್ನು ಗಮನಿಸಿದವು. ಕ್ಯಾಸಿನಿ ಗಗನನೌಕೆಯ ಅತಿ ನೇರಳೆ ಮ್ಯಾಪಿಂಗ್ ಸ್ಪೆಕ್ಟ್ರೋಮೀಟರ್ ಎಂಬ ಉಪಕರಣವು ಈ



ಸುಂಟರಗಾಳಿಯು ಹಿಂಸಾತ್ಮಕ ರೂಪ ತಳೆದು ಅಮೋನಿಯಾ ಅನಿಲವನ್ನು ಎಲ್ಲೆಡೆ ಹರಡುತ್ತಿದೆ ಎಂದು ದಾಖಲಿಸಿದೆ. ಈ ದೊಡ್ಡ ಸುಂಟರಗಾಳಿಯ ಅಗಲ ಸುಮಾರು 5,000 ಕಿಲೋ ಮೀಟರ್ ಇದೆ. ಈ ಸುಂಟರಗಾಳಿಯಿಂದ ಶನಿ ಗ್ರಹದ ವಾತಾವರಣದ ಗಾಳಿಯ ಚಲನೆಯು ತೀವ್ರತರದಲ್ಲಿ ಮಾರ್ಪಾಟಾಗಿದ್ದು ಅಲ್ಲಿನ ಶಕ್ತಿ ಮತ್ತು ವಸ್ತುಗಳನ್ನು ದೂರ ಪ್ರದೇಶಗಳಿಗೆ ದಿಕ್ಕಾಪಾಲಾಗಿ ಚೆಲ್ಲಾಪಿಲ್ಲಿಯಾಗಿಸಿದೆ.

ನಮ್ಮ ಭೂಮಿಯಿಂದ ಸುಮಾರು 51 ಕಿಲೋ ಮೀಟರ್‌ವರೆಗೆ ಚಾಚಿರುವ ಸ್ಟ್ರಾಟೋಸ್ಪಿಯರ್ ಎಂದು ಕರೆಯಲಾಗುವ ವಾತಾವರಣದ ಗಡಿಯು ಕೆಳ ಹಂತದಲ್ಲಿ ಸಾಮಾನ್ಯವಾಗಿ ವಿಮಾನಯಾನ ಮಾಡುವುದನ್ನು ತಪ್ಪಿಸಿ ಇದರ ಮೇಲ್-ಹಂತದಲ್ಲಿ ಯಾನ ಮಾಡಲಾಗುತ್ತದೆ. ಏಕೆಂದರೆ ಈ ಕೆಳ ಹಂತದಲ್ಲಿ ವಾತಾವರಣದಲ್ಲಿನ ವಾಯು ವೇಗ, ಒತ್ತಡ, ಉಷ್ಣತೆ ಇತ್ಯಾದಿಗಳ ಏರಿಳಿತಗಳು ಹೆಚ್ಚಿರುತ್ತವೆ. ಆದರೆ ಶನಿ ಗ್ರಹದ ಸ್ಟ್ರಾಟೋಸ್ಪಿಯರ್ ಮೇಲ್-ಹಂತದ ಎತ್ತರದಲ್ಲಿಯೂ ಕೂಡ ಸುಂಟರಗಾಳಿಯ ಪ್ರವಾಹ ಚಿಮ್ಮುತ್ತಿದೆ ಎನ್ನಲಾಗಿದೆ.

ಶನಿ ಗ್ರಹದ ವಾತಾವರಣ ಮತ್ತು ಉಪಗ್ರಹಗಳು:

ಶನಿ ಗ್ರಹವು ಸೂರ್ಯ ಪರಿವಾರದಲ್ಲಿ ಜ್ಯೂಪಿಟರ್ ನಂತರ ಎರಡನೇ ಅತಿ ದೊಡ್ಡ ಗ್ರಹವೆನಿಸಿದೆ. ಆದರೆ ಸೂರ್ಯನಿಂದ ದೂರವಿರುವ 6ನೇ ಗ್ರಹವಾಗಿದೆ. ಇದು ಭೂಮಿಯಿಂದ ಸುಮಾರು 1,20,000 ಕೋಟಿ ಕಿಲೋಮೀಟರ್ ದೂರದಲ್ಲಿದೆ. ಶನಿ ಗ್ರಹದ ತೂಕ ನಮ್ಮ ಭೂಮಿಯ ಒಟ್ಟಾರೆ ತೂಕದ ಮುಕ್ಕಾಲು ಪ್ರಮಾಣದ ತೂಕ ಮಾತ್ರವಿದ್ದರೂ ಆಕಾರದಲ್ಲಿ ಭೂಮಿಯ 95 ಪಟ್ಟು ದೊಡ್ಡದಿದೆ. ಶನಿ ಗ್ರಹವು ತನ್ನ ಸುತ್ತ ಆವರಿಸಿರುವ ಒಂಬತ್ತು ಬಳೆಗಳನ್ನು ಹೊಂದಿದ್ದು, ಈ ಬಳೆಗಳು ಮಂಜುಗಡ್ಡೆಯ ಕಣಗಳು, ಬಂಡೆಯ ಚೂರುಗಳು ಮತ್ತು ಧೂಳಿನಿಂದ ಮಾಡಲ್ಪಟ್ಟಿವೆ. ಶನಿ ಗ್ರಹವು ಸುಮಾರು ನಮ್ಮ ಚಂದ್ರನಂತಹ 62 ಉಪಗ್ರಹಗಳನ್ನು ಹೊಂದಿದ್ದು, ಅದರಲ್ಲಿ ಟೈಟಾನ್ ಎಂಬ ಉಪಗ್ರಹವೇ ದೊಡ್ಡದು.

ಗಗನನೌಕೆಗಳಿಂದ ಶನಿ ಗ್ರಹ ಸರ್ವೇಕ್ಷಣೆ:


ಶನಿ ಗ್ರಹದ ವೀಕ್ಷಣೆಯನ್ನು ಮೊದಲು ಬರಿಗಣ್ಣಿಂದ ನೋಡಲಾಗುತ್ತಿತ್ತು. 17ನೇ ಶತಮಾನದಲ್ಲಿ ಬಲು ಪರಿಣಾಮಕಾರಿಯಾದ ದೂರದರ್ಶಕಗಳನ್ನು ಅಭಿವೃದ್ಧಿಪಡಿಸಿ ವೀಕ್ಷಿಸಲಾಗುತ್ತಿತ್ತು. ಇಪ್ಪತ್ತೊಂದನೇ ಶತಮಾನದಲ್ಲಿ ಪಯನಿಯರ್, ವಾಯೇಜರ್ ನೌಕೆಗಳನ್ನು ಕಳುಹಿಸಲಾಯಿತು. 2004ರಲ್ಲಿ ಕ್ಯಾಸಿನಿ-ಹ್ಯೂಜೆನ್ಸ್ ಎಂಬ ಗಗನನೌಕೆಗಳು ಶನಿ ಗ್ರಹ ಪ್ರಯಾಣ ಮಾಡಿ ಆ ಗ್ರಹದ ಸುತ್ತು ಹಾಕಿ, ಗ್ರಹ ಪ್ರದೇಶಕ್ಕಿಳಿದು ಫೋಟೋ ತೆಗೆದುಕೊಂಡವು ಹಾಗೆಯೇ ಅದರ ಉಪಗ್ರಹ ಟೈಟಾನ್ ಮೇಲೆ ಓಡಾಡಿ ಸರ್ವೇಕ್ಷಣೆ ನಡೆಸಿತು. ಟೈಟಾನ್‌ನಲ್ಲಿ ದೊಡ್ಡ ಸರೋವರಗಳಂತಹ ರಚನೆ, ಬೆಟ್ಟ ಗುಡ್ಡಗಳು, ದ್ವೀಪಗಳಂತಹ ರಚನೆಯ ಚಿತ್ರಗಳನ್ನು ನಮಗೆ ನೀಡಿದೆ.

ಪುಸ್ತಕಗಳ ಬೆಳಕು



ಏಪ್ರಿಲ್ 27, 2011 ರಂದು ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣದಲ್ಲಿ 'ಮೇ ಡೇ ಹುತಾತ್ಮರ ಮಹಾನ್ ಗಾಥೆ' ಬಿಡುಗಡೆ ಸಮಾರಂಭದ ಚಿತ್ರವಿದು.

ಕ್ರಮವಾಗಿ ಗೋಪಾಲಕೃಷ್ಣ ಅರಳಹಳ್ಳಿ, ಕೆ.ಎನ್.ಉಮೇಶ್, ಅನುವಾದಕ ರಾಹು, ಪುಸ್ತಕ ಬಿಡುಗಡೆ ಮಾಡಿದ ಖ್ಯಾತ ಸಾಹಿತಿ ಬರಗೂರು ರಾಮಚಂದ್ರಪ್ಪ, ಪ್ರಸನ್ನಕುಮಾರ್, ಗೋಪಾಲಗೌಡ.ಎಚ್.ಎನ್., ಮೀನಾಕ್ಷಿ ಸುಂದರಂ, ಎಸ್.ವರಲಕ್ಷ್ಮಿ ಮತ್ತು ನೆರೆದ ಜನ.





'ವಿಮೋಚನೆಯ ಸಮರದಲ್ಲಿ' ಅನುವಾದಕ್ಕೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ



ವಿಶ್ವಕುಂದಾಪುರ

ಮೇಜರ್ ಜೈಪಾಲ್‌ಸಿಂಗ್.. ಈ ಹೆಸರೇ ಭಾರತ ದೇಶದ ಸ್ವಾತಂತ್ರ್ಯ ಹೋರಾಟದ ಒಂದು ರೋಮಾಂಚನಕಾರಿ ಅಧ್ಯಾಯವನ್ನು ನೆನಪಿಗೆ ತರುವಂಥದ್ದು. ಇವರ ಆತ್ಮಚರಿತ್ರೆಯನ್ನು ಇಂಗ್ಲಿಷ್‌ನಲ್ಲಿ ಸಿಪಿಐ(ಎಂ) ದೆಹಲಿ ರಾಜ್ಯ ಸಮಿತಿ ಪ್ರಕಟಿಸಿದೆ.


ಇಂಥ ಮಹತ್ವದ ಪುಸ್ತಕವನ್ನು ಸೊಗಸಾಗಿ ಕನ್ನಡಕ್ಕೆ ತಂದವರು ಪತ್ರಕರ್ತ ವಿಶ್ವಕುಂದಾಪುರ. ಈಗೊಂದು ಸಂತಸದ ಸುದ್ದಿ ಇದೆ. 2009 ರಲ್ಲಿ 'ಕ್ರಿಯಾ ಪ್ರಕಾಶನ' ಪ್ರಕಟಿಸಿದ ಈ ಕನ್ನಡ ಪುಸ್ತಕಕ್ಕೆ 2009ರ ಸಾಲಿನ ಸೃಜನೇತರ ವಿಭಾಗದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ 'ಅತ್ಯುತ್ತಮ ಅನುವಾದ' ಪುರಸ್ಕಾರ ದೊರೆತಿದೆ. ಈ ತೀರ್ಮಾನವನ್ನು ಇತ್ತೀಚೆಗೆ ಪ್ರಕಟಿಸಲಾಗಿದೆ.


ವಿಶ್ವಕುಂದಾಪುರ ಅವರಿಗೆ, ಕ್ರಿಯಾ ಪ್ರಕಾಶನಕ್ಕೆ 'ಜನಶಕ್ತಿ'ಯ ಹಾರ್ದಿಕ ಅಭಿನಂದನೆಗಳು.


ದುಡಿಯುವ ಜನರ ಪ್ರಾಣಮಿತ್ರ 'ಐಕ್ಯರಂಗ'ದಲ್ಲಿ 2003 ರಲ್ಲಿ ಈ ಕೃತಿ ಧಾರವಾಹಿಯಾಗಿ ಕಂತುಗಳಲ್ಲಿ ಪ್ರಕಟವಾಗಿತ್ತು ಎಂಬ ವಿಷಯವನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಅದೇ ರೀತಿಯಲ್ಲಿ ಇಲ್ಲಿ ಇತ್ತೀಚೆಗೆ ಪ್ರಕಟಗೊಂಡ ಕೆಲವು ಉತ್ತಮ ಪುಸ್ತಕಗಳ ವಿವರಗಳನ್ನು ಕೊಡಲಾಗಿದೆ. ಪ್ರಗತಿಪರ, ಜನಪರ ಚಳುವಳಿಯ ಹಿತೈಷಿಗಳು, ಸಂಗಾತಿಗಳು ಈ ಪುಸ್ತಕಗಳ ಪ್ರಯೋಜನ ಪಡೆಯುವುದಲ್ಲದೆ ವ್ಯಾಪಕವಾಗಿ ಜನರ ನಡುವೆ ಕೊಂಡೊಯ್ಯಲು ಕೈಜೋಡಿಸಬೇಕಾದ ಅಗತ್ಯದ ಬಗ್ಗೆ ಹೆಚ್ಚು ವಿವರಿಸಬೇಕಿಲ್ಲ ಅನಿಸುತ್ತದೆ. ಅಲ್ಲವೆ?


ಇವು 'ಕ್ರಿಯಾ ಪ್ರಕಾಶನ'ದ ಪ್ರಕಟಣೆಗಳು.














'ಚಿಂತನ' ಪ್ರಕಾಶನದ ಕೆಲವು ಕೃತಿಗಳು




ಲೇ. : ಡಾ. ಪ್ರಕಾಶ್ ಸಿ. ರಾವ್
ಬೆಲೆ ರೂ. 60



ಲೇ. : ಡಾ. ಪ್ರಕಾಶ್ ಸಿ. ರಾವ್
ಬೆಲೆ ರೂ. 60



ಲೇ. : ಪ್ರಭಾತ್ ಪಟ್ನಾಯಕ್
ಅನು: ವೀರರಾಜ ಎನ್.ಕೆ.
ಬೆಲೆ ರೂ. 40




ವೇದರಾಜ ಎನ್.ಕೆ.

ಐದು ರಾಜ್ಯಗಳಲ್ಲಿ ನಡೆದ ವಿಧಾನಸಭಾ ಚುನಾವಣೆಗಳಲ್ಲಿ, ವಿಶೇಷವಾಗಿ ಪಶ್ಚಿಮ ಬಂಗಾಲ ಮತ್ತು ಕೇರಳದಲ್ಲಿ ಎಡಪಕ್ಷಗಳ ಪರಾಭವವವನ್ನು ದೇಶದ ಆಳರಸರು, ಅವರ ತುತ್ತೂರಿಗಳು, ಹಿಂಬಾಲಕರು ಸಂಭ್ರಮದಿಂದ ಆಚರಿಸುತ್ತಿರುವಂತೆಯೇ ಅವರು ಜನಸಾಮಾನ್ಯರ ಮೇಲೆ ಪೆಟ್ರೋಲ್ ಬೆಲೆಯೇರಿಕೆಯ ಕ್ರೂರ ಚಾಟಿಯೇಟು ಬೀಸಿರುವುದು ಪ್ರಜಾಪ್ರಭುತ್ವವಾದಿಗಳನ್ನು ತಲ್ಲಣಗೊಳಿಸಿದೆ. ಪೆಟ್ರೋಲ್ ಬೆಲೆಗಳ ಮೇಲಿನ ನಿಯಂತ್ರಣಗಳನ್ನು ತೆಗೆದು ಹಾಕಿದ ನಂತರ, ಪ್ರತಿ ತಿಂಗಳಿಗೊಂದರಂತೆ ಏಳು ಬಾರಿ ಬೆಲೆಯೇರಿಕೆ ನಡೆಸಲಾಗಿತ್ತು. ಆದರೆ ಈ ಎಂಟನೇ ಮತ್ತು ಅತಿ ತೀವ್ರ ಬೆಲೆಯೇರಿಕೆಯನ್ನು ವಿಧಾನ ಸಭಾ ಚುನಾವಣೆಗಳ ಘೋಷಣೆಯ ಹಿನ್ನೆಲೆಯಲ್ಲಿ ಮುಂದೂಡಲಾಗಿತ್ತು ಎಂಬುದು ಎಲ್ಲರಿಗೂ ಗೊತ್ತಿರುವ ರಹಸ್ಯ. ಫಲಿತಾಂಶ ಪ್ರಕಟವಾದ ಕೂಡಲೇ ತಡಮಾಡದೆ ಅದನ್ನೂ ಪ್ರಕಟಿಸಿರುವುದು ಈ 'ಆಮ್ ಆದ್ಮಿ' ಸರಕಾರದಲ್ಲಿ ಶಾಮೀಲಾಗಿರುವವರ, ಅದರಲ್ಲೂ ಮುಖ್ಯವಾಗಿ ಎಡಪಕ್ಷಗಳನ್ನು ಅಧಿಕಾರದಿಂದಿಳಿಸಿ ಅಧಿಕಾರ ವಹಿಸಿಕೊಳ್ಳುತ್ತಿರುವವರ ಸಿನಿಕತನವನ್ನು ಬಯಲಿಗೆಳೆದಿದೆ. ಆದರೂ ದೇಶದ ಹಣಕಾಸು ಮಂತ್ರಿಗಳು ಈ ಬೆಲೆಯೇರಿಕೆಯಲ್ಲಿ ಸರಕಾರದ ಪಾತ್ರವೇನೂ ಇಲ್ಲ ಎಂದು ಮತ್ತೊಮ್ಮೆ ತಮ್ಮ ಗೋಸುಂಬೆತನವನ್ನು, ಅದರ ಹಿಂದಿರುವ ಕ್ರೌರ್ಯವನ್ನೂ ಪ್ರದರ್ಶಿಸಿದ್ದಾರೆ. ಸದ್ಯದಲ್ಲೆ ಡೀಸೆಲ್ ಮತ್ತು ಅಡುಗೆ ಅನಿಲ ಬೆಲೆಯೇರಿಕೆಗಳ 'ಅನಿವಾರ್ಯತೆ' ಈ ನಾಟಕವನ್ನು ಪೂರ್ಣಗೊಳಿಸುವ ಭಯ ಎಲ್ಲರಲ್ಲೂ ಇದೆ. ಯುಪಿಎ-2 ಸರಕಾರದ ನಿಜಸ್ವರೂಪವನ್ನು ಈ ವಾರ ಬಯಲಿಗೆಳೆದಿರುವ ಸಂಗತಿ ಇದೊಂದೇ ಅಲ್ಲ- ಸುಪ್ರಿಂ ಕೋರ್ಟಿನ ಎರಡು ಆದೇಶಗಳು- ಎಂಡೋಸಲ್ಫನ್ ನಿಷೇಧ ಮತ್ತು ಹಸಿವಿನ ಸಾವುಗಳಿಗೆ ಸಂಬಂಧಪಟ್ಟ ಆದೇಶಗಳು ಅದರ 'ಆಮ್ ಆದ್ಮಿ'- ವಿರೋಧಿ ಸ್ವರೂಪವನ್ನು ಮತ್ತೊಮ್ಮೆ ಎತ್ತಿ ತೋರಿವೆ; ಭೂಸ್ವಾಧೀನ ಮಸೂದೆ ತಿದ್ದುಪಡಿಯಲ್ಲಿ ವಿಳಂಬ ಮತ್ತು ಆದರ್ಶ ಸೊಸೈಟಿ ಫೈಲುಗಳ ಕಾಣೆ ಅದರ ಗೋಸುಂಬೆತನದ ಮತ್ತೆರಡು ಉದಾಹರಣೆಗಳನ್ನು ಮುಂದಿಟ್ಟಿವೆ; 'ನಾವು ಅಮೆರಿಕನ್ನರಲ್ಲ' ಎಂಬ ಪ್ರಧಾನ ಮಂತ್ರಿಗಳ ಟಿಪ್ಪಣಿಯೊಂದಿಗೇ, 11 ಬಿಲಿಯ ಡಾಲರುಗಳ ಕಾಂಟ್ರಾಕ್ಟು ಸಿಗದ ಅವರ ಗೋಳಾಟವನ್ನು ಶಮನ ಮಾಡುವ ಪ್ರಯತ್ನಗಳು ನಡೆಯುತ್ತಿವೆ. ವಿವರಗಳು ಇಲ್ಲಿವೆ:

ಎಂಡೋಸಲ್ಫನ್ ಮೇಲೆ ಸುಪ್ರಿಂಕೋರ್ಟಿನ ನಿಷೇಧ

'ಸಂವಿಧಾನದ ಕಲಮು 21 (ಬದುಕು ಮತ್ತು ಸ್ವಾತಂತ್ರ್ಯದ ಹಕ್ಕು)ರ ಅಡಿಯಲ್ಲಿ ಈ ನ್ಯಾಯಾಲಯದ ವಿವಿಧ ತೀರ್ಪುಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ನಿರ್ದಿಷ್ಟವಾಗಿ ಮುನ್ನೆಚ್ಚರಿಕೆಯ ನೀತಿಯನ್ನು ಗಮನದಲ್ಲಿಟ್ಟು ಕೊಂಡು, ನಾವು, ಈ ಮೂಲಕ, ಭಾರತಾದ್ಯಂತ ಎಂಡೋಸಲ್ಫನ್‌ನ ಉತ್ಪಾದನೆ ಮತ್ತು ಬಳಕೆಯ ಮೇಲೆ ತಕ್ಷಣವೇ ನಿಷೇಧದ ಮಧ್ಯಂತರ ಆದೇಶವನ್ನು ನಿರ್ದೇಶಿಸುತ್ತೇವೆ.'- ಇದು ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಮೂರ್ತಿ ಎಸ್.ಹೆಚ್.ಕಪಾಡಿಯ ನೇತೃತ್ವದ ಪೀಠ ನೀಡಿರುವ ತೀರ್ಪು.



ಕೃಪೆ: ದಿ ಹಿಂದೂ

ಡಿವೈಎಫ್‌ಐ ಸಲ್ಲಿಸಿದ ಅರ್ಜಿಯ ಮೇಲೆ ಈ ಮಧ್ಯಂತರ ಆದೇಶ ನೀಡಿರುವ ನ್ಯಾಯಾಲಯ ಎರಡು ಪರಿಣಿತರ ಸಮಿತಿಗಳು ಮಾನವ ಜೀವ ಮತ್ತು ಪರಿಸರದ ಮೇಲೆ ಎಂಡೋಸಲ್ಫನ್‌ನ ಪ್ರತಿಕೂಲ ಪರಿಣಾಮಗಳ ವಿವರವಾದ ಅಧ್ಯಯನ ನಡೆಸಿ ಎಂಟು ವಾರಗಳ ಒಳಗೆ ವರದಿಗಳನ್ನು ಸಲ್ಲಿಸಬೇಕು ಎಂದೂ ಆದೇಶಿಸಿದೆ. ಈ ಸಮಿತಿಗಳಲ್ಲಿ ಒಂದು ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿಯ ಮಹಾನಿರ್ದೇಶಕರ ನೇತೃತ್ವದಲ್ಲಿದ್ದರೆ, ಇನ್ನೊಂದು ಕೃಷಿ ಆಯುಕ್ತರ ನೇತೃತ್ವದಲ್ಲಿ ಇರುತ್ತದೆ. ಈ ಕೀಟನಾಶಕವನ್ನು ನಿಷೇಧಿಸಬೇಕೆ, ಅಥವ ಈಗಿರುವ ದಾಸ್ತಾನನನ್ನು ಹಂತ-ಹಂತವಾಗಿ ನಿರ್ಮೂಲಗೊಳಿಸಬೇಕೇ ಮತ್ತು ಈ ವಿವಾದಾತ್ಮಕ ಕೀಟನಾಶಕಕ್ಕೆ ಪರ್ಯಾಯವೇನಾದರೂ ಇದೆಯೇ ...ಪು ಮಧ್ಯಂತರ ವರದಿ ಸಲ್ಲಿಸುವಂತೆ ನ್ಯಾಯಾಲಯ ಹೇಳಿದೆ. ಅದುವರೆಗೆ ಈ ಕೀಟನಾಶಕದ ಉತ್ಪಾದಕರ ಲೈಸೆನ್ಸನ್ನು ತಡೆಹಿಡಿಬೇಕು ಎಂದು ಮಧ್ಯಂತರ ತೀರ್ಪು ಹೇಳಿದೆ.

ಬೇರೆ ಯಾವುದೇ ಸಂಗತಿಗಿಂತ ಮಾನವ ಜೀವ ಬಹಳ ಮಹತ್ವದ್ದು ಎಂದು ಸುಪ್ರಿಂ ಕೋರ್ಟ್ ವಿಚಾರಣೆಯ ವೇಳೆಯಲ್ಲಿ ಸ್ಪಷ್ಟಪಡಿಸಿತು. ಸದಾ 'ಆಮ್ ಆದ್ಮಿ'ಯ ಮಂತ್ರ ಜಪಿಸುತ್ತಿದ್ದರೂ, ಈ ಭಾರೀ ವಿಷವನ್ನು ನಿಷೇಧಿಸುವುದನ್ನು ತಪ್ಪಿಸಲು ದೇಶದ ಒಳಗೂ, ಅಂತರಾಷ್ಟ್ರೀಯವಾಗಿಯೂ ಯುಪಿಎ-2 ಸರಕಾರ ನಡೆಸಿರುವ ಪ್ರಯತ್ನವನ್ನು ವಿರೋಧಿಸಿ ಡಿವೈಎಫ್‌ಐ ಈ ಅರ್ಜಿಯನ್ನು ಸುಪ್ರಿಂ ಕೋರ್ಟ್ ಸಮ್ಮುಖ ಸಲ್ಲಿಸಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

★

ಹಸಿವಿನಿಂದ ಸಾವು ಸಂಭವಿಸಬಾರದು - ಇನ್ನೊಂದು ಸುಪ್ರಿಂಕೋರ್ಟ್ ಎಚ್ಚರಿಕೆ

ಮಾನವ ಜೀವ ಮಹತ್ವದ್ದು ಎಂದು ಎಂಡೋಸಲ್ಫನ್ ನಿಷೇಧಿಸಿದ ಬೆನ್ನಲ್ಲೇ ದೇಶದ ಸರ್ವೋಚ್ಚ ನ್ಯಾಯಾಲಯ ಯುಪಿಎ-2 ಸರಕಾರದ ಜನ-ವಿರೋಧಿ ನಿಲುವನ್ನು ಎತ್ತಿ ತೋರುವ ಇನ್ನೊಂದು ಆದೇಶ ನೀಡಿದೆ. 'ನಮ್ಮಂತಹ ದೇಶದಲ್ಲಿ ಹಸಿವಿನಿಂದ ಸಾವುಗಳು ಸಂಭವಿಸಬಾರದು ಎಂಬುದು ನಮ್ಮ ಕಾಳಜಿ. ಇದಕ್ಕಿಂತ ಹೆಚ್ಚು ಮಹತ್ವದ್ದು ಬೇರೇನಾದರೂ ಇದೆ ಎಂದು ನಮಗೆ ಅನಿಸುವುದಿಲ್ಲ' ಎಂದು ಮೇ 4ರಂದು ಒಂದು ವಿಶೇಷ ವಿಚಾರಣೆಯಲ್ಲಿ ಹೇಳಿರುವ ಸುಪ್ರಿಂಕೋರ್ಟ್ 150 ಕಡುಬಡತನದ ಜಿಲ್ಲೆಗಳಿಗೆ 50 ಲಕ್ಷ ಟನ್ ಹೆಚ್ಚುವರಿ ಆಹಾರಧಾನ್ಯಗಳನ್ನು ಪೂರೈಸುವಂತೆ ಆದೇಶ ನೀಡಿದೆ.

ಬಡತನದ ರೇಖೆಯನ್ನು ನಿರ್ಧರಿಸುವ ಮಾನದಂಡಗಳನ್ನು ಪರಿಷ್ಕರಿಸುವಂತೆಯೂ ನ್ಯಾಯಾಲಯ ಯೋಜನಾ ಆಯೋಗಕ್ಕೆ ಹೇಳಿದೆ. ದೇಶದಲ್ಲಿ ಬಡತನ ಇಳಿಯುತ್ತಿದೆ, 2005ರಲ್ಲಿ 37.2 ಶೇ. ಇದ್ದದ್ದು, 2009 ರಲ್ಲಿ 32ಶೇ. ಕ್ಕೆ ಇಳಿದಿದೆ ಎಂದು ಯೋಜನಾ ಆಯೋಗ ಹೇಳುತ್ತಿರುವ ಸಂದರ್ಭದಲ್ಲೇ ಹಸಿವಿನಿಂದ ಸಾವುಗಳು ಸಂಭವಿಸುತ್ತಿರುವ ಸಂಗತಿ ಸುಪ್ರಿಂ ಕೋರ್ಟ್ ಸೇರಿದಂತೆ ಹಲವರ ಗಮನ ಸೆಳೆದಿದೆ. ಬಡತನದ ರೇಖೆಯನ್ನು ಎಷ್ಟು ಹೆಚ್ಚು ಜನಗಳನ್ನು ಸಬ್ಸಿಡಿಗಳಿಗೆ ಅನರ್ಹರಾಗಿಸಬಹುದು ಎಂಬ ಆಧಾರದಲ್ಲಿ ರೂಪಿಸಲಾಗುತ್ತಿದೆ ಎಂಬುದು ಹಲವರ ಗುಮಾನಿ.

★

ಭೂಸ್ವಾಧೀನ ಮಸೂದೆ ಇನ್ನೂ ತಯಾರಾಗಿಲ್ಲ

ಉತ್ತರಪ್ರದೇಶದಲ್ಲಿ ಯುಪಿಎ-2 ಸರಕಾರದ ನೇತೃತ್ವದಲ್ಲಿರುವ ಪಕ್ಷದ ಪ್ರಧಾನ ಕಾರ್ಯದರ್ಶಿಗಳು ಅನ್ಯಾಯದ ಭೂಸ್ವಾಧೀನದ ವಿರುದ್ಧ ಹೋರಾಡುತ್ತಿರುವ ರೈತರಿಗೆ ತಮ್ಮ ಬೆಂಬಲವನ್ನು ಪ್ರದರ್ಶಿಸಲು ಓಡಾಡುತ್ತಿದ್ದರೂ ಅವರದ್ದೇ ಸರಕಾರ ಇನ್ನೂ ಭೂಸ್ವಾಧೀನ ಮತ್ತು ಮರುವಸತಿ ಕುರಿತ

ಪುಟ 15 ಕ್ಕೆ

2ಜಿ: ಬಿಎಸ್‌ಎನ್‌ಎಲ್‌ನ್ನು ಹಿಂಡಿ ರಿಲಯನ್ಸ್, ಸ್ವಾನ್‌ಗಳಿಗೆ ಸಬ್ಸಿಡಿ!

2ಜಿ ಹಗರಣವೆಂದರೆ ಸ್ವಾನ್, ರಿಲಯನ್ಸ್ ಮುಂತಾದವರಿಗೆ 2ಜಿ ತರಂಗಾಂತರದ ಅಕ್ರಮ ನೀಡಿಕೆಯಷ್ಟೇ ಅಲ್ಲ. ಅಕ್ರಮವಾಗಿ ಪಡೆದ ತರಂಗಾಂತರದ ಮೂಲಕ 'ಸೇವೆ' ಒದಗಿಸಲು ಸ್ವಂತ ಮೂಲರಚನೆಗೆ ಹಣ ಖರ್ಚು ಮಾಡುವ ಆಶಯ ಕೂಡ ಇಲ್ಲದ ಇಂತಹ ಕಂಪನಿಗಳಿಗೆ ಪುಕ್ಕಟೆಯಾಗಿ ಮೂಲರಚನೆಗಳನ್ನು ಒದಗಿಸಿಕೊಟ್ಟಿರುವುದು, ಆ ಮೂಲಕವೂ ಸಾರ್ವಜನಿಕ ಸಂಪನ್ಮೂಲಗಳ ಲೂಟಿ ಈ ಹಗರಣದ ಇನ್ನೊಂದು ಆಯಾಮ.

ಹೊಸದಾಗಿ ತರಂಗಾಂತರ ಪಡೆದ ಸ್ವಂತ ಮೂಲಸೌಕರ್ಯಗಳಿಲ್ಲದ ಈ ಕೆಲವು ಖಾಸಗಿ ಕಂಪನಿಗಳಿಗೆ ಅವನ್ನು ಒದಗಿಸುವಂತೆ ಎ.ರಾಜ ಆಳ್ವಿಕೆಯಲ್ಲಿ ದೂರಸಂಪರ್ಕ ಇಲಾಖೆ ಬಿಎಸ್‌ಎನ್‌ಎಲ್‌ಗೆ ಆದೇಶ ನೀಡಿತ್ತು. ಅಂದರೆ ತನ್ನ ಪ್ರತಿಸ್ಪರ್ಧಿಗೆ ತನ್ನ ವಿರುದ್ಧ ಸ್ಪರ್ಧಿಸಲು ತಾನೇ ಅವಕಾಶ ಕಲ್ಪಿಸಿಕೊಡಬೇಕಾದ ಪೇಚು! ಇಂತಹ ಆದೇಶವನ್ನು ಆದಾಗಲೇ ಸ್ವಂತ ಮೂಲಸೌಕರ್ಯಗಳನ್ನು ಹೊಂದಿ ಸೇವೆಗಳನ್ನು ಒದಗಿಸುತ್ತಿದ್ದ ಬೇರೆ ಯಾವ (ಖಾಸಗಿ)ಕಂಪನಿಗೂ ನೀಡಿರಲಿಲ್ಲ ಎಂಬುದನ್ನು ಗಮನಿಸಬೇಕು.

ಬಿಎಸ್‌ಎನ್‌ಎಲ್ ಸಂಪನ್ಮೂಲಗಳನ್ನು ಅದರ ವಿರುದ್ಧವೇ ಬಳಸಿ ರಿಲಯಂಸ್, ಸ್ವಾನ್ ಕಂಪನಿಗಳಿಗೆ ಸಬ್ಸಿಡಿ ನೀಡುವ ಈ ಕ್ರಮಗಳಷ್ಟರಿಂದಲೇ ಎ. ರಾಜ ತೃಪ್ತರಾಗಲಿಲ್ಲ. 2006ರಿಂದ ಬಿಎಸ್‌ಎನ್‌ಎಲ್‌ಗೆ ಹೊಸ ಸಾಧನೋಪಕರಣಗಳು ಸಿಗದಂತೆ, ಆ ಮೂಲಕ ಹೊಸ ಗ್ರಾಹಕರನ್ನು ಪಡೆಯದಂತೆ ವಿಶೇಷ 'ಮುತುವರ್ಜಿ' ವಹಿಸುವ ಮೂಲಕವೂ ತಮಗೆ ಸೂಕ್ತ 'ಪ್ರತಿಫಲ' ನೀಡಿದ ಖಾಸಗಿ ಕುಳಗಳಿಗೆ ಸಹಾಯ ಹಸ್ತ ನೀಡಲಾಯಿತು!

ಅದನ್ನು 'ಸಾಧಿಸಿ'ದ ಉಪಾಯ ನೋಡಿ- ಬಿಎಸ್‌ಎನ್‌ಎಲ್ ಗೆ ದೂರಸಂಪರ್ಕ ಸಾಧನೋಪಕರಣಗಳನ್ನು ಪೂರೈಸುವ ಎಲ್ಲ ಕಂಪನಿಗಳೂ ತಮ್ಮ ಉತ್ಪನ್ನಗಳ 'ಸೋರ್ಸ್ ಕೋಡ್'ಗಳನ್ನು ನೀಡಬೇಕು ಎಂಬ ಶರತ್ತು ವಿಧಿಸಲಾಯಿತು. 'ಸುರಕ್ಷತೆ'ಯ ದೃಷ್ಟಿಯಿಂದ ಇದು ಅಗತ್ಯ ಎನ್ನಲಾಯಿತು. ಇದನ್ನು ಕೊಡಲು ಯಾವ ಕಂಪನಿಯೂ ಸಿದ್ಧವಿರುವುದಿಲ್ಲ. ಆದರೆ ಚೀನೀ ಕಂಪನಿ ಇದಕ್ಕೆ ಸಿದ್ಧವಿತ್ತು. ಆದರೆ ಮತ್ತೆ 'ಸುರಕ್ಷತೆ'ಯ ನೆಪವೊಡ್ಡಿ ಆ ಚೀನೀ ಕಂಪನಿಯಿಂದ ಬಿಎಸ್‌ಎನ್‌ಎಲ್ ತನಗೆ ಅಗತ್ಯವಾದ ಸಾಧನೋಪಕರಣಗಳನ್ನು ಖರೀದಿಸಬಾರದು ಎಂದು ತಾಕೀತು ಮಾಡಲಾಯಿತು. ಈ 'ಸುರಕ್ಷತೆ'ಯ ಶರತ್ತಾಗಲೀ, ಆ ಚೀನೀ ಕಂಪನಿಯಿಂದ ಖರೀದಿಸಬಾರದೆಂಬ ಶರತ್ತಾಗಲೀ ಯಾವ ಖಾಸಗೀ ಕಂಪನಿಗೂ ಅನ್ವಯವಾಗುವುದಿಲ್ಲ! ಹೇಗಿದೆ ಬೆಲೆಬಾಳುವ ಸಾರ್ವಜನಿಕ ಸಂಪನ್ಮೂಲಗಳನ್ನು ಬಂಡವಾಳಶಾಹಿ ವರ್ಗದ ಒಡೆತನಕ್ಕೆ ಹಸ್ತಾಂತರಿಸುವ ಈ ಚಮಚಾ ಬಂಡವಾಳಶಾಹಿ ಕರಾಮತ್ತು!



ಬಿಜೆಪಿ ದರ್ಬಾರ್

■ ಆರ್.ರಾಮಕೃಷ್ಣ

ಇಂಗ್ಲೆಂಡ್‌ನ ಲ್ಯಾಂಬೆತ್ ನಗರದಲ್ಲಿ ಬಸವ ಪ್ರತಿಮೆಗೆ ಮೂರು ಕೋಟಿ

ಮೊನ್ನೆ ಮೊನ್ನೆ ಮೈಸೂರಿನ ಸುತ್ತೂರು ಮಠದಲ್ಲಿ ಅಖಿಲ ಭಾರತ ವೀರಶೈವ ಸಮ್ಮೇಳನ ಅಂತ ಒಂದು ಜಾತಿ ಜಾತ್ರೆ ನಡೆದು ಯಡಿಯೂರಪ್ಪ ಎಂಬ ಕರ್ನಾಟಕ ರಾಜ್ಯದ ಖಂಡ ಮುಖ್ಯಮಂತ್ರಿ ಸೇರಿದಂತೆ ಜಾತಿ ಬಾಂಧವರು ಯಾರೇ ಕಷ್ಟಕ್ಕೆ ಸಿಕ್ಕಿಬಿದ್ದರೂ ಅವರನ್ನು ಕಾಪಾಡಲು ಒಂದಾಗಿ ನಿಲ್ಲಬೇಕು ಅಂತ ಒಂದು ನಿರ್ಣಯ ಆಗಿತ್ತಲ್ಲ... ಅದರ ಜೊತೆಗೆ ಅಲ್ಲಿ ನಾವು ಗಮನಿಸಬೇಕಾದ ಇನ್ನು ಏನೇನೋ ನಡೆದಿವೆ.

ಈ ಮಾಹಿತಿ ನೋಡಿ. ಇಂಗ್ಲೆಂಡ್ ದೇಶದ ಲ್ಯಾಂಬೆತ್ ಎಂಬ ನಗರದಲ್ಲಿ ಬಸವಣ್ಣ ಅವರ ಪ್ರತಿಮೆ ಸ್ಥಾಪನೆಗೆ ಅಂತ ಸಮ್ಮೇಳನದಲ್ಲಿ ಡಾ। ಬಿ.ಎಸ್.ಯಡಿಯೂರಪ್ಪನವರು 3 ಕೋಟಿ ರೂಪಾಯಿಗಳ ಚೆಕ್ ಅನ್ನು ರಾಜ್ಯ ಸರ್ಕಾರದ ಪರವಾಗಿ ನೀಡಿದರಂತೆ. ಅತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬಕ್ಕೆ ಏನೊಂದನ್ನು ನೀಡದಿದ್ದರೂ ಬಸವಣ್ಣ ಅವರ ಪ್ರತಿಮೆಗೆ... ಮತ್ತೊಂದು ಪ್ರತಿಮೆಗೆ ಕೋಟಿ ಕೋಟಿ ನೀಡುವ ಯಡಿಯೂರಪ್ಪನವರ ಪ್ರತಿಮೆಯ 'ಹುಚ್ಚು' ಯಾವ ಹಂತ ತಲುಪಿದೆ ನೋಡಿ.

ಬಸವಣ್ಣನವರ ಪ್ರತಿಮೆ ಸ್ಥಾಪನೆಗಿಂತಲೂ ಅರ್ಥಪೂರ್ಣವಾಗಿ ಅವರ ವಿಚಾರ ಧಾರೆಗಳನ್ನು ಸಕಾರಗೊಳಿಸುವ ಕೆಲಸಕ್ಕೆ ಇದೇ ಹಣವನ್ನು ಕೊಡಬಾರದೇ ಎಂಬ ಪ್ರಶ್ನೆ ಇದ್ದೇ ಇದೆ. ಆದರೆ ಇದರಲ್ಲಿ ಇನ್ನು ಗಂಭೀರವಾದ ಹಲವು ಪ್ರಶ್ನೆಗಳು ಅಡಗಿಕೊಂಡಿವೆ.

ಒಂದು ಸರ್ಕಾರದ ಖಜಾನೆಯಿಂದ ಅಂದರೆ ರೈತರು, ಕಾರ್ಮಿಕರು, ಕೂಲಿಕಾರರ ಬೆವರನ್ನು ಕೊಳ್ಳೆ ಹೊಡೆದು ತುಂಬಿಕೊಂಡ ಖಜಾನೆಯಿಂದ ಯಾವುದೇ ಉದ್ದೇಶಕ್ಕೆ ಹಣ ಕೊಡುವಾಗ ಹೀಗೆ ಒಂದು ಸರ್ಕಾರಿ ಸಮಾರಂಭ ಅಲ್ಲದ ಜಾತಿ ಸಂಘದ ಸಮಾರಂಭದಲ್ಲಿ ಅದನ್ನು ವಿತರಿಸ ಬಹುದೇ ?

ನೈತಿಕ ಮತ್ತು ಕಾನೂನು ಸಂಬಂಧಿ ಪ್ರಶ್ನೆಗಳು ಇದಕ್ಕೆ ಅಡ್ಡಿ ಬರುವುದಿಲ್ಲವೇ ?

ಸರ್ಕಾರದ ಚೆಕ್ ಅನ್ನು ಸ್ವೀಕಾರ ಮಾಡಿದವರು ಯಾರು? ಗುಲಬರ್ಗಾ ಮೂಲದ ನೀರಜ್ ಪಾಟೀಲ್. ಅವರು ಲ್ಯಾಂಬೆತ್ ನಗರದ ಮೇಯರ್ ಎಂದು ಸಾರಿ ಅವರ ಕೈಗೆ ಚೆಕ್ ಇಡಲಾಗಿದೆ. ಆದರೆ ನೀರಜ್ ಆ ಹೊತ್ತಿಗಾಗಲೇ ಮಾಜಿ ಮೇಯರ್ ಅನಿಸಿಕೊಂಡು ಎಷ್ಟೋ ದಿನಗಳಾಗಿತ್ತು. ಸರ್ಕಾರಕ್ಕೆ ಇದು ಗೊತ್ತಿರಲಿಲ್ಲವೇ? ಯಾಕಿಂಥ ಸುಳ್ಳು, ತಟವಟಗಳು. ?!

ತನ್ನ ವ್ಯಾಪ್ತಿಯಲ್ಲಿ ಬಸವ ಪ್ರತಿಮೆ ಸ್ಥಾಪನೆಗೆ ಲ್ಯಾಂಬೆತ್ ನಗರ ಪಾಲಿಕೆಯ ಒಪ್ಪಿಗೆ ಇದೆಯೇ ? ಅದಕ್ಕೆ ಸಂಬಂಧಿಸಿದ ದಾಖಲೆಗಳು ಸರ್ಕಾರದ ಬಳಿಯಲ್ಲಿವೆಯೇ ? ಹುಚ್ಚು ದರ್ಬಾರ್ ಎಂಬುದಕ್ಕೂ ಒಂದು ಮಿತಿ ಎಂಬುದು ಇಲ್ಲವೇ? ಏನಿದು ಯಡಿಯೂರಪ್ಪನವರ ಲೀಲೆ.

★

ಒಬ್ಬೊಬ್ಬರಿಗೆ ಒಂದೊಂದು ಕಾನೂನೇ ?! ಈ ಬಿಜೆಪಿ ದರ್ಬಾರ್‌ನಲ್ಲಿ

ಮಾಸ್ಟರ್ ಕಿಷನ್ ಅಂತ ಒಬ್ಬ ಬಾಲ ನಟ. ಆತ ಸಣ್ಣ ವಯಸ್ಸಿಗೆ ಒಂದು ಚಲನಚಿತ್ರವನ್ನೆ ನಿರ್ದೇಶಿಸಿ ಬಿಟ್ಟ ಬಗ್ಗೆ ಹಿಂದೆ ಭಾರಿ ಸುದ್ದಿ ಮಾಡಲಾಗಿತ್ತು. 'ಕೇರ್ ಆಫ್ ಪುಟ್‌ಪಾತ್' ಅಂತ ಆ ಸಿನಿಮಾದ ಹೆಸರು. ಈಗ ಆತನಿಗೆ ಸಂಬಂಧಿಸಿದ ಮತ್ತೊಂದು ಸುದ್ದಿ ಇದೆ.

ಕಿಷನ್ ಈಗ 10 ನೇ ತರಗತಿ ಪಾಸಾಗಿದ್ದಾನೆ. 577 ಅಂದರೆ ಶೇ.92.32 ಅಂಕ ಗಳಿಸಿದ್ದಾನೆ. ಮುಂದೆ ಆತ ಪದವಿ ಪೂರ್ವ ತರಗತಿಗೋ ಅಥವಾ ತತ್ಸಮಾನವಾದ ಯಾವುದಾದರು ಕೋರ್ಸಿಗೋ ಸೇರುತ್ತಾನೆ ಬಿಡಿ ಅಂದುಕೊಳ್ಳಬೇಡಿ. ಆತನಿಗೆ ಈಗ 'ಮಲ್ಟಿ ಮೀಡಿಯಾ ಮತ್ತು ಅನಿಮೇಷನ್' ಅನ್ನುವ ಕೋರ್ಸಿನಲ್ಲಿ ಸ್ನಾತಕೋತ್ತರ ತರಗತಿಗೆ ಅಂದರೆ ಪದವಿ ನಂತರದ ಹಂತದ ತರಗತಿಗೆ ಪ್ರವೇಶಕ್ಕೆ ಅವಕಾಶ ಮಾಡಿಕೊಡಲಾಗಿದೆಯಂತೆ!.

ಕಿಷನ್ ತನ್ನ ಸಿನಿಮಾದ ಮೂಲಕ ಪ್ರತಿಪಾದಿಸಿದ್ದು ಅದನ್ನೆ. 'ಪ್ರತಿಭಾವಂತ'ರಾದವರು ಯಾಕೆ ಎಲ್ಲ ತರಗತಿಗಳ ಮೆಟ್ಟಿಲುಗಳನ್ನು ಹತ್ತಿಕೊಂಡು ಮೇಲೆ ಹೋಗಬೇಕು. ಅವರಿಗೆ ಒಂದೇ ಸಾರಿಗೆ ಅಟ್ಟ ಹತ್ತಲು ಅವಕಾಶ ಕೊಡಿ ಅಂತ ಆ ಸಿನಿಮಾದ ವರಾತ ಇದ್ದದ್ದು. ಆಗ ಸಿನಿಮಾದಲ್ಲಿ ಮಾಡಿದ್ದನ್ನೆ ನಿಜ ಜೀವನದಲ್ಲೂ ಕಿಷನ್ ಮಾಡಿದಂತಿದೆ. ಮಕ್ಕಳೇನೋ ಸ್ವಂತ ತಿಳುವಳಿಕೆ ಇಲ್ಲದೇ ದೊಡ್ಡವರಿಂದ ಪ್ರಭಾವಿತರಾಗಿ ಏನೇನೋ ಕೇಳುತ್ತವೆ. ಆದರೆ ಜವಾಬ್ದಾರಿ ಹೊತ್ತ ಸರ್ಕಾರಗಳಿಗೆ ಕೊಂಚವಾದರೂ ಬುದ್ದಿ ಇರಬೇಡವೇ. ಪ್ರತಿಭೆ ಹೆಸರಿನಲ್ಲಿ ಸಮಾನತೆಯ ತತ್ವ, ಕಾನೂನುಗಳನ್ನು ಹೀಗೆ ನಗ್ನವಾಗಿ ಉಲ್ಲಂಘಿಸುವುದು ತರವಲ್ಲವೆಂಬ ವಿವೇಕ ಬೇಡವೇ? ಹಿಂದೆ ಎಂದೋ ಅಂಥ ಅವಕಾಶ ಇತ್ತಂತೆ.

ಹಿಂದೆ ಶೂದ್ರರು, ದಲಿತರಿಗೆ ಶಿಕ್ಷಣವನ್ನೇ ನಿರಾಕರಿಸುವ ವ್ಯವಸ್ಥೆ ಇತ್ತು. ಹಿಂದೆ ಇತ್ತು ಅಂತ ಅದನ್ನೆ ಈಗ ತರುವುದು ಮನುಷ್ಯತ್ವವೇ ? ನಿಜಕ್ಕೂ ಏನು ನಡೆಯುತ್ತಿದೆ ಈ ಬಿಜೆಪಿ ಸರ್ಕಾರದಲ್ಲಿ ?!!

ಬಿ.ಜೆ.ಪಿ.ಯ ಲಕ್ಷ್ಯ

ಕೇಶವ ಶಿಲ್ಪದೆಡೆಗೆ ಬಿ.ಜೆ.ಪಿ. ಲಕ್ಷ್ಯ
ಹೀಗಾಗಿ ಆಡಳಿತ ಸಂಪೂರ್ಣ ದಕ್ಷ
ಬಡವರಿಗೆ ಪರಟೆಯೊಳು ಬೇಡಲಿಕೆ ಭಿಕ್ಷೆ
ಕೇಶವ ಶಿಲ್ಪವೇ ಕೊಡಿಸುವುದು ದೀಕ್ಷೆ

- ವಿಡಂಬಾರಿ

ಎಚ್ಚರಿಕೆ!

ಸುಳ್ಳನಿಗೆ ನೀಸುಳ್ಳ ಕಳ್ಳನಿಗೆ ಕಳ್ಳ
ಎಂಬುದಕೆ ಮುಂದಿನ್ನು ಅವಕಾಶ ಇಲ್ಲ
ಈ ರೀತಿ ಕಾನೂನು ರೂಪಿಸಲು ಇಂದೆ
ಆಡಳಿತವೇ ನೋಡಿ ಬರುತಿಹುದು ಮುಂದೆ

- ವಿಡಂಬಾರಿ

ಈಗಲಾದರೂ ಪೆಟ್ರೋಲ್ ಮೇಲಿನ ತೆರಿಗೆ ಇಳಿಸಬಾರದೇ?!

ಪೆಟ್ರೋಲ್ ಬೆಲೆಗಳು ಮತ್ತೆ ಏರಿವೆ. ಈ ಬಾರಿ ಒಂದು ಲೀಟರ್‌ಗೆ ಒಂದೇ ಬಾರಿಗೆ 5 ರೂಪಾಯಿ ಏರಿಸಲಾಗಿದೆ. ಈ ಏರಿಕೆಗೆ ಅಂತರ ರಾಷ್ಟ್ರೀಯ ಮಾರು ಕಟ್ಟೆಯಲ್ಲಿನ ಬೆಲೆ ಏರಿಕೆಯನ್ನು ಕಾರಣವಾಗಿ ಕೊಡಲಾಗುತ್ತದೆ. ಇದು ಒಂದು ದೊಡ್ಡ ಮೋಸ. ವಾಸವ್ತವಾಗಿ ನೋಡಿದರೆ ಪೆಟ್ರೋಲ್‌ನ ಒಟ್ಟು ಬೆಲೆಯಲ್ಲಿ ಅರ್ಧಕ್ಕಿಂತ ಹೆಚ್ಚು ಅಂದರೆ ಶೇ. 51 ರಷ್ಟು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಕುವ ತೆರಿಗೆಗಳೇ ಇವೆ.

ಕರ್ನಾಟಕದಲ್ಲಿ ಪೆಟ್ರೋಲ್‌ನ ಬೆಲೆ ಈಗ 71 ರೂಪಾಯಿಯನ್ನು ದಾಟಿದೆ. ಈ ದರ ದೇಶದಲ್ಲೆ ಅತ್ಯಧಿಕ. ಕೊಲ್ಕತ್ತದಲ್ಲಿ ಒಂದು ಲೀಟರ್ ಪೆಟ್ರೋಲ್ ಈಗ ಬೆಲೆ ಏರಿದ ಮೇಲೂ ಕೂಡ 67.00.

ಪೆಟ್ರೋಲ್ ಬೆಲೆ ಕರ್ನಾಟಕದಲ್ಲಿ ದೇಶದಲ್ಲೆ ಅತ್ಯಧಿಕ ಇರೋದರಲ್ಲಿ ನಮ್ಮ ರಾಜ್ಯದ ಬಿಜೆಪಿ ಸರ್ಕಾರದ ಪಾತ್ರ ಏನೂ ಕಡಿಮೆ ಇಲ್ಲ. ಶೇ. 25 ರಷ್ಟು ಮಾರಾಟ ತೆರಿಗೆ ಹಾಗೂ ಶೇ 5 ರಷ್ಟು ಪ್ರವೇಶ ತೆರಿಗೆ ಅಂತ ತೆರಿಗೆಯ ಮೇಲೆ ತೆರಿಗೆ ಹಾಕುತ್ತಿರುವುದರಿಂದ ಬೆಲೆಗಳು ಈ ಪಾಟಿ ಏರಿ ಕೂತಿವೆ.

ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪೆಟ್ರೋಲ್ ಬೆಲೆಗಳು ಏರಿದರೆ ನಮ್ಮ ಆಳುವ ಸರ್ಕಾರಗಳಿಗೆ ಖುಷಿಯೋ ಖುಷಿ. ಏಕೆಂದರೆ ಬೆಲೆ ಏರಿದಂತೆಲ್ಲ ತೆರಿಗೆಯ ಪ್ರಮಾಣವೂ ಏರಿ ಖಜಾನೆಗೆ ಹರಿದು ಬರುವ ಹಣ ಏರುತ್ತಾ ಹೋಗುತ್ತದೆ. ಆದರೆ ಈ ನಿಟ್ಟಿನಲ್ಲಿ ಭಿನ್ನವಾಗಿ ಚಿಂತಿಸಿದ ಪರಂಪರೆ ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ್ದು. ಈ ಬೆಲೆ ಏರಿಕೆಯಿಂದ ಜನರ ಬದುಕಿನ ಮೇಲೆ ಆಗುವ ಭೀಕರ ಪರಿಣಾಮಗಳ ಬಗೆಗೆ ಕಾಳಜಿ ವಹಿಸಿದ ಎಡರಂಗ ಸರ್ಕಾರಕ್ಕೆ ಬರುವ ಒಟ್ಟು ಆದಾಯ ಹೆಚ್ಚುವುದರಿಂದ ತೆರಿಗೆ ಪ್ರಮಾಣವನ್ನು ಕಡಿಮೆ ಮಾಡುವಂತಹ ಕ್ರಮ ಕೈಗೊಡಿತು. ಅದರಿಂದಾಗಿ ಕೊಲ್ಕೋತ್ತದಲ್ಲಿ ಪೆಟ್ರೋಲ್ ಬೆಲೆ ಬೇರೆ ನಗರಗಳಿಗಿಂತ ಕಡಿಮೆ.



ಬರಿ ಮಠಾಧೀಶರುಗಳಿಗೆ ಉಂಬಳಿ ಕೊಡುವುದು, ಪ್ರತಿಮೆಗಳ ಸ್ಥಾಪನೆಗೆ ಕೋಟಿ ಕೋಟಿ ಕೊಡುಗೆ ಕೊಡುವುದರ ಕಡೆಗೆ ಗಮನ ನೆಟ್ಟಿರುವ ಯಡಿಯೂರಪ್ಪನವರ ಸರ್ಕಾರಕ್ಕೆ ಜನರು ಬೆಲೆ ಏರಿಕೆಯ ಬೆಂಕಿಯಲ್ಲಿ ಬೆಂದರೆ, ಸೀದು ಹೋದರೆ ತಾನೆ ಏನಾಗಬೇಕಿದೆ?

ಜಗದಗಲ

ಶರತ್‌ಚಂದ್ರ

'ನಕ್ಬಾ' (ಮಹಾದುರಂತ) ದಿನದಂದು

ಅರಬ್ ಜನತೆಯ ಆಕ್ರೋಶ



ಕಳೆದ ಭಾನುವಾರ ಇತ್ತೀಚೆಗೆ ಜಗತ್ತನ್ನು ಆಗಾಗ ಚಕಿತಗೊಳಿಸುತ್ತಿರುವ ಅರಬ್ ಜನತೆ ಇನ್ನೊಮ್ಮೆ ಚಕಿತಗೊಳಿಸಿದರು. ಪ್ಯಾಲೆಸ್ಟೈನ್ ಜನತೆ "ನಕ್ಬಾ" (ಮಹಾ ದುರಂತ) ದಿನ ಎಂದು ಕರೆಯುವ ಮೇ 15 ಪ್ರತಿ ವರ್ಷ "ಪ್ರತಿಭಟನಾ ದಿನ"ವಾಗಿ ಆಚರಿಸುತ್ತಾರೆ. 1948 ರಲ್ಲಿ ಪ್ಯಾಲೆಸ್ಟನ್ನರ ಸ್ವಾತಂತ್ರ್ಯ ಹರಣ ಮಾಡಿ ಇಸ್ರೇಲಿ ದೇಶ ಸ್ಥಾಪಿಸಿದ ದಿನ ಇದು. ಆದರೆ ಈ ಬಾರಿ ಅಂದು ಇಡೀ ಅರಬ್ ಜನತೆ ಪ್ಯಾಲೆಸ್ಟೈನ್ ಜನತೆಯ ಜತೆ ಸೌಹಾರ್ದತೆಯ ಪ್ರದರ್ಶನ ಮಾಡಿದರು. ಅತ್ಯಂತ ಸಂಯೋಜಿತ ರೀತಿಯಲ್ಲಿ ಅಮೆರಿಕ, ಇಸ್ರೇಲುಗಳ ವಿರುದ್ಧ ಈ ಮಹಾದುರಂತವನ್ನು ತಮ್ಮ ಮಿಲಿಟರಿ ಬಲದಿಂದ ಮುಂದೊಯ್ಯುತ್ತಿರುವುದರ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಅದೂ ತಮ್ಮ ಮಿಲಿಟರಿ ಸರ್ವಾಧಿಕಾರಿಗಳ ಅಥವಾ ದೊರೆಗಳ ವಿರೋಧ-ದಬ್ಬಾಳಿಕೆಯನ್ನು ಲೆಕ್ಕಿಸದೆ. ಇಸ್ರೇಲಿ ಸರ್ಕಾರ ಮತ್ತು ಸೈನ್ಯವನ್ನು ಸಹ ಚಕಿತಗೊಳಿಸಿದರು.

ಇಸ್ರೇಲಿ ಅಧಿಪತ್ಯದಲ್ಲಿರುವ ಪ್ಯಾಲೆಸ್ಟೈನ್ ಪ್ರದೇಶಗಳಲ್ಲಿ ಎಂದಿನಂತೆ ತೀವ್ರ ಪ್ರತಿಭಟನೆಗಳು ನಡೆದವು. ಪ್ಯಾಲೆಸ್ಟೈನ್ನರ ಮೇಲೆ ಹಾಕಿರುವ ಚೆಕ್ ಪಾಯಿಂಟ್ ಎಂದು ಕರೆಯುವ ಅಗಣಿತ ದಿಗ್ಬಂಧನಗಳನ್ನು ಉಲ್ಲಂಘಿಸಿ ಇಸ್ರೇಲಿ ಸೈನಿಕರ ಜತೆ ಹಿಂದಿನ ವರ್ಷಗಳಂತೆ ಜಟಾಪಟಿ ನಡೆಸಿದರು. ಗಾಜಾ ಪ್ರದೇಶದಲ್ಲಿ ತೀವ್ರ ಘರ್ಷಣೆಗಳು ನಡೆದವು. ಆದರೆ ಇಸ್ರೇಲಿನ ಜತೆ ಗಡಿ ಇರುವ ಎಲ್ಲಾ ಅರಬ್ ದೇಶಗಳಿಂದ ಏಕ ಕಾಲಕ್ಕೆ ಸಾವಿರಾರು ಪ್ಯಾಲೆಸ್ಟೈನ್ ನಿರಾಶ್ರಿತರು ಮತ್ತು ಆ ಅರಬ್ ಪ್ರಜೆಗಳು ಇಸ್ರೇಲೊಳಗೆ ನುಗ್ಗಲು ಪ್ರಯತ್ನಿಸಿದರು. ಇಸ್ರೇಲಿ ಸೈನಿಕರ ಜತೆ ಘರ್ಷಣೆಗಳಿಗೆ ಇಳಿದರು. ಚಕಿತಗೊಂಡ ಇಸ್ರೇಲಿ ಸೈನಿಕರು ಜನರ ಮೇಲೆ ದಾಳಿ ಮಾಡಿದಾಗ ಹತ್ತಾರು ಜನ ಸತ್ತು ನೂರಾರು ಜನ ಗಾಯಗೊಂಡಿದ್ದಾರೆ. ಇಂತಹ ಘಟನೆಗಳು ನೆರೆಯ ಅರಬ್ ದೇಶಗಳಾದ ಸಿರಿಯಾ, ಲೆಬನಾನ್, ಜೋರ್ಡಾನ್ ಮತ್ತು ಈಜಿಪ್ಟುಗಳಿಂದ ವರದಿಯಾಗಿದೆ.

ಸಿರಿಯಾ ಲೆಬನಾನ್ ಗಡಿಯಲ್ಲಿ

1967 ರ ಯುದ್ಧದಲ್ಲಿ ಇಸ್ರೇಲು ಕಸಿದುಕೊಂಡಿದ್ದ ಸಿರಿಯಾದ ಗೋಲನ್ ಪ್ರದೇಶಕ್ಕೆ ಸಾವಿರಾರು ಸಿರಿಯನ್ನರು ಮತ್ತು ಪ್ಯಾಲೆಸ್ಟೈನ್ ನಿರಾಶ್ರಿತರು ನುಗ್ಗಲು ಪ್ರಯತ್ನಿಸಿದರು. ಚಕಿತರಾದ ಇಸ್ರೇಲಿ ಸೈನಿಕರ ಮೇಲೆ ಕಲ್ಲು ಬಾಟಲುಗಳನ್ನು ಎಸೆದರು. ಸೈನಿಕರು ಗುಂಡು ಹಾರಿಸಿ ಭಾರೀ ಸಂಖ್ಯೆಯಲ್ಲಿ ಜನ ನುಗ್ಗುವುದನ್ನು ತಡೆದರು. ಆದರೆ ನುಗ್ಗುವುದರಲ್ಲಿ ಸಫಲರಾದ ನೂರಾರು ಜನ ಇಸ್ರೇಲಿ ವಶದಲ್ಲಿರುವ ಮಜದಾಲ್ ಶಾಮ್ಸ್ ಪಟ್ಟಣದಲ್ಲಿ ತಮ್ಮ ಸಿರಿಯನ್ ಐಡಿ ಕಾರ್ಡುಗಳನ್ನು ಮತ್ತು ಪ್ಯಾಲೆಸ್ಟೈನ್ ಬಾವುಟಗಳನ್ನು ಪ್ರದರ್ಶಿಸುತ್ತಾ ಮೆರವಣಿಗೆ ಮಾಡಿದರು. "ಇದು ನಮ್ಮ ನಾಡು... ಇಲ್ಲಿ ನಾವು ಬರುವುದನ್ನು ತಡೆಯುವುದು ಯಾರಿಂದಲೂ ಸಾಧ್ಯವಿಲ್ಲ" ಎಂದು ಹಲವು ಪ್ರದರ್ಶನಕಾರರು ಕೂಗುತ್ತಿದ್ದರು. ಈ ನೂರಾರು ಪ್ರದರ್ಶನಕಾರರರನ್ನು ಸಿರಿಯನ್ ಗಡಿಯಿಂದ ಆಚೆಗೆ ಕಳಿಸಬೇಕಾದರೆ ಇಸ್ರೇಲಿ ಸೈನಿಕರಿಗೆ ಸಾಕು ಬೇಕಾಯಿತು. ಇದು ಸಿರಿಯಾ ಸರ್ಕಾರದ ವಿರುದ್ಧ ಎದ್ದಿರುವ ಚಳುವಳಿಯಿಂದ ಜನರ ಗಮನ ಸೆಳೆಯಲು ಅದರ ಪಿತೂರಿ ಅಂತ ಇಸ್ರೇಲು ಆಪಾದಿಸಿದೆ. ಆದರೆ ನೆರೆಯ ಎಲ್ಲಾ ಅರಬ್ ದೇಶಗಳಲ್ಲಿ ಇಂತಹುದೇ ಘಟನೆಗಳು ನಡೆದಿದೆ ಎಂಬುದಕ್ಕೆ ಸಮಜಾಯಿಷಿ ಕೊಡಲು ಅವರಿಗೆ ಆಗಿಲ್ಲ. 1973 ರಿಂದ ಈ ಸಿರಿಯಾ-ಇಸ್ರೇಲ್ ಗಡಿಯಲ್ಲಿ ಯಾವುದೇ ಇಂತಹ ಯಾವುದೇ ಘರ್ಷಣೆ ಆಗಿರಲಿಲ್ಲ.



2006 ರಲ್ಲಿ ಹಿಜಬೊಲ್ಲಾ ಗೆರಿಲ್ಲಾಗಳು ಮತ್ತು ಇಸ್ರೇಲಿ ಸೈನ್ಯದ ನಡುವೆ ಭೀಷಣ ಘರ್ಷಣೆ ನಡೆದ ಮರೌನ್-ಎಲ್-ರಾಸ್ ಎಂಬ ಗಡಿಯ ಹಳ್ಳಿಗೆ ಸಿರಿಯಾದ 4 ಲಕ್ಷಕ್ಕೂ ಹೆಚ್ಚು ಪ್ಯಾಲೆಸ್ಟೈನ್ ನಿರಾಶ್ರಿತರು ವಾಸಿಸುವ 16 ಕ್ಯಾಂಪುಗಳು ಮತ್ತು ಸುತ್ತ ಮುತ್ತಲಿನ ಲೆಬನಾನ್ ನಾಗರಿಕರು ಸಾವಿರಾರು ಸಂಖ್ಯೆಯಲ್ಲಿ ಬಸ್ಸುಗಳಲ್ಲಿ ಬಂದಿಳಿದರು. ಬಸ್ಸುಗಳ ಮೇಲೆ "ನಾವು ವಾಪಸು ಬರುತ್ತಿದ್ದೇವೆ" ಎಂದು ಬರೆದಿತ್ತು. ಲೆಬನಾನ್ ಮತ್ತು ವಿಶ್ವಸಂಸ್ಥೆಯ ಸೈನಿಕರು ಹರ ಸಾಹಸ ಮಾಡಿದರೂ ತಡೆಯಲಾಗದ ನೂರಾರು ಜನರ ಮೇಲೆ ಇಸ್ರೇಲಿ ಸೈನಿಕರು ಗುಂಡು ಹಾರಿಸಿದರು. 15 ಪ್ರದರ್ಶನಕಾರರು ಒಂದೇ ಘಟನೆಯಲ್ಲಿ ಸತ್ತ ವರದಿಗಳು ಬಂದಿವೆ.

ತಾಹ್ರಿರ್ ಚೌಕದಲ್ಲಿ

ಈಜಿಪ್ಟಿನ ಕೈರೋ ನಗರದ ತಾಹ್ರಿರ್ ಚೌಕ ಪುನಃ ಈ ಚಾರಿತ್ರಿಕ ಕ್ಷಣಕ್ಕೆ ಪುನಃ ಸಾಕ್ಷಿಯಾಯಿತು. ಎರಡು ದಿನ ಮೊದಲೇ "ನಕ್ಬಾ" ದಿನ ಆಚರಿಸುವ ಪ್ಯಾಲೆಸ್ಟೈನ್ನರ ಜತೆ ಸೌಹಾರ್ದ ತೋರಿಸಲು ಪ್ರದರ್ಶನ ಕರೆಯಲಾಗಿತ್ತು. ಸಾವಿರಾರು ಸಂಖ್ಯೆಯಲ್ಲಿ ಭಾರೀ ಜನ ಸೇರಿದ್ದರು. ಕೆಲವೇ ದಿನಗಳ ಹಿಂದೆ ಒಂದು ಮುಸ್ಲಿಂ ಮತ್ತು ಕ್ರಿಶ್ಚಿಯನ್ ಕುಟುಂಬದ ನಡುವಿನ ಸಣ್ಣ ವಿವಾದ ಕೋಮು ಗಲಭೆಗೆ ಎಡೆ ಮಾಡಿಕೊಟ್ಟಿತ್ತು. ಅದನ್ನು ಇದೇ ಸಭೆಯಲ್ಲಿ ಖಂಡಿಸಲಾಯಿತು ಎನ್ನುವುದು ವಿಶೇಷ. ಅಲ್ಲದೆ "ನಕ್ಬಾ" ದಿನದಂದು ಇಸ್ರೇಲಿ ಗಡಿ ಮುರಿದು ಹೋಗಲು ಕರೆ ನೀಡಲಾಯಿತು. ಇಸ್ರೇಲಿ ದೌರ್ಜನ್ಯಗಳನ್ನು ಖಂಡಿಸುವ, ಪ್ಯಾಲೆಸ್ಟೈನ್ನರ ಸ್ವಾತಂತ್ರ್ಯ ಹಕ್ಕೊತ್ತಾಯ ಬೆಂಬಲಿಸುವ ಮತ್ತು ಈಜಿಪ್ಟ್ ಸೇರಿದಂತೆ ಎಲ್ಲಾ ಅರಬ್ ದೇಶಗಳಲ್ಲಿರುವ ನಿರಾಶ್ರಿತ ಪ್ಯಾಲೆಸ್ಟೈನ್ನರ ತಾಯ್ನಾಡಿಗೆ ಮರಳುವ ಹಕ್ಕು ಪ್ರತಿಪಾದಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಗಡಿ ಉಲ್ಲಂಘಿಸಿ ನುಗ್ಗುವ ಕಾರ್ಯಕ್ರಮವನ್ನು ಮಿಲಿಟರಿ ಜತೆ ಮಾತುಕತೆಗಳ ನಂತರ ಕೈ ಬಿಡಲಾಯಿತು. ಶಾಂತಿ ಸೂಚಕವಾಗಿ ಗಲಭೆಗಳಲ್ಲಿ ಬಂಧಿಸಲಾದ ಕಾರ್ಯಕರ್ತರನ್ನು ಬಿಡುವ ನಿರ್ಧಾರವನ್ನು ಮಿಲಿಟರಿ ಪ್ರಕಟಿಸಿತು. ಆದರೆ ನಕ್ಬಾ ದಿನ ಇಸ್ರೇಲಿ ರಾಯಬಾರ ಕಚೇರಿ ಮುಂದೆ ಸಾವಿರಕ್ಕೂ ಹೆಚ್ಚು ಜನ ಭಾರೀ ಪ್ರದರ್ಶನ ನಡೆಸಿದರು. ಇಸ್ರೇಲಿ ರಾಯಭಾರ ಕಚೇರಿಗೆ ನುಗ್ಗುವ ಪ್ರಯತ್ನ ನಡೆಯಿತು. ಇಸ್ರೇಲಿ ಬಾವುಟ ಸುಡಲಾಯಿತು. ಜನರನ್ನು ಚದುರಿಸಲು ಪೋಲಿಸರು ಅಶ್ರುವಾಯು ಪ್ರಯೋಗಿಸಿದರು.

ಜೋರ್ಡಾನಿನಲ್ಲೂ ದೊಡ್ಡ ಸಂಖ್ಯೆಯಲ್ಲಿ ಗಡಿ ಉಲ್ಲಂಘಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಗಿತ್ತು. ಆದರೆ ಜೋರ್ಡಾನ್ ಸೈನ್ಯ ಇದಕ್ಕೆ ಅವಕಾಶ ಕೊಡದೆ ಬಹಳ ಮೊದಲೇ ತಡೆದರು.

ಪ್ಯಾಲೆಸ್ಟೈನ್ ಸ್ವಾತಂತ್ರ್ಯಕ್ಕೆ ಅಭೂತಪೂರ್ವ ಬೆಂಬಲ

ಪ್ಯಾಲೆಸ್ಟೈನ್ ಜನತೆಗೆ ಒಂದು ತಾಯ್ನಾಡು ಒದಗಿಸುವ ಹೋರಾಟಕ್ಕೆ ಅರಬ್ ಜನತೆಯ ಬೆಂಬಲ ಯಾವಾಗಲೂ ಇತ್ತು ಎಂಬುದು ಎಲ್ಲರಿಗೂ ಗೊತ್ತು. ಆದರೆ ಅರಬ್ ಸರ್ಕಾರಗಳು ಬೇರೆ ಬೇರೆ ಸ್ವಾರ್ಥ-ಒತ್ತಡಗಳಿಗೆ ಒಳಗಾಗಿ ಅಮೆರಿಕ ಮತ್ತು ಇಸ್ರೇಲುಗಳ ಮಸಲತ್ತಿಗೆ ಬಲಿಯಾಗಿದ್ದರು. ತಮ್ಮ ಆಳುವವರನ್ನು ಧಿಕ್ಕರಿಸಿ ಗಡಿಗಳನ್ನು ಉಲ್ಲಂಘಿಸುವ ಮೂಲಕ ಅರಬ್ ಜನತೆ ತಮ್ಮ ಸರ್ಕಾರಗಳಿಗೂ, ಅಮೆರಿಕ-ಇಸ್ರೇಲುಗಳಿಗೂ ಎಚ್ಚರಿಕೆ ಕೊಟ್ಟಿದ್ದಾರೆ. ಮಿಲಿಟರಿ ದೌರ್ಜನ್ಯಗಳಿಂದ ಸ್ಥಾಪಿಸಿದ ಈ ಗಡಿಗಳನ್ನು ಅರಬ್ ಜನತೆ ಮಾನ್ಯ ಮಾಡುವುದಿಲ್ಲ. ಪ್ಯಾಲೆಸ್ಟೈನ್ ಜನತೆಯ ಸಮಸ್ಯೆಯನ್ನು ಈಗಲೇ ಬಗೆಹರಿಸಬೇಕು ಅಂತ. ಇದನ್ನು ಅರಬ್ ಜನತೆ ತನ್ನ ಪ್ರಜಾಸತ್ತಾತ್ಮಕ ಹೋರಾಟದ ಭಾಗವಾಗಿ ಕಂಡದ್ದು ಬಹಳ ಗಮನಾರ್ಹ ಸಂಗತಿ.

1948 ರ ಮೇ 15 ರಂದು ಪ್ಯಾಲೆಸ್ಟೈನ್ನರನ್ನು ನಿರ್ಗತಿಕರಾಗಿ ಮಾಡಿ ಮಿಲಿಟರಿ ಬಲದಿಂದ ಸ್ಥಾಪಿಸಿದಾಗ 7.6 ಲಕ್ಷ ಪ್ಯಾಲೆಸ್ಟೈನ್ನರಲ್ಲಿ, ಸುಮಾರು 6ಲಕ್ಷ ಜನ ನಿರಾಶ್ರಿತರಾಗಿ ನೆರೆಯ ದೇಶಗಳಲ್ಲಿ ನೆಲೆಸಿದರು. ಅದರಲ್ಲಿ ಹಲವರು ಇನ್ನೂ ನಿರಾಶ್ರಿತರ ಕ್ಯಾಂಪುಗಳಲ್ಲಿ ಬಾಗವಹಿಸುತ್ತಿದ್ದಾರೆ. ಈಗ ಸುಮಾರು 47 ಲಕ್ಷ ಪ್ಯಾಲೆಸ್ಟೈನ್ನರಲ್ಲಿ 13 ಲಕ್ಷ ಇಸ್ರೇಲಿನಲ್ಲಿ ತಮ್ಮ ತಾಯ್ನಾಡಿನಲ್ಲಿ ಎರಡನೇ ದರ್ಜೆಯ ಪ್ರಜೆಗಳಾಗಿ ಬದುಕುತ್ತಿದ್ದಾರೆ. ಉಳಿದವರು ನಿರಾಶ್ರಿತರಾಗಿ ನೆರೆಯ ದೇಶಗಳಲ್ಲಿ ಬದುಕುತ್ತಿದ್ದಾರೆ. ಎಂದು ಗಮನಿಸಿದಾಗ ಸಮಸ್ಯೆಯ ಭೀಕರತೆ ಅರ್ಥವಾಗುತ್ತದೆ. ○

ಕಠಿಣ ಹೋರಾಟ ನಮ್ಮ ಮುಂದಿದೆ....

ಪುಟ 9 ರಿಂದ

ನಡೆಸಿ ಕೊಡಬೇಕು ಮತ್ತು ಸದ್ಯದ ಮಿತಿಗಳೊಳಗೆ ಪರ್ಯಾಯ ಧೋರಣೆಗಳನ್ನು ರೂಪಿಸಿ, ಮುಂದಿಟ್ಟು ಜಾರಿಗೊಳಿಸಬೇಕು ಎಂದು ಪಕ್ಷದ ಕಾರ್ಯಕ್ರಮ ತಿಳಿಸುತ್ತದೆ. ಪಶ್ಚಿಮ ಬಂಗಾಲದ ಎಡರಂಗ ಸರಕಾರ ಈ ಗುರಿಯತ್ತ ಗಂಭೀರವಾಗಿ ಕೆಲಸ ಮಾಡಿದೆ ಎಂಬುದನ್ನು ಅದರ ಅನನ್ಯ ದಾಖಲೆ ತೋರಿಸುತ್ತಿದೆ. ಇಂತಹ ಒಂದು ಎಡ-ನೇತೃತ್ವದ ಸರಕಾರವನ್ನು ಕಳಕೊಂಡಿರುವುದು ಒಂದು ಗಂಭೀರ ಹಿನ್ನಡೆಯಾದರೂ, ಅದೊಂದು ಶಾಶ್ವತ ಮತ್ತು ಮೂಲಭೂತ ನಷ್ಟ ಎಂದು ನೋಡಲಾಗದು. ಸಿಪಿಐ(ಎಂ) ಸದಾ, ದುಡಿಯುವ ಜನತೆಯನ್ನು ಅವರದ್ದೇ ಸ್ವಂತ ವರ್ಗ ಮತ್ತು ಸಾಮೂಹಿಕ ಸಂಘಟನೆಗಳ ಮೂಲಕ ಸಂಘಟಿಸುವ ಮತ್ತು ಜನತೆಯ ಆಂದೋಲನಗಳನ್ನು ಹಾಗೂ ಹೋರಾಟಗಳನ್ನು ಕಟ್ಟಿ ಬೆಳೆಸಿ, ಆಮೂಲಕ ಅವರ ರಾಜಕೀಯ ಪ್ರಜ್ಞೆಯನ್ನು ಎತ್ತರಿಸುವುದರ ಮೇಲೆ ಒತ್ತು ನೀಡಿಕೊಂಡು ಬಂದಿದೆ. ಎಡ-ನೇತೃತ್ವದ ಸರಕಾರಗಳ ರಚನೆ ಈ ಪ್ರಕ್ರಿಯೆಯ ಫಲಿತಗಳು.

ಹೋರಾಟದ ದಿಕ್ಕಿನಲ್ಲಿ

ಸಿಪಿಐ(ಎಂ), ಈ ಚುನಾವಣಾ ಫಲಿತಾಂಶಗಳ ವಿಮರ್ಶಾತ್ಮಕ ಪರೀಕ್ಷಣೆಯ ನಂತರ, ಮೂಲ ವರ್ಗಗಳ ಪ್ರಶ್ನೆಗಳನ್ನು ಎತ್ತಿಕೊಂಡು, ದುಡಿಯುವ ಜನತೆಯ ಹಿತಗಳಿಗಾಗಿ ಹೋರಾಡುವ ದಿಕ್ಕನ್ನು ಹಿಡಿಯುತ್ತದೆ. ನವ-ಉದಾರವಾದಿ ಆರ್ಥಿಕ ಧೋರಣೆಗಳ ವಿರುದ್ಧ ಹೋರಾಟ, ಜನತೆಯ ಜೀವನಾಧಾರದ ರಕ್ಷಣೆ, ರಾಷ್ಟ್ರೀಯ ಸಾರ್ವಭೌಮತೆಯ ಮತ್ತು ಜಾತ್ಯಾತೀತತೆಯ ರಕ್ಷಣೆಯನ್ನು ಒಳಗೊಂಡಿರುವ ಎಡಶಕ್ತಿಗಳ ರಾಜಕೀಯ ವೇದಿಕೆ ಈಗಲೂ ಕೂಡ ಕಾಂಗ್ರೆಸ್ ಮತ್ತು ಬಿಜೆಪಿಯಂತಹ ಆಳುವ ವರ್ಗಗಳ ಪಕ್ಷಗಳ ವಿರುದ್ಧ ಇರುವ ಏಕೈಕ ಪರ್ಯಾಯ ರಾಜಕೀಯ ವೇದಿಕೆ.

ಪಶ್ಚಿಮ ಬಂಗಾಲದಲ್ಲಿ, ಬದಲಾದ ರಾಜಕೀಯ ಸನ್ನಿವೇಶದಲ್ಲಿ, ಸಿಪಿಐ(ಎಂ) ಕಳೆದ ಮೂರು ದಶಕಗಳಲ್ಲಿ ಎಡರಂಗದ ಆಳ್ವಿಕೆಯಲ್ಲಿ ಜನತೆ ಸಾಧಿಸಿದ ಗಳಿಕೆಗಳನ್ನು ರಕ್ಷಿಸುತ್ತದೆ. ಆಳುವ ಕೂಟದ ವರ್ಗಸ್ವರೂಪವನ್ನು ನೋಡಿದರೆ, ಭೂಸುಧಾರಣೆಗಳನ್ನು ಇಲ್ಲವಾಗಿಸುವ ಮತ್ತು ದುಡಿಯುವ ಜನತೆಯ ಗಳಿಕೆಗಳನ್ನು ಬುಡಮೇಲು ಮಾಡುವ ಪ್ರಯತ್ನಗಳು ನಡೆಯಲಿವೆ. ನಾವು ಭೂಸುಧಾರಣೆಗಳನ್ನು, ಬರ್ಗಾದಾರರ (ಭಾಗ ಬೆಳೆಗಾರರ) ಮತ್ತು ಕೃಷಿಕಾರ್ಮಿಕರ ಹಕ್ಕುಗಳನ್ನು ರಕ್ಷಿಸುತ್ತೇವೆ; ಕಾರ್ಮಿಕರನ್ನು ತಮ್ಮ ಹಕ್ಕುಗಳಿಗಾಗಿ ಹೋರಾಡಲು ಹಾಗೂ ಎಲ್ಲ ದುಡಿಯುವ ಜನವಿಭಾಗಗಳನ್ನು ಅವರ ಜೀವನಾಧಾರದ ರಕ್ಷಣೆಯಲ್ಲಿ ಇನ್ನೂ ಉತ್ತಮ ರೀತಿಯಲ್ಲಿ ಸಂಘಟಿಸಲಾಗುವುದು. ಜಾತ್ಯಾತೀತತೆ ಮತ್ತು ಕೋಮು ಸಾಮರಸ್ಯದ ಪರಂಪರೆಯನ್ನು ಕಾಪಾಡಿಕೊಳ್ಳಬೇಕಾಗುತ್ತದೆ ಮತ್ತು ಜನತೆಯ ಐಕ್ಯತೆ ಹಾಗೂ ಸಮಗ್ರತೆಯನ್ನು ಕದಡಲು ಯತ್ನಿಸುವ ವಿಭಜನಕಾರಿ ಶಕ್ತಿಗಳನ್ನು ಎದುರಿಸಿ ನಿಲ್ಲಬೇಕಾಗುತ್ತದೆ. ಇವನ್ನೆಲ್ಲ ಎಡ ಐಕ್ಯತೆಯನ್ನು ಬಲಗೊಳಿಸುವ ಮೂಲಕ ಸಾಧಿಸಲಾಗುವುದು.

ಚುನಾವಣೆಗಳ ನಂತರದಲ್ಲಿ, ತಕ್ಷಣದ ಕೆಲಸವೆಂದರೆ ಆದಾಗಲೇ ಪಶ್ಚಿಮ ಬಂಗಾಲದಲ್ಲಿ ದಾಳಿಗೊಳಗಾಗಿರುವ ಪಕ್ಷವನ್ನು, ಎಡರಂಗವನ್ನು ಮತ್ತು ಆಂದೋಲನವನ್ನು ರಕ್ಷಿಸುವುದು. ಚುನಾವಣಾ ಫಲಿತಾಂಶಗಳು ಪ್ರಕಟವಾದ ಕೂಡಲೇ ಪಕ್ಷದ ಮತ್ತು ಕಾರ್ಮಿಕ ಸಂಘಗಳ ಕಚೇರಿಗಳ ಮೇಲೆ ಹತ್ತಾರು ದಾಳಿಗಳು ನಡೆದಿವೆ. ಸಿಪಿಐ(ಎಂ) ಮತ್ತು ಎಡರಂಗದ ಕಾರ್ಯಕರ್ತರು ಮತ್ತು ಬೆಂಬಲಿಗರ ವಿರುದ್ಧ ಮರಣಾಂತಿಕ ಹಿಂಸಾಚಾರವನ್ನು ಹರಿಯ ಬಿಡಲಾಗಿದೆ. ಎರಡೇ ದಿನಗಳಲ್ಲಿ ಸಿಪಿಐ(ಎಂ)ನ ಇಬ್ಬರು ಮುಖಂಡರನ್ನು ಅಮಾನುಷವಾಗಿ ಹತ್ಯೆ ಮಾಡಲಾಗಿದೆ. ತೃಣಮೂಲ ಕಾಂಗ್ರೆಸ್ ಈ ಚುನಾವಣಾ ವಿಜಯವನ್ನು ಬಳಸಿಕೊಂಡು ಹಲವು ಸ್ಥಳಗಳಲ್ಲಿ ಸಿಪಿಐ(ಎಂ) ಮತ್ತು ಎಡರಂಗವನ್ನು ದೈಹಿಕವಾಗಿ ಮುಗಿಸಿಬಿಡಬೇಕೆಂದಿದೆ. ಇದನ್ನು ಪ್ರತಿರೋಧಿಸಿ ಹೋರಾಡಬೇಕಾಗಿದೆ. ಇಂತಹ ಹಿಂಸಾಚಾರದ ವಿರುದ್ಧ ಪಶ್ಚಿಮ ಬಂಗಾಲದ ಜನತೆಯ ಪ್ರಜಾಪ್ರಭುತ್ವ ಭಾವನೆಗಳನ್ನು ಜಾಗ್ರತಗೊಳಿಸಬೇಕಾಗಿದೆ. ಇಂತಹ ದಾಳಿಗಳನ್ನು ಹಿಮ್ಮೆಟ್ಟಿಸಿ ನಿಲ್ಲಲು ಸಮಸ್ತ ಪಕ್ಷ ಮತ್ತು ದೇಶದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಪಶ್ಚಿಮ ಬಂಗಾಲದ ಸಿಪಿಐ(ಎಂ) ಮತ್ತು ಎಡರಂಗದೊಡನೆ ದೃಢವಾಗಿ ನಿಲ್ಲಬೇಕಾಗಿದೆ.

ಕಾಂಗ್ರೆ ಮತ್ತು ಬಿಜೆಪಿ

ಕಾಂಗ್ರೆಸ್ಸು ಬಿಜೆಪಿ ಎರಡರೊಳು ನೋಡಿ
ವ್ಯತ್ಯಾಸ ಏನಿಲ್ಲ ಮರುಳಾಗಬೇಡಿ
ಕಾಂಗ್ರೆಸ್ ಉಳ್ಳವರ ಕಾಲೆಡೆಗೆ ಮತ್ತು
ಬಿಜೆಪಿ ತಮ್ಮವರ ಮಠ ಗುಡಿಯ ತೊತ್ತು

- ವಿಡಂಬಾರಿ

ಎಂಡೋಸಲ್ಫನ್ ಮೇಲೆ ಸುಪ್ರಿಂಕೋರ್ಟಿನ ನಿಷೇಧ

ಪುಟ 12 ರಿಂದ

ಕರಡು ತಿದ್ದುಪಡಿ ಮಸೂದೆಗಳನ್ನು ಸಂಸತ್ತಿನ ಮುಂದೆ ಇಟ್ಟಿದ್ದರೂ ಪಾಸು ಮಾಡಿಸಿಕೊಳ್ಳುವಲ್ಲಿ ಇದುವರೆಗೂ ವಿಫಲವಾಗಿದೆ. ಇದಕ್ಕೆ ವಿರೋಧ ಪಕ್ಷಗಳು ಕಾರಣವಲ್ಲ. ಈ ಬಗ್ಗೆ ಈಗ ಪಶ್ಚಿಮ ಬಂಗಾಲದ ಮುಖ್ಯಮಂತ್ರಿಗಳಾಗುತ್ತಿರುವ ರೈಲ್ವೆ ಮಂತ್ರಿಗಳೂ ಸೇರಿದಂತೆ ಯುಪಿಎ-2ರ ಒಳಗೇ ಇರುವ ಹಿಂಜರಿಕೆಗಳು ಕಾರಣ. ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ನ ಪುನರುಜ್ಜೀವನದ ಪ್ರಯತ್ನದ ಹಿನ್ನೆಲೆಯಲ್ಲಿ ಈ ಮಸೂದೆಗಳನ್ನು ಆದಷ್ಟು ಬೇಗ ಅಂತಿಮಗೊಳಿಸಬೇಕೆಂದು ಪ್ರಧಾನ ಮಂತ್ರಿಗಳು ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ ಈಗ ಹೇಳಿದ್ದಾರಂತೆ.

★

ಭ್ರಷ್ಟಾಚಾರದ ವಿರುದ್ಧ ವಿಶ್ವಸಂಸ್ಥೆಯ ಅಧಿನಿರ್ಣಯ

ಐದೂವರೆ ವರ್ಷಗಳ ನಂತರ ಊರ್ಜಿತ

ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ಜನವರಿ 2002ರಿಂದ ಐದು ಅಧಿವೇಶನಗಳಲ್ಲಿ ಚರ್ಚಿಸಿ, ಅಕ್ಟೋಬರ್ 31, 2003ರಂದು ಅಂಗೀಕರಿಸಿದ ಭ್ರಷ್ಟಾಚಾರದ ವಿರುದ್ಧ ನಿರ್ಣಯ ಸಂಖ್ಯೆ 58/4 ಡಿಸೆಂಬರ್ 14, 2005ರಂದು ಜಾರಿಗೆ ಬಂದಿತ್ತು. ಈ ಅಧಿನಿರ್ಣಯವನ್ನು ಭಾರತ ಸರಕಾರ ಕೊನೆಗೂ ಈ ವಾರ, ಐದೂವರೆ ವರ್ಷಗಳ ದೀರ್ಘ ವಿಳಂಬದ ನಂತರ ಅಂಗೀಕರಿಸಿದೆ. ಇದು ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕೆ ಯುಪಿಎ ಸರಕಾರದ ಬದ್ಧತೆಯನ್ನು ತೋರಿಸಿದೆ ಎಂದು ಪ್ರಧಾನ ಮಂತ್ರಿಗಳು ಹೇಳಿಕೊಂಡಿದ್ದಾರೆ. ಆದರೆ, ವಾಸ್ತವವಾಗಿ, ಈಗ ಹಗರಣಗಳ ಮೇಲೆ ಹಗರಣಗಳು ಬಯಲಾಗುತ್ತಿರುವಾಗ, ಇದರ ವಿರುದ್ಧ ತಾನೂ ಏನೋ ಮಾಡುತ್ತಿದ್ದೇನೆ ಎಂದು ತೋರಿಸಲು ಈಗ ಇದನ್ನು ಊರ್ಜಿತಗೊಳಿಸಲಾಗಿದೆ ಎಂಬುದು ವಿಶ್ಲೇಷಕರ ಅಭಿಪ್ರಾಯ.

★

ಮತ್ತೆ 'ಆದರ್ಶ' ಫೈಲುಗಳು ಕಾಣೆ!

ಭ್ರಷ್ಟಾಚಾರದ ವಿರುದ್ಧ ಹೋರಾಟಕ್ಕೆ ಬದ್ಧ ಎಂದು ಹೇಳುತ್ತಿರುವ ಯುಪಿಎ-2 ಸರಕಾರದ ಪರಿಸರ ಇಲಾಖೆಯ ಕಚೇರಿಯಲ್ಲೂ ಆದರ್ಶ ಹೌಸಿಂಗ್ ಸೊಸೈಟಿಗೆ ಸಂಬಂಧಪಟ್ಟ ಕಡತಗಳು ಕಾಣೆಯಾಗಿವೆ ಎಂದು ಸಿಬಿಐ ಅಧಿಕಾರಿಗಳು ಹೇಳಿದ್ದಾರೆ. ಕಳೆದ ವರ್ಷ ಮಹಾರಾಷ್ಟ್ರ ಸರಕಾರದ ನಗರಾಭಿವೃದ್ಧಿ ಇಲಾಖೆಯ ಕಚೇರಿಯಲ್ಲಿ ಕೆಲವು ಕಡತಗಳು ಕಾಣೆಯಾಗಿದ್ದು, ಈ ಸಂಬಂಧದಲ್ಲಿ ಮೂವರು ಅಧಿಕಾರಿಗಳನ್ನು ಬಂಧಿಸಲಾಗಿತ್ತು. ಈಗ ಆ 'ಕಾಣೆ' ಪ್ರಕ್ರಿಯೆ ದಿಲ್ಲಿಯನ್ನೂ ತಲುಪಿದೆ.

ಕರಾವಳಿ ನಿಯಂತ್ರಣ ವಲಯ ಕುರಿತ ರಾಜ್ಯ ಸರಕಾರಕ್ಕೆ ಪರಿಸರ ಇಲಾಖೆ ನೀಡಿರುವ ಪತ್ರ ಮತ್ತು ರಾಜ್ಯ ಸರಕಾರದ ಸೂಕ್ತ ಇಲಾಖೆಯನ್ನು ಸಂಪರ್ಕಿಸುವಂತೆ ಆದರ್ಶ ಹೌಸಿಂಗ್ ಸೊಸೈಟಿಗೆ ನೀಡಿರುವ ಪತ್ರಗಳು ಈಗ ಕಾಣೆಯಾಗಿವೆ. ಈ ಪತ್ರಗಳ ಪ್ರತಿಗಳನ್ನು ಪಡೆಯಲು ಸಿಬಿಐ ಅಧಿಕಾರಿಗಳು ಪರಿಸರ ಇಲಾಖೆಗೆ ಹೋದಾಗ ಇದು ಬೆಳಕಿಗೆ ಬಂದಿದೆ. ಈ ಬಗ್ಗೆ ಲಿಖಿತ ದೂರು ಕೊಡುವಂತೆ ಇಲಾಖೆಗೆ ಸಿಬಿಐ ಹೇಳಿದೆ ಎಂದು ವರದಿಯಾಗಿದೆ. ಕರಾವಳಿ ನಿಯಂತ್ರಣ ವಲಯದ ನಿಯಮಾವಳಿಗಳನ್ನು ಆದರ್ಶ ಸೊಸೈಟಿ ಉಲ್ಲಂಘಿಸಿರುವ ಹಿನ್ನೆಲೆಯಲ್ಲಿ ಈ ಪತ್ರಗಳು ಬೇಕಾಗಿದ್ದವು.

★

ಅಮೆರಿಕಾದೊಂದಿಗೆ 2000 ಕೋಟಿ ರೂ.ಗಳ ರಕ್ಷಣಾ ವ್ಯವಹಾರ

123=126 ಅಂದರೆ ಯುಪಿಎ-1 ಆಳ್ವಿಕೆಯಲ್ಲಿ ಭಾರತದೊಂದಿಗೆ ಅಮೆರಿಕಾ '123 ಒಪ್ಪಂದ' ಮಾಡಿಕೊಂಡದ್ದೇ 126 ಯುದ್ಧವಿಮಾನಗಳ ಭಾರೀ ಕಾಂಟ್ರಾಕ್ಟಿಗಾಗಿ ಎಂಬ ಆಪಾದನೆಯನ್ನು ಸಾಬೀತು ಮಾಡುವ ಅಮೆರಿಕನ್ ಆಳರಸರ ಗೋಳಾಟ ಇನ್ನೂ ನಿಂತಿಲ್ಲ. 11 ಬಿಲಿಯ ಡಾಲರುಗಳ ಯುದ್ಧ ವಿಮಾನ ಪೂರೈಕೆಯ ಕಾಂಟ್ರಾಕ್ಟ್ ತಮಗೇ ನೀಡದೆ ಭಾರತ ಒಂದು 'ಸದವಕಾಶ'ವನ್ನು ಕಳಕೊಂಡಿದೆ ಎಂದು ಅಮೆರಿಕಾದ ಸಹಾಯಕ ವಿದೇಶಾಂಗ ಕಾರ್ಯದರ್ಶಿ ರಾಬರ್ಟ್ ಬ್ಲೇಕ್ ಮತ್ತೊಮ್ಮೆ ತನ್ನ 'ಆಳವಾದ ನಿರಾಸೆ'ಯನ್ನು ತೋಡಿಕೊಂಡಿದ್ದಾರೆ.

ಈಗ ಇಂತವರನ್ನೆಲ್ಲ ಸಮಾಧಾನ ಪಡಿಸಲೋ ಎಂಬಂತೆ ಭಾರತ ಮತ್ತು ಅಮೆರಿಕಾ ನಡುವೆ ಇದುವರೆಗಿನ ಅತ್ಯಂತ ದೊಡ್ಡ ರಕ್ಷಣಾ ವ್ಯವಹಾರಕ್ಕೆ ಯುಪಿಎ-2 ಸರಕಾರದ ರಕ್ಷಣಾ ಇಲಾಖೆ ಅಸ್ತು ಎಂದಿದೆ ಎಂದು ವರದಿಯಾಗಿದೆ. 4.1 ಬಿಲಿಯ ಡಾಲರುಗಳ(ಸುಮಾರು 2000 ಕೋಟಿ ರೂ.ಗಳ) ಈ ವ್ಯವಹಾರವನ್ನು ಬುಟ್ಟಿಗೆ ಹಾಕಿಕೊಂಡ ನಂತರ ಅಮೆರಿಕಾ ಬಾಯಿ ಬಡಿದುಕೊಳ್ಳಲು ಇನ್ನೇನೂ ಕಾರಣವಿಲ್ಲ ಎಂದು ವಿಶ್ಲೇಷಕರು ಅಭಿಪ್ರಾಯ ಪಡುತ್ತಿದ್ದಾರೆ.

ಯುದ್ಧಸಾಮಗ್ರಿಗಳನ್ನು ಸಾಗಿಸುವ 10 ದೈತ್ಯ ಸಿ-17 ಗ್ಲೋಬ್ ಮಾಸ್ಟರ್-III ವಿಮಾನಗಳನ್ನು ಅಮೆರಿಕಾದಿಂದ ಖರೀದಿಸಲು 'ಅಂತಿಮ ಒಪ್ಪಿಗೆ'ಯನ್ನು ಈ ತಿಂಗಳು ರಕ್ಷಣೆ ಕುರಿತ ಸಂಪುಟ ಸಮಿತಿ ನೀಡಲಿದೆ ಎಂದು ವರದಿಯಾಗಿದೆ. ಇದು ಅಮೆರಿಕಾದ ಎಫ್‌ಎಂಎಸ್(ವಿದೇಶಿ ಮಿಲಿಟರಿ ಮಾರಾಟ) ಕಾರ್ಯಕ್ರಮದ ಅಡಿಯಲ್ಲಿ ಭಾರತ ಮತ್ತು ಅಮೆರಿಕಾ ಸರಕಾರಗಳ ನಡುವಿನ ನೇರ ವ್ಯವಹಾರ. ಈಗಾಗಲೇ ಅಸ್ತು ಎನ್ನಿಸಿಕೊಂಡಿರುವ ಅಮೆರಿಕಾದ(ಅಮೇರಿಕಾಕ್ಕೆ?) ಇತರ 'ಪ್ರೀತಿಯ ಕೊಡುಗೆ'ಗಳೆಂದರೆ, 3 ಬಿಲಿಯ ಡಾಲರುಗಳ 12 ಪಿ-18 ಪೊಸೈಡನ್ ಕರಾವಳಿ ಗಸ್ತು ವಿಮಾನಗಳು ಮತ್ತು 1.2 ಬಿಲಿಯ ಡಾಲರುಗಳ ಸಿ-103 ಜೆ 'ಸೂಪರ್ ಹರ್ಕುಲಿಸ್' ಪರೋಕ್ಷ ಕಾರ್ಯಾಚರಣೆಯ ಯುದ್ಧಸಾಮಗ್ರಿ ಸಾಗಣಿಕೆ ವಿಮಾನಗಳು. ಇಂತಹ ಇನ್ನೂ 6 ವಿಮಾನಗಳ ಪೂರೈಕೆಗೆ ಮಾತುಕತೆಗಳು ನಡೆಯುತ್ತಿವೆಯಂತೆ.

ಈ ನಡುವೆ 'ನಾವು ಅಮೆರಿಕನ್ನರಲ್ಲ' ಎಂದು ಪ್ರಧಾನ ಮಂತ್ರಿಗಳು ಉದ್ಗರಿಸಿದ್ದಾರೆ- ನಿಜ, ಇದು 11 ಬಿಲಿಯ ಡಾಲರುಗಳ ಕಾಂಟ್ರಾಕ್ಟ್ ಕಳಕೊಂಡ ಅಮೆರಿಕನ್ ಆಳರಸರ ಗೋಳಾಟದ ಬಗ್ಗೆ ಟಿಪ್ಪಣಿಯಲ್ಲ. ಅಫಘಾನಿಸ್ತಾನದ ಭೇಟಿಯ ವೇಳೆಗೆ ಪತ್ರಕರ್ತರು, ಭಾರತ ಕೂಡ ಪಾಕಿಸ್ತಾನದಲ್ಲಿ ತನಗೆ ಬೇಕಾದ ಭಯೋತ್ಪಾದಕರ ವಿರುದ್ಧ ಅಮೆರಿಕ ಒಸಾಮ ಬಿನ್ ಲಾಡೆನ್ ವಿರುದ್ಧ ನಡೆಸಿದಂತಹ ಕಾರ್ಯಾಚರಣೆಯನ್ನು ನಡೆಸುತ್ತದೆಯೇ ಎಂದು ಕೇಳಿದಾಗ ಪ್ರಧಾನಿಗಳು ಮಾಡಿರುವ ಟಿಪ್ಪಣಿಯಿದು.

JANASHAKTHI KANNADA VARA PATRIKE MAY 29, 2011 Price : Rs. 5/- RNI No. KARKAN /2006/17926 Posted on every Satuarday Postal Reg. No. RNP/KA/BGS 2078/2010-1
Posted at MBC Bangalore GPO

ರಾಜ್ಯಾದ್ಯಂತ ಸಂಚರಿಸುತ್ತಿರುವ 'ಸಮುದಾಯ'ದ ಜಾಥಾದ ಪೋಸ್ಟರ್ - ಭ್ರಷ್ಟಾಚಾರದ ಕುರಿತು

ಆದರ್ಶ, ಸತ್ಯಂ, ಕಾಮನ್ವೆಲ್ತ್ (ಸರ್ವರ ಸಂಪತ್ತು)


ಆಹಾ! ಹೊಲಸು ಹಗರಣಗಳಿಗೆ ಎಂತಹ ಸುಂದರ ಹೆಸರುಗಳು!

ಕಳೆದ ಕೆಲವು ತಿಂಗಳುಗಳಲ್ಲಿ ಬಯಲಿಗೆ ಬಂದ ಪ್ರಮುಖ ಹಗರಣಗಳು



ಭಾರತದ ಜಿಡಿಪಿ ಬೆಳವಣಿಗೆ ದರ ಉತ್ತಮವಾಗಿದೆ, 8% ದಷ್ಟಿದೆ.

- ಆದರೆ ಈ ಜಿಡಿಪಿಯಲ್ಲಿ 31% ಪಾಲು ಕೇವಲ 54 ಡಾಲರ್ ಶತಕೋಟ್ಯಾಧಿಪತಿಗಳದ್ದು. (ಇವರಲ್ಲಿ 49 ಮಂದಿ ಕಳೆ ಒಂದು ದಶಕದಲ್ಲಿ ಇಷ್ಟು ಆಸ್ತಿ ಮಾಡಿಕೊಂಡವರು)



- ಅಧಿಕೃತ ಬಡತನದ ರೇಖೆಯ ಕೆಳಗಿರುವವರು 48%.
- ದಿನಕ್ಕೆ 20 ರೂ ಆದಾಯದವರ ಪ್ರಮಾಣ 77%
- ಸದಾ ಹಸಿದಿರುವವರು 23 ಕೋಟಿ ಜನ

ಭ್ರಷ್ಟಾಚಾರ ಮತ್ತು ಬೆಲೆ ಏರಿಕೆ ವಿರುದ್ಧ ಸಮುದಾಯ ಸಾಂಸ್ಕೃತಿಕ ಜಾಥಾ ಸಮಾರೋಪ

ಮೇ 28, 2011 ಶನಿವಾರ ಸಂಜೆ 5.30ಕ್ಕೆ ಸಂಸ ಬಯಲು ರಂಗ ಮಂದಿರ
ರವೀಂದ್ರ ಕಲಾಕ್ಷೇತ್ರ ಹಿಂಭಾಗ, ಬೆಂಗಳೂರು

ಮುಖ್ಯ ಅತಿಥಿಗಳು :
ಮಾನ್ಯ ನ್ಯಾಯಮೂರ್ತಿ ಶ್ರೀ ಎನ್.ಸಂತೋಷ್ ಹೆಗ್ಡೆ, ಸನ್ಮಾನ್ಯ ಲೋಕಾಯುಕ್ತರು, ಕರ್ನಾಟಕ
ಡಾ.ಕೆ.ಮರುಳಸಿದ್ದಪ್ಪ, ಮಾಜಿ ಅಧ್ಯಕ್ಷರು. ಕರ್ನಾಟಕ ನಾಟಕ ಅಕಾಡಮಿ
ಪ್ರೊ.ಜಿ.ಕೆ.ಗೋವಿಂದರಾವ್, ಪ್ರಗತಿಪರ ಚಿಂತಕರು
ಡಾ.ಮೀನಾಕ್ಷಿ ಬಾಳಿ, ಉಪಾಧ್ಯಕ್ಷರು ಸಮುದಾಯ ರಾಜ್ಯ ಸಮಿತಿ.
ಟಿ.ಎನ್.ಸೀತಾರಾಂ, ಖ್ಯಾತ ಕಿರು ತೆರೆ ನಿರ್ದೇಶಕರು
ಶ್ರೀ.ಆರ್.ಕೆ.ಹುಡಗಿ, ಅಧ್ಯಕ್ಷರು. ಸಮುದಾಯ ರಾಜ್ಯ ಸಮಿತಿ

ಪ್ರಮಾಣ ವಚನ ಭೋದನೆ :
ಶ್ರೀ ಎಚ್.ಎಸ್.ದೊರೆಸ್ವಾಮಿ ಹಿರಿಯ ಸ್ವಾತಂತ್ರ ಹೋರಾಟಗಾರರು

ಹಾಡುಗಳು : ಜನಾರ್ಧನ(ಜನ್ನಿ), ಪಿಚ್ಚಳ್ಳಿ ಶ್ರೀನಿವಾಸ, ಜೋಗಿಲ ಸಿದ್ದರಾಜು, ಲಿಂಗರಾಜು, ಅನಂತ ನಾಯಕ್
ಬೀದಿ ನಾಟಕ : "ಬೇತಾಳ ಕಥೆ" ಮಾಲೂರು ಸಮುದಾಯ

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027
Editor: S.Y.GURUSHANTH